17 January 2026 Saturday

SINCE 1957

ವರ್ತಮಾನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

ಭಾವನಾಂತರಂಗ

ನಿರ್ಧಾರ ಎನ್ನುವುದು ಎಷ್ಟು ಪ್ರಬಲವೆಂದರೆ, ಒಂದು ಕ್ಷಣದಲ್ಲಿ ತೆಗೆದುಕೊಂಡ ನಿರ್ಧಾರ ನಮ್ಮ ಜೀವನದ ದಾರಿಯನ್ನೇ ಬದಲಾಯಿಸುತ್ತದೆ!

-ಸ್ನೇಹಾ ಆನಂದ್

ಒಂದೊಳ್ಳೆ ಮಾತು

*ಇರುವುದರೊಂದಿಗೆ ಹೊಂದಿಕೊಂಡರೆ ಪ್ರತಿ ಕ್ಷಣವು ಸ್ವರ್ಗ ಇಲ್ಲದಿರುವುದಕ್ಕೆ ಹಂಬಲಿಸಿದರೆ ಪ್ರತಿ ಹೆಜ್ಜೆಯೂ ನರಕ

ಮೈಲಾರ ಸಾವಿತ್ರಿಬಾಯಿ

info.varthaman@gmail.com

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 77 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

ಸುತ್ತೂರು ಜಾತ್ರೆಯಲ್ಲಿ ವೈವಾಹಿಕ ಜೀವನಕ್ಕೆ ಕಾಲಿಟ್ಟ 135 ಜೋಡಿ

ಮೈಸೂರು: ಸುತ್ತೂರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವದ ಅಂಗವಾಗಿ ಸುತ್ತೂರಿನಲ್ಲಿ ಶುಕ್ರವಾರ ಆಯೋಜಿಸಿದ್ದ ಸಾಮಾಹಿಕ ವಿವಾಹದಲ್ಲಿ 11 ಅಂತರ್ಜಾತಿ, ಮೂರು ಮರು ಮದುವೆ ಸೇರಿದಂತೆ 135 ಜೋಡಿಗಳು ಶ್ರೀಗಳು, ಗಣ್ಯರ ಸಮ್ಮುಖದಲ್ಲಿ ವೈವಾಹಿಕ ಜೀವನಕ್ಕೆ ಕಾಲಿಟ್ಟಿದ್ದಾರೆ.

ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರು ವಧು-ವರರಿಗೆ ಮಾಂಗಲ್ಯ ವಿತರಿಸಿ ಆಶೀರ್ವಾದ ಮಾಡಿದರು. ಸುತ್ತೂರು ಮಠದಿಂದ ಉಚಿತವಾಗಿ ವಧುವಿಗೆ ಸೀರೆ, ಕುಪ್ಪಸ, ಮಾಂಗಲ್ಯ ಹಾಗೂ ಕಾಲುಂಗುರ ಮತ್ತು ವರನಿಗೆ ಪಂಚೆ, ವಲ್ಲಿ, ಷರ್ಟ್‌ಗಳನ್ನು ವಿತರಣೆ ಮಾಟಲಾಯಿತು.

ಕನಕಪುರ ದೇಗುಲಮಠದ ಮುಮ್ಮಡಿ ನಿರ್ವಾಣ ಸ್ವಾಮೀಜಿ, ತಿರುವನಂತಪುರಂನ ಬಿಷಪ್ ಗೇಬ್ರಿಯಲ್ ಮಾರ್ ಗ್ರೆಗೋರಿಯಸ್, ಮೈಸೂರು ಧರ್ಮಪ್ರಾಂತ್ಯದ ಬಿಷಪ್ ಫ್ರಾನ್ಸಿಸ್ ಸೆರಾವ್ ಸೇರಿದಂತೆ ಹರಗುರು ಚರ ಮೂರ್ತಿಗಳು, ಪೋಷಕರು, ಬಂಧುಗಳು, ಮಿತ್ರರು ಹಾಗೂ ನೂರಾರು ಸಂಖ್ಯೆಯಲ್ಲಿ ಸೇರಿದ್ದ ಭಕ್ತರ ಸಮ್ಮುಖದಲ್ಲಿ ಸತಿಪತಿಗಳಾದರು.

ವಿವಾಹದಲ್ಲಿ 4 ವೀರಶೈವ ಲಿಂಗಾಯತ, 84 ಪರಿಶಿಷ್ಟ ಜಾತಿ, 15 ಪರಿಶಿಷ್ಟ ಪಂಗಡ, 21 ಹಿಂದುಳಿದ ವರ್ಗ, 11 ಅಂತರ್ಜಾತಿ, 3 ಅಂಗವಿಕಲ, 5 ತಮಿಳುನಾಡಿನ ಜೋಡಿಗಳು ಮಧ್ಯಾಹ್ನ 12.10ಕ್ಕೆ ವಿವಾಹವಾದರು. ಅವರಿಗೆ ಪ್ರತಿಜ್ಞಾವಿಧಿ ಬೋಧಿಸಲಾಯಿತು. ಕನ್ನಡ, ಮಲಯಾಳಂ, ತಮಿಳು ಸೇರಿದಂತೆ ಬಹುಭಾಷಿಕ ದಂಪ ತಿಗಳೂ ಇದ್ದದ್ದು ಜಾತ್ರೆಯ ವಿವಾಹ ಮಹೋತ್ಸವದ ವೈವಿಧ್ಯವನ್ನೂ ಸಾರಿತು.

ನಂತರ ಮೊಳಗಿದ ಡಾ.ರಾಜ್ ಕುಮಾರ್ ಅವರ 'ಹೊಸಬಾಳಿನ ಹೊಸಿಲಲಿ ನಿಂತಿರುವ ಹೊಸ ಜೋಡಿಗೆ ಶುಭವಾಗಲಿ' ಚಲನಚಿತ್ರ ಗೀತೆಯೇ ನವ ದಂಪತಿಗಳಿಗೆ ಮಂಗಳವನ್ನು ಕೋರಿತು. ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ, ಶಾಸಕ ಆರ್.ವಿ.ದೇಶಪಾಂಡೆ ಮತ್ತಿತರರು ಪಾಲ್ಗೊಂಡಿದ್ದರು.

ಸುತ್ತೂರು ಮಠದಿಂದ ಆಯೋಜಿಸಿದ್ದ ಸಾಮೂಹಿಕ ವಿವಾಹ ವ್ಯವಸ್ಥೆಯಲ್ಲಿ ಈವರೆಗೆ 3500ಕ್ಕೂ ಹೆಚ್ಚು ಮಂದಿ ಸತಿಪತಿಗಳಾಗಿದ್ದಾರೆ.

ಸಿದ್ದರಾಮಯ್ಯ 'ಬುದ್ಧಿವಂತ ನಡೆ!'

ಮುಖ್ಯಮಂತ್ರಿ ಕುರ್ಚಿ ಉಳಿಸಿಕೊಳ್ಳಲು ಅಧಿವೇಶನ ಬಳಕೆ: ಬಿ.ವೈ.ವಿಜಯೇಂದ್ರ

ಬೆಳಗಾವಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಮುಖ್ಯಮಂತ್ರಿ ಕುರ್ಚಿ ಉಳಿಸಿಕೊಳ್ಳಲು ವಿಶೇಷ ವಿಧಾನಮಂಡಲ ಅಧಿವೇಶನವನ್ನು ಬಳಸಿಕೊಳ್ಳುತ್ತಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆರೋಪಿಸಿದರು.

ಸುದ್ದಿಗಾರರ ಜೊತೆ ಶುಕ್ರವಾರ ಮಾತನಾಡಿದ ಅವರು, ಸಿದ್ದರಾಮಯ್ಯ ಅವರ 'ಬುದ್ಧಿವಂತ ನಡೆ', ಮುಖ್ಯಮಂತ್ರಿ ತಮ್ಮ ಕುರ್ಚಿಯನ್ನು ಉಳಿಸಿಕೊಳ್ಳಲು ಶಾಸಕಾಂಗದ ಅಧಿವೇಶನವನ್ನು ಬಳಸಿಕೊಳ್ಳುತ್ತಿದ್ದಾರೆ. ಅಧಿವೇಶನವನ್ನು ಹೆಚ್ಚಿನ ಸಮಯ ಕಳೆಯಲು ಮತ್ತು ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರನ್ನು ಬದಿಗಿಡಲು ಬಳಸುತ್ತಿದ್ದಾರೆ ಎಂದು ಟೀಕಿಸಿದರು.

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಕೇಂದ್ರದಲ್ಲಿರುವ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧದ ತನ್ನ ದ್ವೇಷದ ಭಾಗವಾಗಿ ವಿಶೇಷ ಅಧಿವೇಶನವನ್ನು ಕರೆದಿದೆ ಎಂದು ಆರೋಪಿಸಿದರು.

ಈ ಕ್ರಮವು ರಾಜ್ಯ ಶಾಸಕಾಂಗದ ಪಾವಿವನ್ನು ಹಾಳು ಮಾಡುವ ಪ್ರಯತ್ನವಾಗಿದೆ. ರಾಜ್ಯದ ಅಭಿವೃದ್ಧಿ ಮತ್ತು ಜನರ ಕಲ್ಯಾಣಕ್ಕೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸಬೇಕಾದ ಸದನವನ್ನು ಜನರನ್ನು ಕೇಂದ್ರದ ವಿರುದ್ಧ ಎತ್ತಿಕಟ್ಟಲು ಬಳಸಲಾಗುತ್ತಿದೆ ಎಂದು ಆರೋಪಿಸಿದರು.

ಬಿಜೆಪಿ ಈ ಪ್ರಯತ್ನಗಳನ್ನು ಖಂಡಿಸುತ್ತದೆ. ಸಂವಿಧಾನ ಮತ್ತು ಒಕ್ಕೂಟ ವ್ಯವಸ್ಥೆಯ ಬಗ್ಗೆ ಆಗಾಗ್ಗೆ ಮಾತನಾಡುವ ಸಿದ್ದರಾಮಯ್ಯ, ಒಕ್ಕೂಟ ವ್ಯವಸ್ಥೆಯನ್ನು ದುರ್ಬಲಗೊಳಿಸಲು ಪಿತೂರಿ ನಡೆಸುತ್ತಿರುವಂತೆ ತೋರುತ್ತಿದೆ. ರಾಜ್ಯದ ಹಿತಾಸಕ್ತಿಗಳನ್ನು ಕಾಪಾಡುವ ಬದಲು, ಮುಖ್ಯಮಂತ್ರಿ ಕಳೆದ ಎರಡೂವರೆ ವರ್ಷಗಳಿಂದ ಕೇಂದ್ರದ ಮೇಲೆ ಪದೇ ಪದೇ ದಾಳಿ ಮಾಡಿ ವಿಭಜನೆ ಸೃಷ್ಟಿಸುತ್ತಿದ್ದಾರೆ ಎಂದು ಟೀಕಿಸಿದರು.

ಸರ್ಕಾರ ಅಧಿಕಾರಕ್ಕೆ ಬಂದು ಸುಮಾರು ಮೂರು ವರ್ಷಗಳಾಗಿದ್ದರೂ ಸರ್ಕಾರ ಏನು ಸಾಧಿಸಿದೆ ಮತ್ತು ಅದು ಜಾರಿಗೆ ತಂದಿರುವ ಜನಪರ ಯೋಜನೆಗಳ ಬಗ್ಗೆ ಮುಖ್ಯಮಂತ್ರಿಗಳು ಪುಟ 2ಕ್ಕೆ

ಕೊಚ್ಚಿಹೋದ ಕೈ, ಕಮಲಕ್ಕೆ ಜೈ!

ಮುಂಬೈ ಮಹಾನಗರಪಾಲಿಕೆ ಚುನಾವಣೆಯಲ್ಲಿ ಶಿವಸೇನೆಗೆ ಹಿನ್ನಡೆ

ಮುಂಬೈ: ಬೃಹತ್ ಮುಂಬೈ ಮಹಾನಗರಪಾಲಿಕೆ (ಬಿಎಂಸಿ) ಚುನಾವಣೆಯಲ್ಲಿ ಶಿವಸೇನೆಯ ಕೋಟೆಯನ್ನು ಮಹಾ ಯುತಿ ಒಕ್ಕೂಟ ಛಿದ್ರಗೊಳಿಸಿದೆ. ಈ ಮೂಲಕ ಶಿವ ಸೇನೆಯ 30 ವರ್ಷಗಳ ಆಡಳಿತ ಕೊನೆಯಾಗಿದೆ. ಮೊದಲ ಬಾರಿಗೆ ಬಿಜೆಪಿ ಅಧಿಕಾರ ಹಿಡಿಯಲಿದೆ.

ಬಿಎಂಸಿಯ 227 ಸ್ಥಾನಗಳ ಪೈಕಿ ಬಿಜೆಪಿ ನೇತೃ ತ್ವದ ಮಹಾಯುತಿ ಕೂಟ 122, ಕಾಂಗ್ರೆಸ್ 21, ಶಿವಸೇನಾ ಉದ್ಧವ್ ಠಾಕ್ರೆ ಬಣ 69, ಎನ್‌ಸಿಪಿ (ಅಜಿತ್) 1 ಹಾಗೂ ಇತರರು 12 ಸ್ಥಾನಗಳಲ್ಲಿ ಗೆಲುವು ಸಾಧಿಸಿದ್ದಾರೆ. ಬಿಜೆಪಿ ನಿರೀಕ್ಷೆಗೂ ಮೀರಿ ಗೆಲುವು ಸಾಧಿಸಿದೆ. 2017ರ ಚುನಾವಣೆಯಲ್ಲಿ ಬಿಜೆಪಿ ಮತ್ತು ಶಿವ ಸೇನೆ ಮೈತ್ರಿ ಮಾಡಿಕೊಂಡು ಚುನಾವಣೆ ಎದುರಿಸಿತ್ತು. ಶಿವಸೇನೆ 84, ಬಿಜೆಪಿ 51 ಸೇರಿ ಒಟ್ಟು 166 ವಾರ್ಡ್‌ಗಳನ್ನು ಗೆದ್ದುಕೊಂಡು ಅಧಿಕಾರಕ್ಕೆ ಏರಿತ್ತು. ಕಾಂಗ್ರೆಸ್ 31, ಎನ್‌ಪಿ 9, ಎಂಎನ್‌ಎಸ್ 7, ಸಮಾಜವಾದಿ ಪಕ್ಷ 6, ಎಐಎಂಐಎ 2, ಅಖಿಲ ಭಾರತೀಯ ಸೇನಾ 1, ಪಕ್ಷೇತರರು 5 ಮಂದಿ ಗೆದ್ದಿದ್ದರು. 2020ರ ವಿಧಾನ ಸಭಾ ಚುನಾವಣೆಯ ನಂತರ ಪುಟ 2ಕ್ಕೆ

ನಾಯಕತ್ವ ಬಹಿರಂಗ ಚರ್ಚೆ ವಿಷಯವಲ್ಲ: ಡಿ.ಕೆ.ಶಿವಕುಮಾರ್



ದೆಹಲಿ: ರಾಜ್ಯದ ನಾಯಕತ್ವ ಬದಲಾವಣೆ ಬಹಿರಂಗ ಚರ್ಚೆಯ ವಿಷಯವಲ್ಲ. ಮುಖ್ಯಮಂತ್ರಿ, ಹೈಕಮಾಂಡ್ ನಡುವೆ ನಡೆಯುವ ಚರ್ಚೆ ವಿಚಾರ. ಈ ಬಗ್ಗೆ ಮಾಧ್ಯಮಗಳ ಜೊತೆ ಮಾತನಾಡಲು ಸಾಧ್ಯವಿಲ್ಲ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಅಭಿಪ್ರಾಯಪಟ್ಟರು.

ದೆಹಲಿಯಲ್ಲಿ ಮಾಧ್ಯಮಗಳ ಪ್ರಶ್ನೆಗಳಿಗೆ ಶುಕ್ರವಾರ ಪ್ರತಿಕ್ರಿಯೆ ನೀಡಿದರು. ಪುಟ 2ಕ್ಕೆ

ಡಿಕೆಶಿ ದೆಹಲಿ ಭೇಟಿ ಬಗ್ಗೆ ಗೊತ್ತಿಲ್ಲ: ಸಿಎಂ

ತುಮಕೂರು: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ದೆಹಲಿ ಭೇಟಿ ವಿಚಾರ ನನಗೆ ಗೊತ್ತಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮಾರ್ಮಿಕವಾಗಿ ಪ್ರತಿಕ್ರಿಯಿಸಿದರು. ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಡಿ.ಕೆ.ಶಿವಕುಮಾರ್ ದೆಹಲಿಗೆ ಏತಕ್ಕೆ ಪುಟ 2ಕ್ಕೆ

ಬಿಜೆಪಿ ಜೊತೆ ಮೈತ್ರಿಗೆ ಜೆಡಿಎಸ್ ಮುಕ್ತ

*ಜಿಬಿಎ, ಸ್ಥಳೀಯ ಸಂಸ್ಥೆಗಳಲ್ಲಿಯೂ ಜಂಟಿಗೆ ಸಿದ್ಧ: ಎಚ್.ಡಿ.ಕುಮಾರಸ್ವಾಮಿ

ಬೆಂಗಳೂರು: ಜಿಬಿಎ ಮತ್ತು ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಬಿಜೆಪಿ ಜೊತೆ ಮೈತ್ರಿ ಮಾಡಿಕೊಳ್ಳುವ ವಿಚಾರದಲ್ಲಿ ಜೆಡಿಎಸ್ ಮುಕ್ತವಾಗಿದೆ ಎಂದು ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ತಿಳಿಸಿದರು.

ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಮೈತ್ರಿ ಮಾಡಿಕೊಳ್ಳುವುದಿಲ್ಲ ಎಂದು ಈ ಹಿಂದೆ ಎಚ್.ಡಿ.ದೇವೇಗೌಡ ಹೇಳಿಕೆ ನೀಡಿದ್ದರು. ಈಗ ಮುಂಬೈ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಬಿಜೆಪಿ ಜಯಭೇರಿ ಹಿನ್ನೆಲೆಯಲ್ಲಿ ಕುಮಾರಸ್ವಾಮಿ ಉಲ್ಟಾ ಮಾತನಾಡಿದ್ದಾರೆ.

ಈ ಕುರಿತು ಸ್ಪಷ್ಟನೆ ನೀಡಿದ ಕುಮಾರಸ್ವಾಮಿ ಅವರು, ಜಿಬಿಎ-ಸ್ಥಳೀಯ ಸಂಸ್ಥೆಗಳಲ್ಲಿ ಮೈತ್ರಿ ವಿಷಯದಲ್ಲಿ ನಾವು ಮುಕ್ತವಾಗಿದ್ದೇವೆ. ನಮ್ಮಿಂದ ಮೈತ್ರಿ ಗೊಂದಲಕ್ಕೆ ಎಡೆ ಮಾಡಿಕೊಡಬಾರದು ಎಂಬುದು ನಮ್ಮ ಅಭಿಪ್ರಾಯ. ಮುಂದಿನ ದಿನಗಳಲ್ಲಿ ಯಾವ ರೀತಿ ರಾಜಕೀಯ ಬೆಳವಣಿಗೆ ನಡೆಯಲಿದೆ, ಪುಟ 2ಕ್ಕೆ

ಅಭಿವೃದ್ಧಿ ಹೆಸರಿನಲ್ಲಿ ಲೂಟಿ

ಕಾಂಗ್ರೆಸ್‌ನ ದುರಾಡಳಿತ ರಾಜ್ಯದಿಂದ ಹೋಗಬೇಕು ಎಂಬುದು ನಮ್ಮ ಪಕ್ಷದ ಉದ್ದೇಶ. ಅದಕ್ಕೆ ನಾವು ತಯಾರಿದ್ದೇವೆ. ಮೈತ್ರಿ ವಿಷಯದಲ್ಲಿ ಮುಕ್ತವಾದ ಅವಕಾಶ ಇಟ್ಟುಕೊಂಡಿದ್ದೇವೆ. ಆ ಸಮ ಯಕ್ಕೆ ಏನಾಗಬೇಕು ಎಂದು ತೀರ್ಮಾನಿಸುತ್ತೇವೆ.

ಬೆಂಗಳೂರಿನಲ್ಲಿ ಅನೇಕ ವರ್ಷಗಳಿಂದ ಅಭಿವೃದ್ಧಿ ಸ್ಥಗಿತವಾಗಿದೆ. ಅಭಿವೃದ್ಧಿ ಹೆಸರಿನಲ್ಲಿ ಬರೀ ಲೂಟಿ ಆಗಿದೆ. ಕಸ ವಿಲೇವಾರಿ, ಗುಂಡಿ ಮುಚ್ಚುವುದು, ಯಾವ ಯಾವ ರೀತಿ ಪಕ್ಷಗಳ ನಡವಳಿಕೆ, ಪಕ್ಷದ ಕೊಡುಗೆ ಏನು ಅಂತ ಇಟ್ಟುಕೊಂಡು ಜನರ ಬಳಿ ಹೋಗಬೇಕು. ಈ ಬಗ್ಗೆ ಮುಂದೆ ನೋಡೋಣ ಎಂದು ಎಚ್.ಡಿ.ಕುಮಾರ ಸ್ವಾಮಿ ತಿಳಿಸಿದರು.

ರಾಹುಲ್ ಗಾಂಧಿ ಆಕ್ರೋಶ

ಮುಂಬೈ: ಮುಂಬೈ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಶಾಯಿ ಗುರುತು ಅಳಿಸಿ ಹೋಗುತ್ತಿದೆ ಎಂಬ ಶೀರ್ಷಿಕೆಯ ಮಾಧ್ಯಮ ವರದಿ ಹಂಚಿಕೊಂಡಿರುವ ರಾಹುಲ್ ಗಾಂಧಿ ಅವರು, ಚುನಾವಣಾ ಆಯೋಗ ಜನರನ್ನ



ತಪ್ಪು ದಾರಿಗೆ ಎಳೆಯುತ್ತಿರುವುದು ನಮ್ಮ ಪ್ರಜಾಪ್ರಭುತ್ವದ ವಿಶ್ವಾಸ ಕುಸಿಯಲು ಕಾರಣವಾಗಿದೆ ಎಂದು ಆಕ್ರೋಶ ಹೊರಹಾಕಿದ್ದಾರೆ. ಅಲ್ಲದೇ ಮತ ಕಳ್ಳತನ ರಾಷ್ಟ್ರ ವಿರೋಧಿ ಕೃತ್ಯ ಅಂತಲೂ ಅಸಮಾಧಾನ ಹೊರಹಾಕಿದ್ದಾರೆ. ಈ ಮೂಲಕ ಮಹಾರಾಷ್ಟ್ರ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲೂ ಕಾಂಗ್ರೆಸ್ ವೋಟ್ ಚೋರಿ ಆರೋಪ ಮಾಡಿದೆ.

ಆಸ್ತಿ ವಿವಾದ: ತನ್ನ ತಮ್ಮನನ್ನೇ 28 ಬಾರಿ ಇರಿದು ಕೊಂದ ಅಣ್ಣ

ಮಂಡ್ಯ: ಆಸ್ತಿ ವಿವಾದದಲ್ಲಿ ತನ್ನ ಮಕ್ಕಳೊಂದಿಗೆ ಸೇರಿ ಅಣ್ಣನೇ ತನ್ನ ತಮ್ಮನನ್ನು 28 ಬಾರಿ ಇರಿದು ಕೊಂದ ಘಟನೆ ಮಂಡ್ಯದ ಮಾಯಪ್ಪನಹಳ್ಳಿಯಲ್ಲಿ ಶುಕ್ರವಾರ ನಡೆದಿದೆ.

ಮಂಡ್ಯದ ಯೋಗೇಶ್ (30) ಕೊಲೆಯಾದ ವ್ಯಕ್ತಿ. ಈತನ ಅಣ್ಣ ಲಿಂಗರಾಜು, ಮಕ್ಕಳಾದ ಭರತ್, ದರ್ಶನ್ ಅವರಿಂದ ಕೊಲೆ ನಡೆದಿದೆ. ಕೊಲೆ ಬಳಿಕ ಆರೋಪಿಗಳು ತಲೆಮರೆಸಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಲಿಂಗರಾಜು ಹಾಗೂ ಕೊಲೆಯಾದ ಯೋಗೇಶ್ ನಡುವೆ ಹಲವು ವರ್ಷಗಳಿಂದ ಆಸ್ತಿ ಕಲಹವಿತ್ತು. ಆಸ್ತಿ ವಿಷಯಕ್ಕೆ ಆಗಾಗ ಕುಟುಂಬದಲ್ಲಿ ಜಗಳ ನಡೆಯುತ್ತಿತ್ತು. ಅದೇ ಕಾರಣಕ್ಕೆ ಯೋಗೇಶ್ ಕೊಲೆಯಾಗಿರುವ ಶಂಕೆ ವ್ಯಕ್ತವಾಗಿದೆ.

ಟ್ಯಾಂಕರ್ ಪಲ್ಟಿ: ಪಾಮ್ ಆಯಿಲ್‌ಗೆ ಮುಗಿಬಿದ್ದ ಜನ!

ಬಳ್ಳಾರಿ: ಪಾಮ್ ಆಯಿಲ್ ಸಾಗಿಸುತ್ತಿದ್ದ ಟ್ಯಾಂಕರ್ ಲಾರಿ ರಸ್ತೆ ತಿರುವಿನಲ್ಲಿ ಚಾಲಕನ ನಿಯಂತ್ರಣ ತಪ್ಪಿ ಪಲ್ಟಿಯಾದ ಹಿನ್ನೆಲೆಯಲ್ಲಿ ಪಾಮ್ ಆಯಿಲ್ ಸೋರಿಕೆ ಆಗುತ್ತಿತ್ತು. ಪಾಮ್ ಆಯಿಲ್ ಅನ್ನು ತುಂಬಿಕೊಳ್ಳಲು ಜನರು ತಮ್ಮ ಮನೆಯ ಪಾತ್ರೆಗಳನ್ನು ತೆಗೆದುಕೊಂಡು ಬಂದು ಮುಗಿಬಿದ್ದಿದ್ದರು.

ತಾಲ್ಲೂಕಿನ ದೇವಲಾಪುರ ಕಣಿವೆ ಮಾರೆಮ್ಮ ದೇವಸ್ಥಾನದ ಸಮೀಪ ಲಾರಿ ಉರುಳಿ ಬಿದ್ದಿತ್ತು. ಲಾರಿಯಿಂದ ಎಣ್ಣೆ ಸೋರಿಕೆಯಾದ ಸುದ್ದಿ ಸುತ್ತಮುತ್ತಲಿನ ಗ್ರಾಮಗಳಿಗೆ ಪುಟ 2ಕ್ಕೆ

ಮಹಿಳಾ ಅಧಿಕಾರಿಗೆ ಕುಮಾರಸ್ವಾಮಿ ಬೆದರಿಕೆ ಹಾಕಿದ್ದರು: ಎಚ್‌ಸಿಎಂ ಕಿಡಿ

ಬೆಂಗಳೂರು: ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ತಮ್ಮ ಅಧಿಕಾರಾವಧಿಯಲ್ಲಿ ಮಹಿಳಾ ಅಧಿಕಾರಿಗೆ ಹೆದರಿಸಿದ್ದರು ಎಂದು ಸಚಿವ ಎಚ್.ಸಿ.ಮಹದೇವಪ್ಪ ಕಿಡಿಕಾರಿದರು.

ರಾಜ್ಯ ಸರ್ಕಾರದಲ್ಲಿ ಅಧಿಕಾರಿಗಳಿಗೆ ರಕ್ಷಣೆ ಇಲ್ಲ ಎಂಬ ಕುಮಾರಸ್ವಾಮಿ ಹೇಳಿಕೆ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, ಯಾರ ಅವಧಿಯಲ್ಲಿ ಅಧಿಕಾರಿಗಳಿಗೆ ಏನು ಆಗಿದೆ ಅಂತಾ ದಾಖಲೆ ತೆಗದು ನೋಡಲಿ ಆಗ ಗೊತ್ತಾಗುತ್ತದೆ. ಯಾರೇ ಆದರೂ ಆ ರೀತಿ ಮಾಡಿದರೆ ಕ್ರಮ ತೆಗೆದುಕೊಳ್ತೀವಿ ಎಂದು ಹೇಳಿದರು.

ಸಿದ್ದರಾಮಯ್ಯ ಲೀಸ್ ಬೇಸ್ಡ್ ಸಿಎಂ ಎಂಬ ಕುಮಾರಸ್ವಾಮಿ ಹೇಳಿಕೆ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಸಿದ್ದರಾಮಯ್ಯ ಏಳೂವರೆ ವರ್ಷ ಸಿಎಂ ಆಗಿ ಇತಿಹಾಸ ಸೃಷ್ಟಿ ಮಾಡಿದ್ದಾರೆ. ಅದು ಯಾವ ರೀತಿ ಅವರು ಲೀಸ್ ಬೇಸ್ಡ್ ಸಿಎಂ ಆಗ್ತಾರೆ. ಲೀಸ್ ಅಂದರೆ ಮೂರು ನಾಲ್ಕು ತಿಂಗಳು ಅಷ್ಟೆ ಇವೆಲ್ಲವೂ ಹಾಸ್ಯಾಸ್ಪದ ಮಾತುಗಳು ಅಷ್ಟೆ. ಕುಮಾರಸ್ವಾಮಿ ಎಷ್ಟು ವರ್ಷ ಸಿಎಂ ಆಗಿ ಕೆಲಸ ನಿರ್ವಹಿಸಿದ್ದರು? ಎಂದು ಪ್ರಶ್ನಿಸಿದರು. ಪುಟ 2ಕ್ಕೆ

ಮೈಸೂರಿನಲ್ಲಿ ಸಂಕ್ರಾಂತಿ ಸಂಭ್ರಮ

ಮೈಸೂರು: ಮೈಸೂರು ನಗರ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಮಕರ ಸಂಕ್ರಾಂತಿ ಹಬ್ಬವನ್ನು ಸಡಗರ, ಸಂಭ್ರಮದಿಂದ ಆಚರಿಸಲಾಯಿತು. ವರ್ಷದ ಮೊದಲ ಹಬ್ಬವನ್ನು ಜನರು ಆಚರಿಸಿದರು. ಸಂಕ್ರಾಂತಿ ಪ್ರಯುಕ್ತ ಗ್ರಾಮೀಣ ಸೊಗಡು ಎಲ್ಲೆಡೆ ಕಂಡುಬಂತು.

ನಗರದ ಸಿದ್ದಲಿಂಗಪುರ ರಸ್ತೆಯಲ್ಲಿ ಗ್ರಾಮದ ರಾಸುಗಳಿಗೆ ಬಣ್ಣ ಹಾಗೂ ಬಗೆಯ ಹೂಗಳಿಂದ ಅಲಂಕರಿಸಿ ರೈತರು ಕಿಚ್ಚು ಹಾಯಿಸಿ ಸುಗ್ಗಿ ಹಬ್ಬವನ್ನು ಬಹಳ ಸಂಭ್ರಮದಿಂದ ಆಚರಿಸಿದರು. ಅಲ್ಲದೆ ನಗರದ ವಿವಿಧ ಬಡಾವಣೆಗಳಲ್ಲೂ ಗೋಪಾಲಕರು ತಮ್ಮ ದನಕರುಗಳಿಗೆ ಅರಿಶಿನ, ಹೂವು ಹಾಕಿ ಶೃಂಗಾರ ಮಾಡಿ ಕಿಚ್ಚು ಹಾಯಿಸಿ ಸಂಭ್ರಮಿಸಿದರು. ಪುಟ 2ಕ್ಕೆ

ಭಾರತದ ಅಸ್ಮಿತೆಯೇ ನಮ್ಮ ಧರ್ಮ, ಸಂಸ್ಕೃತಿ

ಸಚಿವೆ ಶೋಭಾ ಕರಂದ್ಲಾಜೆ ಅಭಿಮತ । ರಾಜ್ಯಮಟ್ಟದ ಭಜನಾ ಮೇಳ

ಮೈಸೂರು: ಭಾರತದ ಆತ್ಮ ಆಧ್ಯಾತ್ಮ. ಆಧ್ಯಾತ್ಮ ಹೊರತು ಪಡಿಸಿದ ಭಾರತವಿಲ್ಲ. ಭಾರತದ ಅಸ್ತಿತ್ವವೇ ನಮ್ಮ ಧರ್ಮ, ಸಂಸ್ಕೃತಿ ಎಂದು ಕೇಂದ್ರ ಕಾರ್ಮಿಕ, ಉದ್ಯೋಗ, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಅಭಿಪ್ರಾಯಪಟ್ಟರು.

ಸುತ್ತೂರಿನಲ್ಲಿ ನಡೆಯುತ್ತಿರುವ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವದಲ್ಲಿ ಶುಕ್ರವಾರ ರಾಜ್ಯಮಟ್ಟದ ಭಜನಾ ಮೇಳ, ದೇಸಿ ಪುಟ 2ಕ್ಕೆ

> ಸುತ್ತೂರು ಮಠ ಅಗಾಧವಾಗಿ ಬೆಳೆದಿದೆ. ಯಾವುದೇ ಮತ ಬೇಧವಿಲ್ಲದೆ ಲಕ್ಷಾಂತರ ವಿದ್ಯಾರ್ಥಿಗಳಿಗೆ ಪಠ್ಯ ಶಿಕ್ಷಣದೊಂದಿಗೆ ಮೌಲ್ಯ ಶಿಕ್ಷಣ ಕೊಡುತ್ತಿದೆ. ಸಾವಿರಾರು ಮಂದಿ ಮಠದ ಸಂಸ್ಥೆಗಳಲ್ಲಿ ಬದುಕು ಕಟ್ಟಿಕೊಂಡಿದ್ದಾರೆ.
>
> **ಶೋಭಾ ಕರಂದ್ಲಾಜೆ** ಕೇಂದ್ರ ಸಚಿವೆ

ಸಂಸ್ಕೃತಿ, ಪರಂಪರೆ ಪಸರಿಸಿದ ಶ್ರೀಗಳು

12 ವರ್ಷದ ಬಾಲಕನಾಗಿದ್ದಾಗ ಪೀಠಾಧಿಪತಿಯಾದ ಶ್ರೀಗಳು ಇಂದು ವಿಶ್ವಕ್ಕೆ ನಮ್ಮ ಸಂಸ್ಕೃತಿ ಪರಂಪರೆ ಪಸರಿಸಿದ್ದಾರೆ. ಬಹಳಷ್ಟು ವರ್ಷಗಳ ಕಾಲ ನಮ್ಮ ಪರಂಪರೆ ಕ್ಷೀಣಿಸಲು ಕಾರಣ ನಾವು ಬೇರೆ ದೇಶಗಳಿಗೆ ತಿಳಿಸದಿರುವುದು. ಇದನ್ನು ಅರಿತ ಸ್ವಾಮಿ ವಿವೇಕಾನಂದರು ಅಮೆರಿಕಾದ ಷಿಕಾಗೋ ಸಮ್ಮೇಳನದಲ್ಲಿ ನಮ್ಮ ಪರಂಪರೆ ಮಹತ್ವ ಸಾರಿದರು. ಅದನ್ನು ಸುತ್ತೂರು ಶ್ರೀಗಳು ಮುಂದುವರಿಸಿದ್ದಾರೆ. ಮುಸ್ಲಿಂ ಬಾಹುಳ್ಯದ ದುಬೈ, ಚರ್ಚ್‌ಗಳೇ ಮುಚ್ಚುತ್ತಿರುವ ಅಮೆರಿಕಾದಲ್ಲೂ ದೇವಸ್ಥಾನ ಪುಟ 2ಕ್ಕೆ

ವಾಕಥಾನ್ ಯಶಸ್ಸಿಗೆ ಕೈಜೋಡಿಸಿದವರಿಗೆ ಕೃತಜ್ಞತೆ

ಫಿಟ್ ಮೈಸೂರು ವಾಕಥಾನ್ ಯಶಸ್ವಿಯಾದ ಹಿನ್ನೆಲೆ । ಪ್ರಮುಖರು, ವಿವಿಧ ಸಂಘ-ಸಂಸ್ಥೆಗಳಿಗೆ ಅಭಿನಂದನೆ

ಮೈಸೂರು: ಮೈಸೂರು ವಿಶ್ವವಿದ್ಯಾನಿಲಯದ ನೇತೃತ್ವ ದಲ್ಲಿ ನಗರದಲ್ಲಿ ಇತ್ತೀಚೆಗೆ ನಡೆಸಲಾದ ಫಿಟ್ ಮೈಸೂರು ವಾಕಥಾನ್‌ಗೆ ಅಭೂತಪೂರ್ವ ಯಶಸ್ಸು ದೊರೆತ ಹಿನ್ನೆಲೆಯಲ್ಲಿ ವಾಕಥಾನ್ ಯಶಸ್ಸಿಗೆ ಕಾರಣರಾದವರಿಗೆ ಕೃತಜ್ಞತೆ ಸಲ್ಲಿಸಲಾಯಿತು.

ನಗರದ ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ನಡೆದ ಸಮಾರಂಭದಲ್ಲಿ ಫಿಟ್ ಮೈಸೂರು ವಾಕಥಾನ್ ಆಯೋಜನೆ ಹಾಗೂ ಅದರ ಯಶಸ್ಸಿಗೆ ಎಲ್ಲಾ ರೀತಿಯಲ್ಲೂ ಸಹಕರಿಸಿದ ಹಲವು ಪ್ರಮುಖರು ಹಾಗೂ ವಿವಿಧ ಸಂಘ-ಸಂಸ್ಥೆಗಳಿಗೆ ಅಭಿನಂದನೆ ಸಲ್ಲಿಸಲಾಯಿತು. ಕಾರ್ಯಕ್ರಮದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಎನ್.ಕೆ.ಲೋಕನಾಥ್ ಅವರು ಪ್ರಶಂಸನಾ ಪತ್ರವನ್ನು ನೀಡಿ ಅಭಿನಂದಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಎನ್.ಕೆ.ಲೋಕನಾಥ್, ಮೈಸೂರು ನಗರವನ್ನು ಸ್ವಚ್ಛ, ಹಸಿರು ಹಾಗೂ ಸಮರ್ಥ

ನಗರವನ್ನಾಗಿಸಲು ಎಲ್ಲರ ಸಹಕಾರ ಅಗತ್ಯವಿದೆ. ಈ ನಿಟ್ಟಿನಲ್ಲಿ ಫಿಟ್ ಮೈಸೂರು ವಾಕಥಾನ್ ಮೂಲಕ ಮೊದಲ ಹೆಜ್ಜೆ ಇರಿಸಿದ್ದು, ಇದೇ ಪ್ರಥಮ ಬಾರಿಗೆ ಮೈಸೂರು ವಿವಿ ಹಲವು ಸಂಘ ಸಂಸ್ಥೆಗಳ ಸಹಕಾರದಿಂದ ಇಂತಹ ದೊಂದು ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿದೆ. ಮುಂದೆ ಹಸಿರು ಮೈಸೂರು, ಜೂ.21ಕ್ಕೆ ಯೋಗ ಮೈಸೂರು ಸೇರಿದಂತೆ ಮೈಸೂರು ವಿವಿ ಹಲವು ಕಾರ್ಯಕ್ರಮಗಳನ್ನು ಆಯೋಜಿಸಲು ಸನ್ನದ್ಧವಾಗಿದೆ ಎಂದು ಹೇಳಿದರು.

ಮೈಸೂರು ವಿವಿ ಕುಲಸಚಿವೆ ಎಂ.ಕೆ. ಸವಿತಾ ಮಾತನಾಡಿ, ಫಿಟ್ ಮೈಸೂರು ವಾಕಥಾನ್ ಯಶಸ್ವಿಗೆ ಸಂಘ-ಸಂಸ್ಥೆಗಳೊಂದಿಗೆ ಜನಪ್ರತಿನಿಧಿಗಳು, ಅಧಿಕಾರಿಗಳ ಪ್ರೋತ್ಸಾಹ ಕಾರಣವಾಗಿದ್ದು, ಪ್ರಕೃತಿ ಕೂಡ ನಮಗೆ ಸಾಥ್ ನೀಡಿತು. ಮುಂದೆಯೂ ಈ ದಿನಗಳಲ್ಲೂ ಹಲವು ಕಾರ್ಯಕ್ರಮಗಳನ್ನು ನಡೆಸಲಾಗುವುದು ಎಂದರು.

ಜೆಎಸ್‌ಎಸ್ ಸಮೂಹ ಸಂಸ್ಥೆಗಳ ಮುಖ್ಯಸ್ಥರಾದ ಶ್ರೀಹರಿ ದ್ವಾರಕನಾಥ್ ಮಾತನಾಡಿ, ಮೈಸೂರಿನಲ್ಲಿ ಶುಚಿ, ಆರೋಗ್ಯವಂತ ಸಮಾಜವನ್ನು ನಿರ್ಮಿಸುವ ಹಲವು ವರ್ಷಗಳ ಕನಸನ್ನು ಫಿಟ್ ಮೈಸೂರು ವಾಕಥಾನ್ ಮೂಲಕ ಮೈಸೂರು ವಿಶ್ವವಿದ್ಯಾನಿಲಯ ನನಸಾಗಿದೆ ಎಂದು ಹೇಳಿದರು.

ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್ ಮಾತನಾಡಿ, ಫಿಟ್ ಮೈಸೂರು ಯಶಸ್ವಿಯಾಗಿದ್ದು, ಜನರ ಆರೋಗ್ಯ ಕಾಪಾಡುವ ಹಾಗೂ ಸ್ವಚ್ಛತೆ ಕಾಪಾಡುವಲ್ಲಿ ಪ್ರತಿ ವಾರ್ಡ್‌ಗಳಲ್ಲಿ ಕಾರ್ಯಕ್ರಮ ರೂಪಿಸಲಾಗುವುದು ಎಂದರು. ಕಾರ್ಯಕ್ರಮದಲ್ಲಿ ಮೈಸೂರು ವಿವಿ ಕುಲಸಚಿವ ಎಸ್. ನಾಗರಾಜು, ಜಿಮ್ ಅಸೋಸಿಯೇಷನ್‌ನ ಹರ್ಷ, ಜೆಎಸ್‌ಎಸ್ ಸಂಸ್ಥೆಯ ಶ್ರೀರಾಮ್, ಮೈಸೂರು ವಿವಿಯ ವಿವಿಧ ವಿಭಾಗದ ನಿರ್ದೇಶಕರಾದ ಜ್ಯೋತಿ, ಅಮೃತೇಶ್, ಮಂಟೇಲಿಂಗ ಸ್ವಾಮಿ, ಗುರುಲಿಂಗ ಸಿದ್ದಯ್ಯ, ಸಂಘ ಸಂಸ್ಥೆಗಳ ಪ್ರಮುಖರಾದ ಸಮರ್ಥ್, ಶ್ರೀವತ್ಸ ಮಂಜುನಾಥ್, ವೆಂಕಟೇಶ್, ಪ್ರತಿನಿಧಿ ದಿನಪತ್ರಿಕೆ ಪ್ರಧಾನ ಸಂಪಾದಕ ಸಿ.ಕೆ. ಮಹೇಂದ್ರ, ಕಾರ್ಯನಿರ್ವಾಹಕ ಸಂಪಾದಕ ಧರ್ಮಾಪುರ ನಾರಾಯಣ್, ಜೆಎಸ್‌ಎಸ್‌ನ ರೂಪಶ್ರೀ, ಸರಳ ಇತರರಿದ್ದರು.

ಮೊದಲ ಪುಟದಿಂದ

ಸಿದ್ದರಾಮಯ್ಯ 'ಬುದ್ಧಿವಂತ ನಡೆ!'

ಚರ್ಚಿಸುವುದು ಸೂಕ್ತ ಎಂದು ಅವರು ಹೇಳಿದರು. ಜೆಡಿಎಸ್ ನಾಯಕ ಮತ್ತು ಕೇಂದ್ರ ಸಚಿವ ಎಚ್‌ಡಿ ಕುಮಾರಸ್ವಾಮಿ ರಾಜ್ಯ ರಾಜಕೀಯಕ್ಕೆ ಮರಳುವ ಸೂಚನೆ ನೀಡಿದ್ದಾರೆ ಎಂಬ ವರದಿ ಕುರಿತಾದ ಪ್ರಶ್ನೆಗೆ ಉತ್ತರಿಸಿದ ವಿಜಯೇಂದ್ರ, ಅದರಲ್ಲಿ ಯಾವುದೇ ತಪ್ಪಿಲ್ಲ. ಕುಮಾರಸ್ವಾಮಿ ರಾಜ್ಯದ ಅಭಿವೃದ್ಧಿಗೆ ಕೊಡುಗೆ ನೀಡಿದ್ದಾರೆ ಎಂದು ಹೇಳಿದರು.

ಬಳ್ಳಾರಿಯಲ್ಲಿ ಇತ್ತೀಚೆಗೆ ನಡೆದ ಹಿಂಸಾಚಾರದ ಕುರಿತು ಕಾಂಗ್ರೆಸ್ ಸರ್ಕಾರವನ್ನು ಗುರಿಯಾಗಿಸಿಕೊಂಡು ಬಳ್ಳಾರಿಯಿಂದ ಬೆಂಗಳೂರಿಗೆ ಬಿಜೆಪಿ ಪಾದಯಾತ್ರೆ ನಡೆಸಲಾಗುತ್ತಿದೆ. ಪಕ್ಷದೊಳಗೆ ಯಾವುದೇ ಗೊಂದಲವಿಲ್ಲ. ಪಕ್ಷದ ಕೇಂದ್ರ ನಾಯಕತ್ವದೊಂದಿಗೆ ಸಮಾಲೋಚಿಸಿದ ನಂತರ ಯಾವುದೇ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಹೇಳಿದರು.

ಆಸ್ತಿ ವಿವಾದ: ತನ್ನ ತಮ್ಮನನ್ನೇ 28 ಬಾರಿ ಇರಿದು ಕೊಂದ ಅಣ್ಣ

ಜ.21 ರಂದು ಯೋಗೇಶ್ ಮದುವೆ ನಿಗದಿಯಾಗಿತ್ತು. ಮದುವೆ ಆಹ್ವಾನ ಪತ್ರದಲ್ಲಿ ಅಣ್ಣನ ಹೆಸರನ್ನೂ ಹಾಕಿ ಊರಿಗೆಲ್ಲ ಪತ್ರಿಕೆ ಹಂಚಿಕೆ ಮಾಡಿದ್ದ. ದುರಾದೃಷ್ಟವಶಾತ್ ಅದೇ ಅಣ್ಣನಿಂದ ಯೋಗೇಶ್ ಹತ್ಯೆಯಾಗಿದ್ದಾನೆ. ಕೆರಗೋಡು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಕೊಲೆ ನಡೆದಿದೆ. ತಲೆಮರೆಸಿಕೊಂಡಿರುವ ಆರೋಪಿಗಳ ಪತ್ತೆಗಾಗಿ ಪೊಲೀಸರು ಬಲೆ ಬೀಸಿದ್ದಾರೆ.

ಟ್ಯಾಂಕರ್ ಪಲ್ಟಿ: ಪಾಮ್ ಆಯಿಲ್‌ಗೆ ಮುಗಿಬಿದ್ದ ಜನ!

ಹರಡುತ್ತಿದ್ದಂತೆ ಜನರು ಬಕೆಟ್, ಪ್ಲಾಸ್ಟಿಕ್ ಬಿಂದಿಗೆ, ಡಬ್ಬ ವಿವಿಧ ಪಾತ್ರೆಗಳನ್ನು ಹಿಡಿದು ಸ್ಥಳಕ್ಕೆ ಧಾವಿಸಿದರು. ಸ್ಥಳಕ್ಕೆ ಆಗಮಿಸಿದ ಪೊಲೀಸರು ಜನರನ್ನು ನಿಯಂತ್ರಿಸಲು ಹರಸಾಹಸಪಟ್ಟರು. ವಾಹನ ಸಂಚಾರವೂ ಕೆಲಕಾಲ ಅಸ್ತವ್ಯಸ್ತಗೊಂಡಿತು.

ಬಿಜೆಪಿ ಜೊತೆ ಮೈತ್ರಿಗೆ ಜೆಡಿಎಸ್ ಮುಕ್ತ

ಸ್ಥಳೀಯವಾಗಿ ಬಿಜೆಪಿ ನಾಯಕರ ತೀರ್ಮಾನ ಏನು? ಇದೆಲ್ಲವನ್ನು ನೋಡಿಕೊಂಡು ತೀರ್ಮಾನ ಮಾಡ್ತೀವಿ ಎಂದು ಹೇಳಿದರು. ಮುಂಬೈ ಪಾಲಿಕೆ ಚುನಾವಣೆಯಲ್ಲಿ ಬಿಜೆಪಿ ಮೈತ್ರಿ ಕೂಟ ಗೆಲುವು ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ನಿನ್ನೆಯೇ ಎಕ್ಸಿಟ್ ಪೋಲ್‌ನಲ್ಲಿ ಮುಂಬೈನಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲಿದೆ ಅಂತ ಮಾಧ್ಯಮಗಳೇ ಹೇಳಿದ್ದವು. ಅದರಂತೆ ಮುಂಬೈನಲ್ಲಿ ಬಿಜೆಪಿ ಮತ್ತು ಮೈತ್ರಿ ಪಕ್ಷಗಳು ಅಧಿಕಾರಕ್ಕೆ ಬಂದಿದೆ. ಈ ಗೆಲುವಿಗೆ ಪ್ರಧಾನಿ ಮೋದಿ, ಮಹಾರಾಷ್ಟ್ರ ಸಿಎಂಗೆ ಅಭಿನಂದನೆ ಸಲ್ಲಿಸಿದ್ದೇನೆ ಎಂದು ತಿಳಿಸಿದರು.

ಮಹಾರಾಷ್ಟ್ರ ಫಲಿತಾಂಶ ಪಂಚ ರಾಜ್ಯ ಚುನಾವಣೆ ಮೇಲೆ ಪರಿಣಾಮ ಬೀರಲಿದೆಯಾ ಎಂಬ ಪ್ರಶ್ನೆಗೆ ಮಹಾರಾಷ್ಟ್ರ ಚುನಾವಣೆ ಬೇರೆ. ಬೇರೆ ರಾಜ್ಯದಲ್ಲಿ ನಡೆಯುವ ಚುನಾವಣೆ ಬೇರೆ. ತಮಿಳುನಾಡು, ಪಶ್ಚಿಮ ಬಂಗಾಳದಲ್ಲಿ ಬೇರೆ ಬೇರೆ ರೀತಿ ಚುನಾವಣೆ ನಡೆಯುತ್ತದೆ. ಅಮಿತ್ ಶಾ, ಮೋದಿ ಅವರು ಪಶ್ಚಿಮ ಬಂಗಾಳದಲ್ಲಿ ಅಧಿಕಾರಕ್ಕೆ ಬರಬೇಕೆಂದು ಸಂಘಟನೆಯಲ್ಲಿ ಬಹಳ ಮುಂದೆ ಇದ್ದಾರೆ ಎಂದು ಹೇಳಿದರು.

ರಾಹುಲ್ ಗಾಂಧಿ ಆಕ್ರೋಶ

ಸದ್ಯ ವೈರಲ್ ಆಗಿರುವ ವಿಡಿಯೋಗಳಲ್ಲಿ ಅಸಿಟೋನ್‌ನಂತಹ ರಾಸಾಯನಿಕಗಳನ್ನ ಬಳಸಿ ಶಾಯಿಯನ್ನು ಹೇಗೆ ಅಳಿಸಬಹುದು ಎಂಬುದನ್ನು ತೋರಿಸಲಾಗಿದೆ.

ಭಾರತದ ಅಸ್ಮಿತೆಯೇ ನಮ್ಮ ಧರ್ಮ, ಸಂಸ್ಕೃತಿ

ಆಟಗಳು, ಸೋಬಾನೆ ಪದ, ರಾಗಿ ಬೀಸುವ ಸ್ಪರ್ಧೆ ಹಾಗೂ ರಂಗೋಲಿ ಸ್ಪರ್ಧೆ ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ಧರ್ಮ, ಸಂಸ್ಕೃತಿಯೇ ದೇಶದ ಆತ್ಮ. ಆಧ್ಯಾತ್ಮ, ಆಚಾರ ವಿಚಾರ, ಹಬ್ಬ ಹರಿದಿನಗಳು ದೇಶದ ಆತ್ಮದಲ್ಲಿ ಬೆರೆತಿವೆ. ಸುತ್ತೂರು ಮಠ ಕೇವಲ ಕರ್ನಾಟದಲ್ಲಿ ಮಾತ್ರವಲ್ಲದೆ ಅಮೆರಿಕಾ, ಮಾರಿಷಸ್, ದುಬೈನಲ್ಲೂ ದೇವಸ್ಥಾನ ನಿರ್ಮಿಸಿ ನಮ್ಮ ಸಂಸ್ಕೃತಿ, ಆಧ್ಯಾತ್ಮ, ಪರಂಪರೆಯನ್ನು ವಿಶ್ವಕ್ಕೆ ಪಸರಿಸುವ ಕೆಲಸ ಮಾಡುತ್ತಿದೆ ಎಂದು ಶ್ಲಾಘಿಸಿದರು.

ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಠದ ಕೆಲಸಗಳ ಜತೆಗೆ ಈ ಭಾಗದ ಗ್ರಾಮೀಣ ಜನತೆಗೆ ಅಗತ್ಯ ಮಾಹಿತಿ ಜ್ಞಾನವನ್ನೂ ನೀಡುವ ಮಹತ್ಕಾರ್ಯ ಮಾಡುತ್ತಿದ್ದಾರೆ. ಜಾತ್ರೆಯಲ್ಲಿ ಸರ್ಕಾರದ ಸಂಸ್ಥೆಗಳ ಮಾಹಿತಿ ಇದೆ. ಸರ್ಕಾರವೇ ಎಲ್ಲವನ್ನೂ ಮಾಡಲು ಸಾಧ್ಯವಿಲ್ಲ. ಹೀಗಾಗಿ ಶ್ರೀಮಠ ಸರ್ಕಾರದ ಕಾರ್ಯಕ್ರಮಗಳನ್ನು ಮಠದ ಮೂಲಕ ಜನರಿಗೆ ತಲುಪಿಸುತ್ತಿದೆ ಎಂದು ಹೇಳಿದರು. ಸುತ್ತೂರು ಜಾತ್ರೆಗೆ ಬರುವುದೇ ಖುಷಿಯ ಸಂಗತಿ ಹಾಗೂ ಹೆಮ್ಮೆ. ಇಲ್ಲಿ ನಮಗೆ ಬೇಕಾದ್ದನ್ನು ಖರೀದಿಸುವುದರೊಂದಿಗೆ ಬುದ್ದಿಯನ್ನೂ ಕೊಂಡೊಯ್ಯಬಹುದು. ಜಾತ್ರೆಯಲ್ಲಿ ವಸ್ತು ಪ್ರದರ್ಶನ, ಗ್ರಾಮೀಣ ಕ್ರೀಡೆ, ಯೋಗ, ಕುಸ್ತಿ, ಆರೋಗ್ಯ ಸೇರಿದಂತೆ ಹತ್ತು ಹಲವು ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಯಾವ್ಯಾವ ಕ್ಷೇತ್ರದಲ್ಲಿ ಆಸಕ್ತಿ ಇದೆ ಅವರು ತಮ್ಮ ನೆಚ್ಚಿನ ಕ್ಷೇತ್ರದಲ್ಲಿ ಜ್ಞಾನ ಪಡೆದುಕೊಳ್ಳಬಹುದು. ಎಂದರು.

ಸಂಸದ ತೇಜಸ್ವಿ ಸೂರ್ಯ ಮಾತನಾಡಿ, ಸಮಾಜದಲ್ಲಿ ಯಾವ ಯಾವ ಆಯಾಮಗಳಲ್ಲಿ ಕೆಲಸ ಮಾಡಬಹುದು ಎಂಬುದಕ್ಕೆ ಸುತ್ತೂರು ಮಠ ದೊಡ್ಡ ಉದಾಹರಣೆ. ಶಿಕ್ಷಣ ಕ್ಷೇತ್ರ ಮಾತ್ರವಲ್ಲದೆ ರೈತರಿಗೆ ಬೇಕಾಗುವ ಹಲವು ಕಾರ್ಯಗಳನ್ನು ಶ್ರೀಮಠ ಮಾಡಿದೆ. ನೀರಿನ ಅಗತ್ಯತೆ ಅರಿತು, ಸರ್ಕಾರದ ಗಮನಕ್ಕೆ ತಂದು ಈ ಭಾಗದ ಸುತ್ತಮುತ್ತಲ ಗ್ರಾಮದ ಕೆರೆಗಳನ್ನು ತುಂಬಿಸುವ ಭಗೀರಥ ಪ್ರಯತ್ನವನ್ನು ಶ್ರೀಗಳು ಮಾಡಿದ್ದಾರೆ. ಚಿಕ್ಕ ಮಕ್ಕಳಿನಿಂದ ದೊಡ್ಡವರವರೆಗೂ ಶಿಕ್ಷಣ, ಆರೋಗ್ಯ, ಸಂಗೀತ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲೂ ಆದರ್ಶ ಪ್ರಾಯವಾಗಿ ಕೆಲಸ ಮಾಡುತ್ತಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉಡುಪಿಯ ಸೋದೆ ಮಠದ ವಿಶ್ವವಲ್ಲಭ ತೀರ್ಥ ಸ್ವಾಮೀಜಿ, ಎಂಸಿಸಿಐ ಅಧ್ಯಕ್ಷ ಕೆ.ಬಿ.ಲಿಂಗರಾಜು, ಸೇರಿದಂತೆ ಹಲವರು ಭಾಗವಹಿಸಿದ್ದರು.

ರಂಗೋಲಿ, ಚಿತ್ರಕಲೆ, ಯೋಗಾಭ್ಯಾಸ

ಯೋಗಾಭ್ಯಾಸದಲ್ಲಿ ಶಾಸಕ ಇಕ್ಬಾಲ್ ಹುಸೇನ್ ಭಾಗಿ

ರಾಮೋತ್ಸವದಲ್ಲಿ ಅತ್ಯುತ್ಸಾಹದಿಂದ ಭಾಗವಹಿಸಿದ ನಾಗರೀಕರು

ರಾಮನಗರ: ರಾಮೋತ್ಸವದ ಅಂಗವಾಗಿ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಬೆಳಿಗ್ಗೆ ಯೋಗಾಭ್ಯಾಸ ಶಿಬಿರ, ಮಧ್ಯಾಹ್ನ ಶಾಲಾ ವಿದ್ಯಾರ್ಥಿಗಳಿಗೆ ಸ್ಥಳದಲ್ಲೇ ಚಿತ್ರ ಬರೆಯುವ ಸ್ಪರ್ಧೆ, ನಗರದ ಎಲ್ಲಾ ವಾರ್ಡುಗಳಲ್ಲಿ ರಂಗೋಲಿ ಸ್ಪರ್ಧೆಗಳು, ಸಂಜೆ ಮಲ್ಲಕಂಬ ಪ್ರದರ್ಶನ ಮತ್ತು ನೂರಾರು ದೇವತಾ ಮೂರ್ತಿಗಳ ಉತ್ಸವ ನೆರವೇರಿದವು.

ರಾಮೋತ್ಸವ ಕೇವಲ ಧಾರ್ಮಿಕ ಆಚರಣೆಯಲ್ಲ, ಎಲ್ಲಾ ವರ್ಗದ, ಎಲ್ಲಾ ವಯಸ್ಸಿನವರಿಗೂ ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸುವ ಮೂಲಕ ಪ್ರತ್ಯಕ್ಷವಾಗಿ ರಾಮೋತ್ಸವದಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಟ್ಟಿದ್ದೇವೆ ಎಂದು ಶಾಸಕ ಇಕ್ಬಾಲ್ ಹುಸೇನ್ ಪ್ರತಿಕ್ರಿಯಿಸಿರು.

ಯೋಗ ಶಿಬಿರ:

ಹರಿಹರ ಪಂಚಮಸಾಲಿ ಗುರುಪೀಠದ ವಚನಾನಂದ ಸ್ವಾಮೀಜಿ ನೇತೃತ್ವದಲ್ಲಿ ಶುಕ್ರವಾರ ಬೆಳ್ಳಂಬೆಳಿಗ್ಗೆ ನಡೆದ ಯೋಗಾಭ್ಯಾಸ ಶಿಬಿರದಲ್ಲಿ ನೂರಾರು ನಾಗರೀಕರು ಪಾಲ್ಗೊಂಡಿದ್ದರು. ಭಾಗವಹಿಸಿದ ಎಲ್ಲರಿಗೂ ಯೋಗಾ ಮ್ಯಾಟ್, ಟೀಶರ್ಟ್ ಮತ್ತು ಕೊಡುಗೆಯನ್ನು ಶಾಸಕ ಇಕ್ಬಾಲ್ ಹುಸೇನ್ ನೀಡಿದರು. ಸ್ವಾಮೀಜಿ ಅವರ ಮಾರ್ಗದರ್ಶನದಲ್ಲಿ ಶಿಬಿರಾರ್ಥಿಗಳೊಂದಿಗೆ ತಾವು ಸಹ ಯೋಗಾಸನ ಅಭ್ಯಾಸ ನಡೆಸಿದರು. ನಿರಂತರ ಯೋಗಾಭ್ಯಾಸದಿಂದ ದೇಹ ಮತ್ತು ಮನಸ್ಸಿನ ಆರೋಗ್ಯಕ್ಕೆ ಪೂರಕ ಎಂದು ಸ್ವಾಮೀಜಿಯವರು ತಿಳಿಸಿದರು. ವಿವಿಧ ಆಸನಗಳನ್ನು ಪ್ರದರ್ಶಿಸಿ ದಿನ ನಿತ್ಯ ಅಭ್ಯಾಸ ಮಾಡುವಂತೆ ಕರೆ ನೀಡಿದರು.

ಸ್ಥಳದಲ್ಲೇ ಚಿತ್ರ ಬರೆಯುವ ಸ್ಪರ್ಧೆ

ರಾಮನಗರ ವಿಧಾನ ಸಭಾ ಕ್ಷೇತ್ರಾದ್ಯಂತ ನಡೆಯುತ್ತಿರುವ ರಾಮೋತ್ಸವದ ಅಂಗವಾಗಿ ಶಾಲಾ ವಿದ್ಯಾರ್ಥಿಗಳಿಗೆ ಚಿತ್ರಕಲಾ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. 5 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ಈ ಶಿಬಿರದಲ್ಲಿ ಪಾಲ್ಗೊಂಡಿದ್ದರು.

ರಂಗೋಲಿ ಸ್ಪರ್ಧೆ

ರಾಮೋತ್ಸವದ ಅಂಗವಾಗಿ ಆಯೋಜನೆಯಾಗಿದ್ದ ರಂಗೋಲಿ ಸ್ಪರ್ಧೆಯಲ್ಲಿ ಸಾವಿರಾರು ಮಹಿಳೆಯರು ಪಾಲ್ಗೊಂಡಿದ್ದರು. ಪ್ರತಿ ವಾರ್ಡಿನಲ್ಲೂ ನಿಗಧಿಯಾದ ರಸ್ತೆಯಲ್ಲಿ ರಂಗೋಲಿ ಬಿಡಿಸಿದರು. ಅತ್ಯಂತ ಉತ್ಸಾಹದಿಂದಲೇ ಮಹಿಳೆಯರು ರಂಗೋಲಿ ಬಿಡಿಸಿದರು. ರಂಗೋಲಿ ರಚನೆಯೇ ಒಂದು ಅದ್ಭುತ ಕಲೆ. ಇದನ್ನು ಬಹುತೇಕ ಮಹಿಳೆಯರು ಕರಗತ ಮಾಡಿಕೊಂಡಿದ್ದಾರೆ. ತಮ್ಮ ಕಲಾಪಾಂಡಿತ್ಯವನ್ನು ಪ್ರದರ್ಶಿಸಲು ರಾಮೋತ್ಸವ ಒಂದು ಉತ್ತಮ ವೇದಿಕೆಯಾಗಿತ್ತು ಎಂದು ಅನೇಕರು ಪ್ರತಿಕ್ರಿಯಿಸಿದರು. ಬಣ್ಣ ಬಣ್ಣದ ರಂಗೋಲಿ ವೀಕ್ಷಿಸಲು ಸಾರ್ವಜನಿಕರು ಸಹ ಧಾವಿಸಿಬಂದರು. ರಂಗೋಲಿ ಸ್ಪರ್ಧೆಯ ಅಂಗವಾಗಿ ನಗರದ ಅನೇಕ ರಸ್ತೆಗಳನ್ನು ವಾಹನ ಸಂಚಾರಕ್ಕೆ ನಿರ್ಬಂಧಿಸಲಾಗಿತ್ತು.ಆಯಾ ವಾರ್ಡಿನ ಪ್ರಮುಖರು ರಂಗೋಲಿ ಸ್ಪರ್ಧೆಯ ನೇತೃತ್ವವಹಿಸಿದ್ದರು. ಉತ್ತಮ ರಂಗೋಲಿಗೆ ಬಹುಮಾನಗಳನ್ನು ನೀಡಲಾಯಿತು. ರಂಗೋಲಿ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಎಲ್ಲರಿಗೂ ಕೊಡುಗೆ ನೀಡಲಾಯಿತು.

ಮಲ್ಲಕಂಬ ಪ್ರದರ್ಶನ

ಸಂಜೆ ಖೇಲೋ ಇಂಡಿಯಾದ ಮಲ್ಲಕಂಬ ವಿಭಾಗದವತಿಯಿಂದ ಮಲ್ಲಕಂಬ ಪ್ರದರ್ಶನ ನಡೆಯಿತು. ಯೋಗ ಶಿಕ್ಷಕ ಶ್ರೀಶೈಲಹೂಗಾರ ನೇತೃತ್ವದಲ್ಲಿ ಈ ಪ್ರದರ್ಶನ ನಡೆಯಿತು. ಮಕ್ಕಳು ನಡೆಸಿಕೊಟ್ಟ ಪ್ರದರ್ಶನ ನೋಡುಗರ ಮೆಚ್ಚುಗೆಗೆ ಪಾತ್ರವಾಯಿತು.

ನಾಯಕತ್ವ ಚರ್ಚೆ ಬಿಟ್ಟು ಅಭಿವೃದ್ಧಿಯ ಕಡೆ ಗಮನ ಹರಿಸಿ

ಬೆಂಗಳೂರು,ಜನವರಿ,16-ದಿನ ಬೆಳಗಾದರೆ ನಾಯಕತ್ವ ಬದಲಾವಣೆಯ ಬಗ್ಗೆ ಚರ್ಚಿಸುವುದನ್ನು ಬಿಟ್ಟು ನಾಡಿನ ಅಭಿವೃದ್ಧಿಯ ಕಡೆ ಗಮನ ಹರಿಸುವುದು ಎಲ್ಲರ ಕರ್ತವ್ಯ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದ್ದಾರೆ.

ಇಂದು ಕರ್ನಾಟಕ ರಾಜ್ಯ ಲಾನ್ ಟೆನ್ನಿಸ್ ಸಂಸ್ಥೆಯಲ್ಲಿ ನಡೆದ ಬೆಂಗಳೂರು ವರದಿಗಾರರ ಕೂಟದ ಸುವರ್ಣ ಮಹೋತ್ಸವ ಡೈರೆಕ್ಟರಿ ಬಿಡುಗಡೆ ಮಾಡಿ ಅವರು ಮಾತನಾಡಿದರು. ಕಳೆದ ಹಲವು ಕಾಲದಿಂದ ರಾಜ್ಯದಲ್ಲಿ ಬರೀ ನಾಯಕತ್ವದ ಕುರಿತು ಚರ್ಚೆ ನಡೆಯುತ್ತಿದೆ.ನಾಯಕತ್ವದ ವಿಚಾರವನ್ನು ಕಾಂಗ್ರೆಸ್ ಹೈಕಮಾಂಡ್ ನೋಡಿಕೊಳ್ಳುತ್ತದೆ.ಹೀಗಾಗಿ ನಾಯಕತ್ವದ ಬದಲಾವಣೆ ಎಂಬುದು ಸಾರ್ವಜನಿಕ ಚರ್ಚೆಯ ವಿಷಯವಾಗಬಾರದು ಎಂದರು.

ವ್ಯವಸ್ಥೆಯಲ್ಲಿ ಈಗ ಯಾವುದೂ ಹಿಂದಿನಂತಿಲ್ಲ. ಸಾಕಷ್ಟು ಬದಲಾವಣೆಗಳಾಗಿವೆ.ಅದು ರಾಜಕೀಯ ರಂಗ ಅಂತಲ್ಲ,ಮಾಧ್ಯಮ ರಂಗವೂ ಸೇರಿದಂತೆ ಸಮಾಜದ ಎಲ್ಲ ಅಂಗಗಳಲ್ಲೂ ಬದಲಾವಣೆಯಾಗಿದೆ. ವ್ಯವಸ್ಥೆ ಸುಗಮವಾಗಿ ಸಾಗಲು ಇಂತಹ ಅಂಗ ಹೀಗೆ ಕೆಲಸ ಮಾಡಬೇಕಿತ್ತು ಎಂದು ನಾವು

ಅಂದುಕೊಳ್ಳುತ್ತೇವೆ.ಆದರೆ ಅಂದುಕೊಳ್ಳುವುದೇ ಬೇರೆ.ಪರಿಸ್ಥಿತಿಯೇ ಬೇರೆ ಎಂದು ವಿಷಾದಿಸಿದರು.

ಹಿರಿಯ ಪತ್ರಕರ್ತರಾದ ಹುಣಸವಾಡಿ ರಾಜನ್ ಅವರು ಮಾತನಾಡಿ,ಮಾಧ್ಯಮ ರಂಗಕ್ಕೆಭವಿಷ್ಯವಿಲ್ಲ ಎಂದು ಹಲವರು ಹೇಳುತ್ತಾರೆ.ಆದರೆ ಎಲ್ಲಿಯವರೆಗೆ ಕುತೂಹಲ ಮತ್ತು ಸತ್ಯಶೋಧನೆಯ ಮನಸ್ಸು ಇರುತ್ತದೋ ಅಲ್ಲಿಯವರೆಗೆ ಮಾಧ್ಯಮ ರಂಗ ಅಸ್ತಿತ್ವದಲ್ಲಿರುತ್ತದೆ ಎಂದರು.

ಇವತ್ತು ಮಾಧ್ಯಮ ರಂಗದಲ್ಲಿ ಪಲ್ಲಟಗಳಾಗಿರುವುದು ನಿಜ.ಇದನ್ನು ನೋಡಿದರೆ ವಿಷಾದವಾಗುತ್ತದೆ. ಇಂತಹ ಸ್ಥಿತಿಯಲ್ಲಿ ಮಾಧ್ಯಮ ರಂಗಕ್ಕೆ ಚೈತನ್ಯ ನೀಡುವ ಕಾರ್ಯ ಮಾಧ್ಯಮ ಸಂಘಟನೆಗಳಿಂದ ಆಗಬೇಕು ಎಂದು ಅವರು ಅಭಿಪ್ರಾಯಿಸಿದರು.

ಪತ್ರಕರ್ತರಾದ ಅ.ಮ.ಸುರೇಶ್ ಅವರು ಮಾತನಾಡಿ:ಪತ್ರಕರ್ತರು ಎದುರಿಸುತ್ತಿರುವ ಸಮಸ್ಯೆ ಮತ್ತು ಸವಾಲುಗಳು ಸಣ್ಣದಲ್ಲ.ಆದರೆ ಇದನ್ನು ಎದುರಿಸಲು ಮಾಧ್ಯಮದ ಸಂಘಟನೆಗಳು ಒಗ್ಗೂಡಿ ಕೆಲಸ ಮಾಡಬೇಕು.ಒಗ್ಗಟ್ಟಿಲ್ಲದಿದ್ದರೆ ಪತ್ರಕರ್ತರ ಸಂಕಷ್ಟ ಕಡಿಮೆಯಾಗುವುದಿಲ್ಲ ಎಂದರು.

ಈ ಸಂದರ್ಭದಲ್ಲಿ ಮಾಧ್ಯಮ ಅಕಾಡೆಮಿಯ ಮಾಜಿ ಅಧ್ಯಕ್ಷರಾದ ಎಂ.ಸಿದ್ದರಾಜು,ಹಿರಿಯ ಪತ್ರಕರ್ತರಾದ ಬಿ.ಪಿ.ಮಲ್ಲಪ್ಪ, ಮೈ.ಸಿ.ಪಾಟೀಲ್, ಬೆಲಗೂರು ಸಮೀವುಲ್ಲಾ,ಶಾಂತಲಾ ಧರ್ಮರಾಜ್ ;ಅವರು ಮಾತನಾಡಿದರು.

ಮಾಜಿ ಸಚಿವರಾದ ಕೆ.ಗೋಪಾಲಯ್ಯ,ಉದ್ಯಮಿ ಸ್ಟಾರ್ ಚಂದ್ರು,ಡಿ.ಎಸ್.ಮ್ಯಾಕ್ಸ್ ಸಂಸ್ಥೆಯ ಮುಖ್ಯಸ್ಥ ದಯಾನಂದ್ ಅವರು ಸಮಾರಂಭದಲ್ಲಿ ಉಪಸ್ಥಿತರಿದ್ದರೆ, ಕಾರ್ಯಕ್ರಮದ ಆರಂಭದಲ್ಲಿ ವರದಿಗಾರರ ಕೂಟದ ಪ್ರಧಾನ ಕಾರ್ಯದರ್ಶಿ ಹೆಚ್.ವಿ.ಕಿರಣ್ ಸ್ವಾಗತಿಸಿದರು.ಅಧ್ಯಕ್ಷ ಆರ್.ಟಿ.ವಿಠ್ಠಲಮೂರ್ತಿ ಪ್ರಾಸ್ತಾವಿಕವಾಗಿ ಮಾತನಾಡಿದರು.ಮಾಧ್ಯಮ ಅಕಾಡೆಯ ಮಾಜಿ ಅಧ್ಯಕ್ಷರಾದ ಸದಾಶಿವ ಶೆಣೈ ಅವರು ಕಾರ್ಯಕ್ರಮ ನಡೆಸಿಕೊಟ್ಟರು. ಸಮಾರಂಭದಲ್ಲಿ ಬೆಂಗಳುರು ವರದಿಗಾರರ ಕೂಟದ ಸಂಸ್ಥಾಪಕ ಸದಸ್ಯರಾದ ಪ್ರಹ್ಲಾದ್ ಕುಳಲಿ,ಹಿರಿಯ ಪತ್ತಕರ್ತರಾದ ಎಂ.ಸಿದ್ದರಾಜು ಮತ್ತು ಅ.ಮ.ಸುರೇಶ್ ಅವರನ್ನು ಸನ್ಮಾನಿಸಲಾಯಿತು.

ಮೊದಲ ಪುಟದಿಂದ

ಬಹಿರಂಗ ಚರ್ಚೆ ವಿಷಯವಲ್ಲ

ರಾಹುಲ್ ಗಾಂಧಿ ಅವರ ಜೊತೆ ಸಿಎಂ ಸ್ಥಾನದ ಬಗ್ಗೆ ಚರ್ಚೆ ಮಾಡಲಾಯಿತೇ ಎಂಬ ಪ್ರಶ್ನೆಗೆ ಈ ರೀತಿ ಉತ್ತರಿಸಿದರು.

ಅಸ್ಸಾಂ ಚುನಾವಣೆ ಸಂಬಂಧ ಹೈಕಮಾಂಡ್ ನಾಯಕರ ಜತೆ ಸಭೆ ಇದೆ. ನಮ್ಮ ಪಕ್ಷದ ಯೋಜನೆಗಳನ್ನು ಬಹಿರಂಗಪಡಿಸಲು ಹೇಗೆ ಸಾಧ್ಯ? ಇದನ್ನು ಪಕ್ಷದ ಮಟ್ಟದಲ್ಲಿ ಮಾತ್ರ ಚರ್ಚೆ ಮಾಡಲಾಗುವುದು. ಸಾರ್ವಜನಿಕವಾಗಿ ಅಲ್ಲ. ಏನಾದರೂ ಮಾಹಿತಿ ನೀಡುವುದಿದ್ದರೆ, ನಮ್ಮ ಪಕ್ಷದ ಪ್ರಧಾನ ಕಾರ್ಯದರ್ಶಿ ನೀಡುತ್ತಾರೆ ಎಂದು ಹೇಳಿದರು.

ಈ ಪ್ರವಾಸದಲ್ಲಿ ಹೈಕಮಾಂಡ್ ನಾಯಕರನ್ನು ಭೇಟಿ ಮಾಡುತ್ತೀರಾ ಎಂದು ಕೇಳಿದಾಗ, ನಾನು ಪಕ್ಷದ ನಾಯಕರನ್ನು ಭೇಟಿ ಮಾಡುವ ಉದ್ದೇಶದಿಂದಲೇ ದೆಹಲಿಗೆ ಬಂದಿದ್ದೇನೆ. ನೀರಾವರಿ ಯೋಜನೆಗಳಿಗೆ ಸಂಬಂಧಿಸಿದಂತೆ ಕೆಲವು ಪ್ರಮುಖ ಕಾನೂನಾತ್ಮಕ ವಿಚಾರಗಳನ್ನು ಚರ್ಚೆ ಮಾಡಬೇಕಾಗಿದೆ. ಹೀಗಾಗಿ ಕಾನೂನು ತಜ್ಞರು ಹಾಗೂ ಕೇಂದ್ರ ಸಚಿವರನ್ನು ಭೇಟಿ ಮಾಡಲಿದ್ದೇನೆ ಎಂದು ತಿಳಿಸಿದರು.

ದೆಹಲಿ ಭೇಟಿ ಬಗ್ಗೆ ಗೊತ್ತಿಲ್ಲ

ಹೋಗಿದ್ದಾರೆಂದು ತಿಳಿದಿಲ್ಲ ಹೈಕಮಾಂಡ್ ಭೇಟಿ ಬಗ್ಗೆ ಗೊತ್ತಿಲ್ಲ ಎಂದರು. ಶಾಸಕ ಕೆ.ಎನ್.ರಾಜಣ್ಣ ಅವರಿಗೆ ಮತ್ತೆ ಸಚಿವ ಸ್ಥಾನ ನೀಡಲಾಗುತ್ತದೆಯೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ, ಈ ಬಗ್ಗೆ ಹೈಕಮಾಂಡ್ ಜತೆ ಚರ್ಚಿಸಲಾಗುವುದು ಎಂದಷ್ಟೇ ಹೇಳಿದರು.

ಕಮಲಕ್ಕೆ ಜೈ!

ಬಿಜೆಪಿಗೆ ಕೈಕೊಟ್ಟ ಶಿವಸೇನೆ ಕಾಂಗ್ರೆಸ್, ಎನ್‌ಸಿಪಿ ಜೊತೆ ಸೇರಿ ಮೈತ್ರಿ ಮಾಡಿಕೊಂಡಿತ್ತು. ನಂತರದ ಬೆಳವಣಿಗೆಯಲ್ಲಿ ಏಕನಾಥ್ ಶಿಂಧೆ ಬಣದ ಶಾಸಕರು ಶಿವಸೇನೆಯನ್ನು ತೊರೆದು ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡು ಮಹಾಯುತಿ ಸರ್ಕಾರ ಅಧಿಕಾರಕ್ಕೆ ಬಂದಿತ್ತು.ಏಕನಾಥ್ ಶಿಂದೆ ಮುಖ್ಯಮಂತ್ರಿಯಾಗಿದ್ದರು. ಈ ಮೈತ್ರಿ ನಂತರ ಲೋಕಸಭೆ, ವಿಧಾನಸಭೆ, ಸ್ಥಳೀಯ ಚುನಾವಣೆಯಲ್ಲೂ ಕಮಾಲ್ ಮಾಡುತ್ತಿದೆ.

ಈ ಬಾರಿ ಚುನಾವಣೆಯಲ್ಲಿ ಠಾಕ್ರೆ ಸಹೋದರರಾದ ಉದ್ಧವ್ ಮತ್ತು ರಾಜ್ ಠಾಕ್ರೆ ಒಂದಾಗಿ ಚುನಾವಣೆ ಎದುರಿಸಿದ್ದರು. ಕಾಂಗ್ರೆಸ್ ಪ್ರತ್ಯೇಕವಾಗಿ ಸ್ಪರ್ಧೆ ಮಾಡಿತ್ತು. ಇಂಡಿ ಒಕ್ಕೂಟದಲ್ಲಿ ಶಿವಸೇನೆ, ಕಾಂಗ್ರೆಸ್ ಒಂದಾಗಿದ್ದರೂ ಪ್ರತ್ಯೇಕವಾಗಿ ಸ್ಪರ್ಧಿಸಿದ್ದು ಮಹಾಯುತಿಗೆ ವರವಾಗಿದೆ.

ಪರಂಪರೆ ಪಸರಿಸಿದ ಶ್ರೀಗಳು

ತೆರೆಯುತ್ತಿದ್ದಾರೆ. ಈ ಮೂಲಕ ಸನಾತನ ಧರ್ಮವನ್ನು ಎತ್ತರಕ್ಕೆ ಕೊಂಡೊಯ್ದು, ನಮ್ಮ ಸಂಸ್ಕೃತಿ ಪರಂಪರೆ ಪಸರಿಸುತ್ತಿದ್ದಾರೆ ಎಂದು ಸಂಸದ ತೇಜಸ್ವಿ ಸೂರ್ಯ ಶ್ಲಾಘಿಸಿದರು.

ಬೆದರಿಕೆ ಹಾಕಿದ್ದರು: ಎಚ್‌ಸಿಎಂ ಕಿಡಿ

ಬಿಜೆಪಿಯಿಂದ ಬಳ್ಳಾರಿ ಪ್ರತಿಭಟನೆ ವಿಚಾರವಾಗಿ ಮಾತನಾಡಿ, 'ರಿಪಬ್ಲಿಕ್ ಬಳ್ಳಾರಿ' ಯಾರು ಮಾಡಿದ್ದು? ಯಾರು ಇವರ ವಿರುದ್ಧ ಧ್ವನಿ ಎತ್ತುವ ಹಾಗಿರಲಿಲ್ಲ. ಗಣಿ ಸಂಪತ್ತು ಯಾರ ಬಳಿ ಇತ್ತು? ಯಾರೂ ಲೂಟಿ ಮಾಡಿದ್ದರು? ಇವರೇ ಲೂಟಿ ಮಾಡಿ ಈಗ ಇವರೇ ಪ್ರತಿಭಟನೆ ಮಾಡೋದು ಹಾಸ್ಯಾಸ್ಪದ ಎಂದು ಕುಟುಕಿದರು. ರಾಮಮಂದಿರಕ್ಕೆ ರಾಹುಲ್ ಗಾಂಧಿ ಭೇಟಿಗೆ ಧಾರ್ಮಿಕ ನಾಯಕರು ಆಕ್ಷೇಪ ಮಾಡುತ್ತಿರುವ ವಿಚಾರ ಕುರಿತು ಮಾತನಾಡಿ, ಇದೊಂದು ಧಾರ್ಮಿಕ ವಿಚಾರ. ಪೆರಿಯಾರ್, ಬಸವಣ್ಣ, ನಾರಾಯಣ ಗುರು ಮತ್ತಿತರರು ಎಲ್ಲ ಧರ್ಮದ ವಿರುದ್ಧ, ಜಾತಿ ವಿರುದ್ಧ ಇದ್ದವರು. ಧರ್ಮ ಮಾನವನ ಅಭಿವೃದ್ಧಿಗೆ ಇರುವಂತದ್ದು. ಈ ರೀತಿ ಮಾಡುವುದು ಎಷ್ಟು ಸರಿ? ಎಂದು ಮಾಧ್ಯಮಗಳೇ ಹೇಳಬೇಕು ಎಂದರು.

ಮೈಸೂರಿನಲ್ಲಿ ಸಂಕ್ರಾಂತಿ ಸಂಭ್ರಮ

ಹಬ್ಬದ ಪ್ರಯುಕ್ತ ಬೆಳಗ್ಗೆಯಿಂದಲೇ ದನ ಕರುಗಳಿಗೆ ಪೂಜೆ ನೆರವೇರಿತು. ಕೆರೆ, ಕಾಲುವೆಗಳಲ್ಲಿ ರಾಸುಗಳನ್ನು ಸ್ವಚ್ಛಗೊಳಿದ ರೈತರು, ಬಳಿಕ ಅವುಗಳಿಗೆ ಸಾಂಪ್ರದಾಯಿಕ ಬಣ್ಣ ಬಳಿದು, ಶೃಂಗಾರ ಮಾಡಿ, ಸಂಜೆ ಊರಿನ ಮುಂದೆ ಕಿಚ್ಚು ಹಾಯಿಸಿದರು. ಎತ್ತು ಸಾಕಿರುವವರ ಮನೆಯಲ್ಲಂತೂ ಅವುಗಳನ್ನು ಸಂಕ್ರಾಂತಿ ಹಬ್ಬಕ್ಕೆ ಸಜ್ಜುಗೊಳಿಸುವುದೇ ದೊಡ್ಡ ಸಂಭ್ರಮವಾಗಿತ್ತು. ವರ್ಷದ ಮೊದಲ ಹಬ್ಬ ಹಾಗೂ ರೈತರು ಸಂಕ್ರಾಂತಿಯನ್ನು ಸುಗ್ಗಿ ಹಬ್ಬವಾಗಿ ಆಚರಿಸುತ್ತಾರೆ. ಮನೆ ಮನೆಗಳಲ್ಲೂ ಹಬ್ಬದ ಸಂಭ್ರಮ ಜೋರಾಗಿತ್ತು. ಒಬ್ಬರಿಗೊಬ್ಬರು ಎಳ್ಳು ಬೆಲ್ಲಕೊಟ್ಟು ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡರು. ಮನೆಮನೆಗಳ ಮುಂದೆ ಬಣ್ಣ ಬಣ್ಣದ ರಂಗೋಲಿಗಳು, ರಾಸುಗಳಿಗೆ ಕಿಚ್ಚಾಯಿಸುವುದು ಹಬ್ಬದ ಸಂಭ್ರಮವನ್ನು ಇಮ್ಮಡಿಗೊಳಿಸಿತ್ತು. ರಾಸುಗಳಿಗೆ ಕಿಚ್ಚು ಹಾಯಿಸುವ ಸಂಭ್ರಮವನ್ನು ಕಣ್ತುಂಬಿಕೊಳ್ಳಲೆಂದೇ ವಿದೇಶಿಗರು ಸಹ ಭಾಗವಹಿಸಿದ್ದರು.

ಸಿದ್ದಮಲ್ಲೇಶ್ವರ ಆರಾಧನಾ ಮಹೋತ್ಸವ

ಚಾಮರಾಜನಗರ: ತಾಲ್ಲೂಕಿನ ಕಿಲಗೆರೆ ಗ್ರಾಮದಲ್ಲಿ ಮಕರ ಸಂಕ್ರಾಂತಿ ಹಬ್ಬದ ಅಂಗವಾಗಿ 88 ನೇ ಶ್ರೀ ಸಿದ್ದಮಲ್ಲೇಶ್ವರ ಆರಾಧನಾ ಮಹೋತ್ಸವವನ್ನು ವಿಜೃಂಭಣೆಯಿಂದ ನಡೆಸಲಾಯಿತು.

ಗ್ರಾಮದ ಮಠದ ಮುಂಭಾಗ ಬೆಳ್ಳಿ ಪಲ್ಲಕ್ಕಿ ಯಲ್ಲಿ ಸೋಮಹಳ್ಳಿ ಮಠದ ಸಿದ್ದಮಲ್ಲಸ್ವಾಮೀಜಿ ಅವರನ್ನು ಕೂರಿಸಿ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು.

ಬಳಿಕ ಬಸವೇಶ್ವರ ದೇವಸ್ಥಾನದ ಮುಂಭಾಗ ಬಸವ ಪುತ್ಥಳಿ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ಕಿಲಗೆರೆ ಮಠದ ಕಾಳಿಂಗಸ್ವಾಮೀಜಿ ಸೇರಿದಂತೆ ಗ್ರಾಮದ ಮುಖಂಡರು, ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಅನ್ನ ಸಂತರ್ಪಣೆ

ಗ್ರಾಮದ ಸಮೀಪದಲ್ಲಿರುವ ಹುಲಿಗಿನ ವೆಂಕಟರ ಮಣಸ್ವಾಮಿ ಬೆಟ್ಟದಲ್ಲಿ ಜರುಗಿದ ರಥೋತ್ಸವ ಅಂಗವಾಗಿ ಗ್ರಾಮದ ಸರ್ಕಾರಿ ಶಾಲಾ ಆವರ ಣದಲ್ಲಿ ಭಕ್ತಾದಿಗಳಿಗೆ ಅನ್ನ ಸಂತರ್ಪಣೆಯನ್ನು ಮಾಡಲಾಯಿತು. ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ಅನ್ನ ಸಂತರ್ಪಣೆಯನ್ನು ಸ್ವೀಕಾರ ಮಾಡಿದರು.

ವಾಸ್ತಲ್ಯ ಮನೆ ಹಸ್ತಾಂತರ

ಗುಂಡ್ಲುಪೇಟೆ: ತಾಲ್ಲೂಕಿನ ಕೆಲಸೂರು ವಲಯದ ಬನ್ನಿತಳಾಪುರ ಗ್ರಾಮದ ಮಾದಮ್ಮ ಎಂಬುವ ವರಿಗೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಯಿಂದ ಹೇಮಾವತಿ ವಿರೇಂದ್ರ ಹೆಗ್ಗಡೆ ಅವರ ಆಶಯ ದಂತೆ ನಿರ್ಗತಿಕರಿಗೆ ವಾಸ್ತಲ್ಯ ಮನೆಯನ್ನು ಕಟ್ಟಿಕೊಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಈ ಒಂದು ಮನೆಯನ್ನು ಮಾದಮ್ಮ ರವರಿಗೆ ಪ್ರಾದೇಶಿಕ ನಿರ್ದೇಶಕ ಜಯಂತ್ ಪೂಜಾರಿ,ಮತ್ತು ಜಿಲ್ಲಾ ನಿರ್ದೇಶಕರು ದಿನೇಶ್ ಹಸ್ತಾಂತರಿಸಿದು.

ಗ್ರಾಮದ ಮುಖಂಡ ಮಹೇಶ್ ಮಾತನಾಡಿ ನಾವು ಅನಾಥರು ನಮಗೆ ಯಾರು ಇಲ್ಲ ಅನ್ನುವ ಭಾವನೆ ಮೂಡದೆ ಎಲ್ಲರಂತೆ ನಾವು ಎನ್ನುವ ಭರವಸೆ ಬದುಕಿ ಬಾಳಬೇಕು ಸಮಾಜದಲ್ಲಿ ನಮಗೆ ಯಾರು ಇಲ್ಲ ಅನ್ನುವ ಭಾವನೆಯಲ್ಲಿ ಕೊರಗಬಾರದು ನಿಮ್ಮ ಜೊತೆ ನಾವು ಇದ್ದೇವೆ ಎಂದು ಶ್ರೀ ಕ್ಷೇತ್ರ ಧರ್ಮಸ್ಥಳ ಸಂಸ್ಥೆಯು ನಿರ್ಗತಿಕರಿಗೆ ಆಶಾಯವಾಗಿರುವುದು ಹೆಮ್ಮೆಯ ವಿಚಾರ ಎಂದರು.

ರಾಜ್ಯದಲ್ಲಿ 724 ಮನೆ ಮಾಡಿದ್ದು ಗುಂಡ್ಲುಪೇಟೆ ತಾಲೂಕಿನಲ್ಲೂ 5 ನೇ ಮನೆ ಇದಾಗಿದ್ದು ಇನ್ನು 6 ಮನೆಗಳ ನಿರ್ಮಾಣ ಆಗುತ್ತಿದೆ, ಹಾಗೂ ತಾಲೂಕಿನಲ್ಲಿ ಪ್ರತಿ ತಿಂಗಳು 62 ಮಂದಿ ನಿರ್ಗತಿಕರಿಗೆ (62000) ನೀಡಲಾಗುತ್ತಿದೆ, ಜಲಮಂಗಳ ಕಾರ್ಯಕ್ರಮದಡಿಯಲ್ಲಿ ವಾಟರ್ ಬೆಡ್,ವೀಲ್ ಚೇರ್,ಯು ಶೇಪ್ ವಾಕರ್, ,ವಾಕಿಂಗ್ ಸ್ಟಿಕ್,ನೀಡುತ್ತಿದೆ, ಅನಾರೋಗ್ಯ ದಿಂದ ಇರುವವರಿಗೆ ಪೌಷ್ಟಿಕ ಆಹಾರ ಪುಷ್ಟಿ ಯನ್ನು ನೀಡುತಿದೆ ಈಗೆ ಧರ್ಮಸ್ಥಳ ಸಂಸ್ಥೆಯು ಜನಪರ ಕೆಲಸಗಳು ಮಾಡುತಿದೆ ಎಂಬುದರ ಬಗ್ಗೆ ಜಯಂತ್ ಪೂಜಾರಿ ರವರು ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ತಾಲೂಕಿನ ಯೋಜನಾಧಿಕಾರಿ ಚಂದ್ರಶೇಖರ್,ಜನಜಾಗೃತಿ ವೇದಿಕೆ ಸದಸ್ಯ ಮಹೇಂದ್ರ, ಜ್ಞಾನವಿಕಾಸ ಸಮನ್ವಯ ಅಧಿಕಾರಿ ಚೈತ್ರ, ವಲಯ ಮೇಲ್ವಿಚಾರಕ ಆದರ್ಶ್, ಇದ್ದರು.

ಕೃಷ್ಣ ವಂದನ

ಸ್ನೇಹಾ ಆನಂದ್

ಹೇ ಕೃಷ್ಣಾ!

ಹೂವ ಹಾಕಿದರೇನು
ಜಪವ ಮಾಡಿದರೇನು
ಕಸುವಿಲ್ಲ ಮನದ ಕಸ ಗುಡಿಸಿದೇ!

ಗುಡಿ,ಗುಂಡಾರವ ಸುತ್ತಿ,
ತುಪ್ಪದಾರತಿ ಎತ್ತಿ ತಪ್ಪನ್ನು ತಿದ್ದದೆ, ಒಪ್ಪುವನೇ
ಆ ಕೃಷ್ಣಪ್ಪ!

ನೈವೇದವನು ಇಟ್ಟು, ಮಡಿ ಬಟ್ಟೆಯನು ಉಟ್ಟು
ಮನದ ಕಲ್ಮಶದೂಡದೆ ಅಪ್ಪುವನೇ
ಆ ತಿಮ್ಮಪ್ಪ!

ಸಿಟ್ಟು, ಸೇಡಿಗೆ ಶಿರವಿಟ್ಟು!
ಮನದ ಭಾವಿಯೊಳು ಕಿಡಿಯಿಟ್ಟು!
ಪುಣ್ಯಗಳ ಫಲ ಕೋರಿದರೆ ಕೊಡುವನೇ
ಆ ಬಪ್ಪ!

ವಿದ್ಯಾವರ್ಧಕ ಕಾಲೇಜಿನಲ್ಲಿ ವಿವಿಧ ಕೋರ್ಸ್‌ಗಳು ಪ್ರಾರಂಭ

ಮೈಸೂರು: ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವ ವಿದ್ಯಾನಿಲಯದಲ್ಲಿ ನೂತನ ಸಾಲಿಗೆ ಪದವಿ, ಸ್ನಾತಕೋತ್ತರ ಪದವಿ, ಡಿಪ್ಲೊಮಾ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳಿಗೆ 2026ರ ಅವಧಿಗೆ ಪ್ರವೇಶ ಪಡೆಯಬಯಸು ವವರು ನಗರದ ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿನ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿನ ಘಟಕವನ್ನು ಸಂಪರ್ಕಿಸಬಹು ದಾಗಿದೆ ಎಂದು ಅಧ್ಯಯನ ಕೇಂದ್ರದ ಸಂಯೋಜಕ ಡಾ.ಬಿ.ಎಸ್.ಶ್ರೀಹರ್ಷ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಅವಕಾಶ ವಿದ್ದು, ಹೆಚ್ಚಿನ ಮಾಹಿತಿಗೆ ದೂ. ದೂ. 0821– 2423374 ನ್ನು ಸಂಪರ್ಕಿಸಬಹುದಾಗಿದೆ. ಪ್ರವೇಶಾತಿ ಸಂದರ್ಭದಲ್ಲಿ ಗೊಂದಲ ಉಂಟಾದಲ್ಲಿ ವಾಟ್ಸಪ್ ಸಂಖ್ಯೆ 944933 7272ಕ್ಕೆ ಕರೆ ಮಾಡಬಹುದಾಗಿದೆ ಎಂದರು. ಬಿಎಎಂ, ಬಿಸಿಕೊಎಂಎಫ್, ಬಿಎಸ್‌ಸಿಎಂ ಕಾರ್ಯಕ್ರಮಗಳಿಗೆ ವಾರ್ಷಿಕ ಆದಾಯ 2.5ಲಕ್ಷಕ್ಕಿಂತ ಕಡಿಮೆಯಿದ್ದಲ್ಲಿ ಎಸ್‌ಸಿ, ಎಸ್‌ಟಿ ವಿದ್ಯಾರ್ಥಿಗಳಿಗೆ ಪ್ರವೇಶ ಶುಲ್ಕದಲ್ಲಿ ಶೇ. 50 ವಿನಾಯಿತಿ ಇದೆ ಎಂದರು. ಪ್ರಾದೇಶಿಕ ಸಹಾಯಕ ನಿರ್ದೇಶಕರಾದ ಡಾ.ಎಚ್.ಸಿ. ಹೇಮಾ ಮಾಲಿನಿ ಮಾತನಾಡಿ, ಇಂಗ್ನೊ ಬೆಂಗಳೂರು ಪ್ರಾದೇಶಿಕ ಕೇಂದ್ರದ ವೆಬ್‌ಸೈಟ್‌ನಲ್ಲಿ ಅಧ್ಯಯನ ಕೇಂದ್ರಗಳ ವಿವರ ಲಭ್ಯವಿವೆ. ಇನ್ನು, ಎಂಬಿಎಗೆ ಇಗ್ನೊ ನೇರ ಪ್ರವೇಶ ಒದಗಿಸುತ್ತಿದೆ ಎಂದರು. ಸಹ ಸಂಯೋಜಕ ಪ್ರೊ.ಸಿದ್ದರಾಜು ಇದ್ದರು.

ಮುರಡಿ ವೆಂಕಟರಮಣಸ್ವಾಮಿ ಬೆಟ್ಟದಲ್ಲಿ ರಥೋತ್ಸವ



ಗುಂಡ್ಲುಪೇಟೆ.ತಾಲೂಕಿನ ತೆರಕಣಾಂಬಿ ಹೋಬ ಳಿಯ ಹುಲಿಗಿನ ಮುರಡಿ ವೆಂಕಟರಮಣಸ್ವಾಮಿ ಬೆಟ್ಟದಲ್ಲಿ ಗುರುವಾರ ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ದಿವ್ಯರಥೋತ್ಸವ ನಡೆಯಿತು

ಚಿಕ್ಕತಿರುಪತಿ ಎಂದೇ ಕರೆಯಲಾಗುವ ಈ ಕ್ಷೇತ್ರದಲ್ಲಿ ಪ್ರತಿ ವರ್ಷವೂ ಮಕರ ಸಂಕ್ರಾಂತಿಯಂದು ದಿವ್ಯ ರಥೋತ್ಸವ ನಡೆಸಲಾಗುತ್ತಿದೆ. ಪ್ರತಿ ವರ್ಷವೂ ಧನುರ್ಮಾಸ ಕಳೆದ ನಂತರ ನಡೆಯುವ ಮೊದಲನೇ ರಥೋತ್ಸವಕ್ಕೆ ತಾಲೂಕಿನ ಜನರಲ್ಲದೆ ನೆರೆಯ ಜಿಲ್ಲೆಗಳು ಹಾಗೂ ರಾಜ್ಯಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸಿದ್ದರು..

ಬಿದಿರಿನಿಂದ ನಿರ್ಮಿಸಿದ ರಥವನ್ನು ಬಣ್ಣಬಣ್ಣದ ಬಟ್ಟೆಗಳಿಂದ ಹಾಗೂ ಹೂವುಗಳಿಂದ ಅಲಂಕರಿಸಲಾಗಿತ್ತು. ಬೆಳಗಿನಿಂದಲೇ ಮೂಲ ವಿಗ್ರಹಗಳು ಹಾಗೂ ಉತ್ಸವ ಮೂರ್ತಿಗಳಿಗೆ ವಿಶೇಷ ಪೂಜೆಗಳನ್ನು ನಡೆಸಲಾಯಿತು. ಬೆಳಗ್ಗೆ10 ಗಂಟೆ ವೇಳೆಗೆ ಪ್ರವಾಹದಂತೆ ಆಗಮಿಸಿದ ಭಕ್ತರು ದಿವ್ಯ ರಥವನ್ನು ಎಳೆಯಲು ಕಾತುರದಿಂದ ಕಾದು ನಿಂತಿದ್ದರು.

ಉತ್ಸವ ಮೂರ್ತಿಗಳನ್ನು ಹೊತ್ತ ಭಕ್ತರು ದೇವಾಲಯದ ಸುತ್ತಲೂ ಪ್ರದಕ್ಷಿಣೆ ಮಾಡಿ ರಥದಲ್ಲಿ ಕುಳ್ಳಿರಿಸಿದ ನಂತರ ಬಾನಿನಲ್ಲಿ ಗರುಡ ಕಾಣಿಸಿಕೊಂಡ ಕೂಡಲೇ ಮಧ್ಯಾಹ್ನ 12 45 ಗಂಟೆಗೆ ಮುಜರಾಯಿ ಅಧಿಕಾರಿಯೂ ಆದ ತಹಸೀಲ್ದಾರ್ ಎಂ.ಎಸ್.ತನ್ಮಯ್ ರವರು ರಥಕ್ಕೆ ಪೂಜೆ ಸಲ್ಲಿಸುವ ಮೂಲಕ ರಥೋತ್ಸವಕ್ಕೆ ಚಾಲನೆ ನೀಡಿದರು..

ಲಕ್ಷಾಂತರ ಭಕ್ತರು ಗೋವಿಂದಾ ಗೋಪಾಲ ಎಂಬ ಜಯಘೋಷಗಳನ್ನು ಕೂಗುತ್ತಾ ರಥವನ್ನು ದೇವಾಲಯದ ಸುತ್ತಲೂ ಶ್ರದ್ಧಾ ಭಕ್ತಿಗಳಿಂದ ಎಳೆದರು. ನವ ದಂಪತಿಗಳು ಹೂಹಣ್ಣುಗಳನ್ನು ಎಸೆದು ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿದರು.

ಪೊಲೀಸ್ ಬಿಗಿ ಬಂದೋಬಸ್ತ್ ವ್ಯವಸ್ಥೆ ಕಲ್ಪಿಸಿದ್ದು ಹೊರಗಿನಿಂದಲೂ ಹೆಚ್ಚಿನ ಭಕ್ತರು ಆಗಮಿಸುವುದರಿಂದ ಆಗುತ್ತಿದ್ದ ನೂಕುನುಗ್ಗಲು ತಪ್ಪಿಸಿ ವಾಹನಗಳ ಸುಗಮ ಸಂಚಾರಕ್ಕೆ ಪೊಲೀಸ್ ಇಲಾಖೆ ಬಿಗಿ ಬಂದೋಬಸ್ತ್ ಆಯೋಜಿಸಿತ್ತು ತೆರಕಣಾಂಬಿ ಮತ್ತು ಪಟ್ಟಣದಿಂದ ಬಸ್ಸುಗಳನ್ನು ನಿಯೋಜಿಸಲಾಗಿತ್ತು. ಬೆಟ್ಟಕ್ಕೆ ಹೋಗುವ ಭಕ್ತರ ಸಂಖ್ಯೆ ಹೆಚ್ಚಾಗಿದ್ದರಿಂದ ಖಾಸಗಿ ಬಸ್ಸುಗಳ ಸಂಚಾರಕ್ಕೆ ಸಹ ಅನುಮತಿ ನೀಡಲಾಗಿತ್ತು.

ಗ್ಯಾರಂಟಿ ಅನುಷ್ಠಾನವು ಬಡಜನರನ್ನು ಆರ್ಥಿಕವಾಗಿದೆ

ಕೆ.ಆರ್.ಪೇಟೆ, ನಮ್ಮ ರಾಜ್ಯ ಕಾಂಗ್ರೆಸ್ ಸರ್ಕಾರವು ಜಾರಿಗೊಳಿಸಿರುವ ಐದು ಗ್ಯಾರಂಟಿ ಯೋಜನೆಗಳ ಅನುಷ್ಠಾನವು ಬಡಜನರನ್ನು ಆರ್ಥಿಕವಾಗಿ ಸಬಲರನ್ನಾಗಿಸಿವೆ. ಇಂತಹ ಮಹತ್ತರ ಯೋಜನೆಗಳನ್ನು ಬಿಜೆಪಿ ಪಕ್ಷವು ನಕಲು ಮಾಡಿ ಬೇರೆ ಬೇರೆ ರಾಜ್ಯಗಳ ಚುನಾವಣೆಗಳಲ್ಲಿ ಪ್ರಚಾರ ಮಾಡಿಕೊಂಡು ಅಧಿಕಾರಕ್ಕೇರಲು ಪ್ರಯತ್ನಿಸಿದೆ ಹಾಗಾಗಿ ಗ್ಯಾರಂಟಿ ಯೋಜನೆಗಳನ್ನು ಟೀಕಿಸಲು ರಾಜ್ಯದ ಬಿಜೆಪಿ ನಾಯಕರಿಗೆ ನೈತಿಕ ಹಕ್ಕಿಲ್ಲ ಎಂದು ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷ ಅಗ್ರಹಾರಬಾಚಹಳ್ಳಿ ಎ.ಬಿ.ಕುಮಾರ್ ಹೇಳಿದರು.

ಪಟ್ಟಣದ ತಾಲ್ಲೂಕು ಪಂಚಾಯತ್ ಸಭಾಂಗಣದಲ್ಲಿ ನಡೆದ ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ನೇತೃತ್ವದಲಿ ಜಾರಿಗೊಳಿಸಿರುವ ಐದು ಗ್ಯಾರಂಟಿ ಯೋಜನೆಗಳಾದ ಗೃಹಲಕ್ಷಿ ?ಮೇ, ಅನ್ನಭಾಗ್ಯ, ಶಕ್ತಿ ಯೋಜನೆ, ಗೃಹ ಜ್ಯೋತಿ, ಯುವನಿಧಿ ಯೋಜನೆಗಳು ಬಡವರಿಗೆ ನೆಮ್ಮದಿಯ ಬದುಕು ನೀಡಿವೆ. ಕೇಂದ್ರ ಸರ್ಕಾರದ ಬೆಲೆ ಏರಿಕೆಯನ್ನು ಎದರಿಸಲು ನಮ್ಮ ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳು ಹೆಚ್ಚು ಪ್ರಯೋಜನಕಾರಿಯಾಗಿವೆ. ಐದು ಯೋಜನೆಗಳಿಗೆ ವರ್ಷಕ್ಕೆ ಸುಮಾರು 60ಸಾವಿರ ಕೋಟಿಯಂತೆ ಇದೂವರೆವಿಗೂ ಸುಮಾರು 150ಸಾವಿರ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಗಿದೆ. ಗ್ಯಾರಂಟಿ ಯೋಜನೆಗಳು ಬಡವರಿಗೆ ಆರ್ಥಿಕ ಹಾಗೂ ಸಾಮಾಜಿಕ ಭದ್ರತೆಯನ್ನು ಒದಗಿಸಿವೆ ಎಂದರು. ಈ ಗ್ಯಾರಂಟಿ ಯೋಜನೆಗಳನ್ನು ಪಕ್ಷಾತೀತವಾಗಿ ಎಲ್ಲಾ ವರ್ಗದ ಅರ್ಹರಿಗೆ ಒದಗಿಸಿಕೊಡಲಾಗುತ್ತಿದೆ ಆದರೂ ವಿರೋಧ ಪಕ್ಷಗಳು ಕೇವಲ ಟೀಕೆಗಾಗಿ ಟೀಕೆ ಮಾಡುತ್ತಿವೆ ಇದು ಸರಿಯಲ್ಲ. ಬಿಜೆಪಿಯು ಧರ್ಮಾಧಾರಿತ ರಾಜಕೀಯ ಮಾಡುತ್ತಿದೆ ಆದರೆ ಕಾಂಗ್ರೆಸ್ ಪಕ್ಷವು ಜನಾಧಾರಿತ, ಬಡವರಾಧಾರಿತವಾಗಿ ಸೇವೆಯನ್ನು ಮಾಡುತ್ತಿದೆ. ನಮ್ಮ ಕಾಂಗ್ರೆಸ್ ಪಕ್ಷವು ಜಾರಿಗೊಳಿಸಿದ್ದ ಮನರೇಗಾ ಯೋಜನೆಯನ್ನು ಬದಲಾವಣೆ ಮಾಡುವ ಮೂಲಕ ಗಾಂಧೀಜೀಯವರ ಕನಸಿನ ಗ್ರಾಮಾಭಿವೃದ್ಧಿ ಯೋಜನೆಯನ್ನು ಬುಡಮೇಲು ಮಾಡಲು ಮುಂದಾಗಿರುವುದು ಸರಿಯಲ್ಲ. ಹಾಗಾಗಿ ನರೇಗಾ ಯೋಜನೆಯನ್ನು ಯಾಥಾಸ್ಥಿತಿಯಲ್ಲಿ ಮುಂದುವರೆಸಬೇಕು ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎ.ಬಿ.ಕುಮಾರ್ ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡಿದರು.

ಆಹಾರ ಇಲಾಖೆಯ ಆಹಾರ ಇಲಾಖೆಯ ನಿರೀಕ್ಷಕ ಗಣೇಶ್, ಚೆಸ್ಕಾಂ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಪುಟ್ಟಸ್ವಾಮೀಗೌಡ, ತಾಲ್ಲೂಕು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಎಸಿಡಿಪಿಓ ಶಾಂತವ್ವ.ಎಸ್.ಹಾವಣ್ಣನವರ್, ಜಿಲ್ಲಾ ಉದ್ಯೋಗಾಧಿಕಾರಿ ವಿ.ನವೀನ್‌ಕುಮಾರ್, ಬಸ್ ಡಿಪೋ ಅಧಿಕಾರಿ ನಾಗರಾಜು ಅವರು ತಮ್ಮ ತಮ್ಮ ಇಲಾಖೆಯ ಪ್ರಗತಿಯ ವರದಿಯನ್ನು ಮಂಡಿಸಿದರು.

ಸಭೆಯಲ್ಲಿ ಗ್ಯಾರಂಟಿ ಸಮಿತಿಯ ಸದಸ್ಯ ಕಾರ್ಯದರ್ಶಿ ಹಾಗೂ ತಾಲೂಕು ಪಂಚಾಯ್ತಿ ಕಾರ್ಯನಿರ್ವಾಹಕ ಅಧಿಕಾರಿ ಕೆ.ಸುಷ್ಮಾ, ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಸದಸ್ಯರಾದ ಮೆಣಸ ಸಿ.ಆರ್.ಪಿ.ಕುಮಾರ್, ಬೂಕನಕೆರೆ ರೂಪಾಚಂದ್ರಶೇಖರ್, ಬೊಮ್ಮೇನಹಳ್ಳಿ ಲತಾಹರೀಶ್, ಕನಕದಾಸನಗರ ಶಿವಮ್ಮ, ಕೆ.ಎಸ್. ಆರ್.ಟಿ.ಸಿ ಶಿವಣ್ಣ, ಸಿಂಗನಹಳ್ಳಿ ಗೋಪಾಲ್, ಬಂಡಿಹೊಳೆ ಯೋಗೇಶ್(ಉಮೇಶ್), ಹಾಫೀಜ್‌ಉಲ್ಲಾ, ಗೋವಿಂದನಹಳ್ಳಿ ಶ್ಯಾಮಣ್ಣ, ಬೂಕನಕೆರೆ ಬಿ.ಸಿ.ಮಾಧು, ದೊಡ್ಡತಾರಹಳ್ಳಿ ಸೋಮಶೇಖರ್, ಶಿವಲಿಂಗಪ್ಪ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ವಿಷಯ ನಿರ್ವಾಹಕಿ ನಂದಿನಿ ಇತರರು ಉಪಸ್ಥಿತರಿದ್ದರು.

ಸಂವಿಧಾನ ಕಪ್ ಕ್ರಿಕೆಟ್ ಪಂದ್ಯಾವಳಿ

ಗುಂಡ್ಲುಪೇಟೆ:– ತಾಲೂಕಿನ ಬೇಗೊರು ಹೋಬಳಿ ಯ ಚನ್ನವಡೆಯನಪುರ ಗ್ರಾಮದಲ್ಲಿ ಬೀಮ ಬಳಗ ಹಾಗೂ ಶಾಸಕ ಎಚ್ ಎಂ ಗಣೇಶ್ ಪ್ರಸಾದ್ ರವರ ಅಭಿಮಾನಿಗಳಿಂದ ಮೊಟ್ಟ ಮೊದಲ ಬಾರಿಗೆ 77ನೇ ಸಂವಿಧಾನ ದಿನಾಚರಣೆಯ ಅಂಗವಾಗಿ ಸಂವಿಧಾನ ಕಪ್ –2026 ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ ನೀಡಿಲಾಯಿತ್ತು

ಆಯೋಜಕರಾದ ಜಯರಾಮ್ ಎಂ ಸಿದ್ದರಾಜು ಮತ್ತು ಗ್ರಾ.ಪ. ಸದಸ್ಯರಾದ ರವೀಶ್ ಮತ್ತು ಅಂಕಯ್ಯ ಹಾಗೂ. ಸಿ ಪುಟ್ಟು, ನಾಗೇಶ್ ಮಲ್ಲೇಶ್ ಕಿರಣ್ ಇನ್ನು ಇತರರು ಹಾಜರಿದ್ದರು

ಭಗೀರಥ ಮಹರ್ಷಿ ಪುತ್ತಳಿ ಉದ್ಘಾಟನೆ

ಯರಿಯೂರು: ಗ್ರಾಮದಲ್ಲಿ ಶಾಸಕ ಸಿ.ಪುಟ್ಟರಂಗ ಶೆಟ್ಟರಿಂದ ಭಗೀರಥ ಮಹರ್ಷಿ ಪುತ್ಥಳಿ ಉದ್ಘಾಟನೆ ಚಾಮರಾಜನಗರ, ಜಿಲ್ಲೆಯ ಯಳಂದೂರು ತಾಲ್ಲೂಕಿನ ಯರಿಯೂರು ಗ್ರಾಮದಲ್ಲಿ ಗ್ರಾಮದ ಯುವಕರು ಮತ್ತು ಚಾಮರಾಜನಗರ ಶಾಸಕ ಸಿ ಪುಟ್ಟರಂಗಶೆಟ್ಟಿ ಅಭಿಮಾನಿ ಬಳಗದ ವತಿಯಿಂದ 10 ಲಕ್ಷ ರು, ವೆಚ್ಚದಲ್ಲಿ ನಿರ್ಮಾಣಗೊಂಡಿರುವ

ಶ್ರೀ ಭಗೀರಥ ಪುತ್ಥಳಿಯನ್ನು ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಶಾಸಕರು ಎಂಎಸ್‌ಐಎಲ್ ನಿಗಮದ ಅಧ್ಯಕ್ಷರಾದ ಸಿ.ಪುಟ್ಟರಂಗಶೆಟ್ಟಿ ಶುಕ್ರವಾರ ಬೆಳಗ್ಗೆ ಲೋಕಾರ್ಪಣೆ ಮಾಡಿದರು. ಜಿ.ಪಂ ಸದಸ್ಯ ಜೆ ಯೋಗೇಶ್ ಯುವ ಮುಖಂಡ ಕುಸು ಮರಾಜ್ ಪುಟ್ಟರಂಗಶೆಟ್ಟಿ ಹಾಗೂ ಗ್ರಾಮದ ಯಜ ಮಾನರು ಯುವಕರು ಗ್ರಾಮಸ್ಥರು ಹಾಜರಿದ್ದರು

ಶಿಕ್ಷಣದಷ್ಟೇ ರಂಗ ತರಬೇತಿಯೂ ಮುಖ್ಯ: ಕೀರ್ತಿರಾಜ್

ಮೈಸೂರು: ಮಕ್ಕಳಲ್ಲಿ ರಂಗಭೂಮಿ ತರಬೇತಿ ಶಿಕ್ಷಣಕ್ಕೆ ಪೂರಕವಾಗಿದೆ ಮತ್ತು ಮಾನವೀಯ ಮೌಲ್ಯಗಳನ್ನು ಪರಸ್ಪರ ಸಂಬಂಧ ಸಮಯಪ್ರಜ್ಞೆ ಏಕಾಗ್ರತೆ ಮಕ್ಕಳು ರಂಗಭೂಮಿಯಲ್ಲಿ ಭಾಗವಹಿಸುವುದರಿಂದ ಮಕ್ಕಳಲ್ಲಿರುವ ಪ್ರತಿಭೆಯನ್ನು ಹೊರಹಾಕಲು ಸಾಧ್ಯವಾಗುತ್ತದೆ ಎಂದು ರಂಗ ನಿರ್ದೇಶಕ ಕೆ.ಎಂ.ಕೀರ್ತಿರಾಜ್ ತಿಳಿಸಿದರು.

ರಂಗಾಂತರಂಗ ಸಾಂಸ್ಕೃತಿಕ ವೇದಿಕೆಯೂ ಚಿನ್ಮಯ ವಿದ್ಯಾಲ ಯದಲ್ಲಿ ಆಯೋಜಿಸಿದ್ದ ಮಕ್ಕಳಲ್ಲಿ ರಂಗಭೂಮಿ ಕುರಿತ ಕಾರ್ಯಾ ಗರದಲ್ಲಿ ಮುಖ್ಯ ಅತಿಥಿಗಳಾಗಿ ಅವರು ಮಾತನಾಡಿದರು. ನಂತರ ಮಕ್ಕಳಿಗೆ ಧ್ವನಿ, ಮಾತು, ರಂಗ ಆಟಗಳು, ಕಥೆ, ಕನ್ನಡ ನಾಡು, ನುಡಿ ಮತ್ತು ಮಕ್ಕಳ ರಂಗ ಭೂಮಿಯ ಬಗ್ಗೆ ಅರಿವು ಮೂಡಿಸಿದರು. ಕಾರ್ಯಕ್ರಮದಲ್ಲಿ. ಚಿನ್ಮಯ ವಿದ್ಯಾಲಯ ಅಧ್ಯಕ್ಷ ಎಚ್.ಕೆ.ಅಶೋಕ್ ಕುಮಾರ್, ಪ್ರಾಂಶುಪಾಲೆ ಎಂ.ವಿದ್ಯಾ, ಪತ್ರಕರ್ತರಾದ ಬೀರೇಶ್ ಕಬಿನಿ, ಪುರುಷೋತ್ತಮ್ ಅಗ್ನಿ, ರಂಗಾಂತರಂಗ ಸಂಚಾಲಕ ಎಸ್. ಎನ್.ವೆಂಕಟೇಶ್ ಇನ್ನಿತರರು ಉಪಸ್ಥಿತರಿದ್ದರು.

ಡಾ.ಭರತ್ ಕೆಂಪಣ್ಣ ಹೇಳಿಕೆ

ಪಠ್ಯೇತರ ಚಟುವಟಿಕೆಗಳು ಮಕ್ಕಳ ಬೆಳವಣಿಗೆಗೆ ಪೂರಕ

ರಾಮನಗರ/ಬಿಡದಿ: ಶಿಕ್ಷಣಾರ್ಜನೆಯಲ್ಲಿ ಪಠ್ಯಕ್ರಮ ಮುಖ್ಯವಾಗಿದೆ. ಸಮಗ್ರ ಬೆಳವಣಿಗೆಗೆ ಪಠ್ಯೇತರ ಚಟುವಟಿಕೆಗಳು ಸಹ ಅಗತ್ಯವಾಗಿದೆ ಎಂದು ಬಿಡದಿಯ ಭರತ್ ಕೆಂಪಣ್ಣ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಡಾ.ಭರತ್ ಕೆಂಪಣ್ಣ ಹೇಳಿದರು.

ಪಟ್ಟಣದ ರೈತ ಸಮುದಾಯ ಭವನದಲ್ಲಿ ಎ1 ಇಂಟರ್ ನ್ಯಾಷನಲ್ ಶಾಲೆ ಹಮ್ಮಿಕೊಂಡಿದ್ದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಎ1 ಶಾಲೆಯ ಶಿಕ್ಷಕರು ಪಠ್ಯಕ್ರಮಗಳಿಗೆ ಕೊಟ್ಟಷ್ಟೇ ಆಧ್ಯತೆಯನ್ನು ಪಠ್ಯೇತರ ಚಟುವಟಿಕೆಗಳಿಗೂ ಕೊಡುತ್ತಿದ್ದಾರೆ. ಇದು ಮಕ್ಕಳ ಒಟ್ಟಾರೆ ಬೆಳವಣಿಗೆಗೆ ಪೂರಕವಾಗಿದೆ ಎಂದು ತಿಳಿಸಿದರು.

ಬಿಡದಿ ಪೊಲೀಸ್‌ಠಾಣೆಯ ಎಸ್.ಐ ಕೇಶವ ಮೂರ್ತಿಯವರು ಮಾತನಾಡಿ ರಸ್ತೆ ನಿಯಮಗಳನ್ನು ಪಾಲಿಸುವಂತೆ ಪೋಷಕರು ತಮ್ಮ ಮಕ್ಕಳಿಗೆ ತಿಳುವಳಿಕೆ ಮೂಡಿಸಬೇಕು. 18 ವಯೋಮಾನದೊಳಗಿನ ಮಕ್ಕಳು ವಾಹನ

ಚಲಾಯಿಸಬಾರದು. ಚಾಲನಾ ಪರವಾಣಿಗೆ ಉಳ್ಳವರು ಮಾತ್ರ ವಾಹನ ಚಲಾಯಿಸಬೇಕು. ದ್ವಿಚಕ್ರ ವಾಹನ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಿ ವಾಹನ ಚಲಾಯಿಸಬೇಕು ಎಂಬ ನಿಯಮವೂ ಸೇರಿದಂತೆ ಕಾನೂನು ಪಾಲಿಸಿದರೆ, ಮಕ್ಕಳು ಸಹ ಅದನ್ನೇ ಕಲಿಯುತ್ತಾರೆ ಎಂದು ಕರೆ ನೀಡಿದರು.

ಅತಿಥಿಗಳಾಗಿ ಭಾಗವಹಿಸಿದ್ದ ಬಿಡದಿಯ ಕೆನರಾ ಬ್ಯಾಂಕ್ ಮುಖ್ಯ ವ್ಯವಸ್ಥಾಪಕ ಶಿವಗುರುನಾಥನ್, ಬಿಡದಿ ಠಾಣೆ ಎಸ್‌ಐ ದೇವರಾಜು, ಅಮ್ಮೆ ಇಂಡಿಯಾ ಮೈಸೂರು ಮತ್ತು ಅಥರ್ವ ಬ್ರಾಂಡ್ ಮುಖ್ಯ ಅಧಿಕಾರಿ ಮೊಹಮ್ಮದ್ ಬಿಲಾಲ್ ಸಿದ್ದಿಕಿ, ಬಿಡದಿ ಕ್ಲಸ್ಟರ್ ಅಧಿಕಾರಿ ಚಂದನ, ಕೇಂಬ್ರಿಡ್ಜ್ ಇಂಟರ್‌ನ್ಯಾಷಲನ್ ಶಾಲೆಯ ಸಂಸ್ಥಾಪಕ ಅತೀಕ್ ಸುಲ್ತಾನ ಮಾತನಾಡಿದರು.

ಸಸಿಯೊಂದಕ್ಕೆ ನೀರು ಎರೆಯುವುದರ ಮೂಲಕ ಗಣ್ಯರು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ವಾರ್ಷಿಕೋತ್ಸವದ ಅಂಗವಾಗಿ ಏರ್ಪಡಿಸಿದ್ದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಶಿಕ್ಷಕಿ ನಾದಿಯಾ ಅಮೀನ್ ಸ್ವಾಗತಿಸಿದರು. ಶಾಲೆಯ ಕಾರ್ಯದರ್ಶಿ ಅಜ್ಗರ್ ಉಲ್ಲಾ, ಮುಖ್ಯ ಶಿಕ್ಷಕಿ ನಫೀಜಾ ಬೇಗಂ ಕಾರ್ಯಕ್ರಮದ ನೇತೃತ್ವವಹಿಸಿದ್ದರು.

ಉದ್ಘಾಟನೆ ನಂತರ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪುಟಾಣಿ ಮಕ್ಕಳ ವೇಷಭೂಷಣ ಸ್ಪರ್ಧೆ ಗಮನ ಸೆಳೆಯಿತು. ಶಾಲೆಯ ವಿದ್ಯಾರ್ಥಿಗಳು ನೃತ್ಯ ಪ್ರದರ್ಶನ ನೀಡಿದರು.

ಶೀಳನೆರೆ ಹೋಬಳಿಯ ಅಲವು ಗ್ರಾಮದಲ್ಲಿ

ಕಾಮಗಾರಿಗೆ ಪೂಜೆ ಸಲ್ಲಿಸಿದ ಶಾಸಕ

ಕೆ.ಆರ್.ಪೇಟೆ ತಾಲ್ಲೂಕಿನ ಶೀಳನೆರೆ ಹೋಬಳಿಯ ಚನ್ನಾಪುರ, ಅತ್ತಿಮರುವನಹಳ್ಳಿ, ಉಯ್ಗೋನಹಳ್ಳಿ, ಮರುವನಹಳ್ಳಿ, ಹರಳಹಳ್ಳಿ, ನೀತಿಮಂಗಲ, ಮೈಲನಹಳ್ಳಿ, ವಸಂತಪುರ, ಹೆಮ್ಮಡಹಳ್ಳಿ, ಗುಡಗನಹಳ್ಳಿ, ರಾಜಘಟ್ಟ, ರಾಮನಹಳ್ಳಿ, ಹಿರಳಹಳ್ಳಿ, ಶಿವಪುರ, ಗವೀಗೌಡನಕೊಪ್ಪಲು ಗ್ರಾಮಗಳಲ್ಲಿ ಶಾಸಕರ ಪ್ರದೇಶಾಭಿವೃದ್ಧಿ ನಿಧಿ ಅನುಧಾನದಲ್ಲಿ ಕೈಗೊಳ್ಳಲಾಗುತ್ತಿರುವ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಹೆಚ್.ಟಿ.ಮಂಜು ಅವರು ಭೂಮಿ ಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಶಾಸಕರು ಒಂದು ತಾಲ್ಲೂಕು ಅಭಿವೃದ್ಧಿಯಾಗಿದೆ ಎಂದು ಹೊರ ತಾಲ್ಲೂಕಿನವರಿಗೆ ತಿಳಿಯಲು ಮೊದಲು ರಸ್ತೆಗಳ ಅಭಿವೃದ್ಧಿಯಾಗಬೇಕು. ರಸ್ತೆ ಅಭಿವೃದ್ಧಿಯಾದರೆ ಸದರಿ ರಸ್ತೆಯಲ್ಲಿ ಹೋಗುವವರು ಯಾರಪ್ಪ ಎಂ.ಎಲ್.ಎ.ಪುಣ್ಯಾತ್ಮ ಎಂದು ಹೇಳುತ್ತಾರೆ. ಹಾಗಾಗಿ ರಸ್ತೆಗಳ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿ ಕೆಲಸ ಮಾಡುತ್ತಿದ್ದೇನೆ. ತಾಲ್ಲೂಕಿನಲ್ಲಿ ಸುಮಾರು 400ಹಳ್ಳಿಗಳಿವೆ ಎಲ್ಲಾ ಹಳ್ಳಿಗಳ ಸಂಪರ್ಕ ರಸ್ತೆಗಳು ಡಾಂಬರು ಕಂಡು ಹತ್ತಾರು ವರ್ಷಗಳೇ ಕಳೆದಿವೆ. ಇದಕ್ಕೆ ಸೂಕ್ತ ಅನುಧಾನ ನೀಡುವಂತೆ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು, ಜಿಲ್ಲಾ ಉಸ್ತುವಾರಿ ಮಂತ್ರಿಗಳು ಸೇರಿದಂತೆ ವಿವಿಧ ಇಲಾಖೆಗಳ ಸಚಿವರಿಗೆ ತಾಲ್ಲೂಕಿಗೆ ಸೂಕ್ತ ಅನುಧಾನ ನೀಡುವಂತೆ ಮನವಿ ಮಾಡಿದ್ದೇನೆ ಆದರೂ ಸಹ ಸರ್ಕಾರವು ಹಾಗೂ ಮುಖ್ಯಮಂತ್ರಿಗಳು ನನ್ನ ಮನವಿ ಸ್ಪಂದಿಸುತ್ತಿಲ್ಲ. ಇದರಿಂದಾಗಿ ತಾಲ್ಲೂಕಿನ ಅಭಿವೃದ್ಧಿಗೆ ಹಿನ್ನಡೆಯಾಗುತ್ತಿದೆ. ಕಾಂಗ್ರೆಸ್ ಶಾಸಕರಿಗೆ ನೀಡುವಷ್ಟು ಅನುಧಾನವನ್ನಾದರೂ ನೀಡಿದರೆ ತಕ್ಕ ಮಟ್ಟಿಗೆ ತಾಲ್ಲೂಕಿನ ಅಭಿವೃದ್ದಿಗೆ ಅನುಧಾನವನ್ನು ಹಂಚಿಕೆ ಮಾಡಿ ಅಭಿವೃದ್ಧಿ ಕೈಗೊಳ್ಳಬಹುದು. ಆದರೆ ಈಗ ವಿರೋಧ ಪಕ್ಷದ ಶಾಸಕನಾದ ನನಗೆ ನೀಡುತ್ತಿರುವ ಕೇವಲ 25ಕೋಟಿ ಅನುಧಾನ ಆನೆ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ನೀಡಿದಂತಾಗಿದೆ. ಹಾಗಾಗಿ ಮುಖ್ಯಮಂತ್ರಿಗಳು ನಮ್ಮ ಕೆ.ಆರ್.ಪೇಟೆ ಕ್ಷೇತ್ರದ ಜನಸಾಮಾನ್ಯರ ಹಿತದೃಷ್ಠಿಯಿಂದ ರಸ್ತೆ ಮತ್ತು ಇತರೆ ಮೂಲಭೂತ ಸೌಲಭ್ಯಗಳಿಗೆ ವಿಶೇಷ ಅನುಧಾನ ನೀಡಬೇಕು ಎಂದು ಶಾಸಕ ಹೆಚ್.ಟಿ.ಮಂಜು ಒತ್ತಾಯ ಮಾಡಿದರು. ಗ್ರಾಮೀಣ ರಸ್ತೆಗಳು ಸಾಕಷ್ಟು ಅದ್ವಾನಗೊಂಡಿದ್ದು ಎಲ್ಲಾ ಕಡೆಯಿಂದ ರಸ್ತೆ ಅಭಿವೃದ್ಧಿಗೆ ಅನುದಾನ ನೀಡುವಂತೆ ಒತ್ತಾಯ ಮಾಡುತ್ತಿದ್ದಾರೆ. ಹಾಗಾಗಿ ಸಂವಿಧಾನ ಬದ್ಧವಾಗಿ ನೀಡಬೇಕಾದ ಶಾಸಕರ ಪ್ರದೇಶಾಭಿವೃದ್ಧಿ ನಿಧಿಯನ್ನು ಕಾಂಗ್ರೆಸ್ ಶಾಸಕರಿಗೆ ನೀಡುವ ಮಾದರಿಯಲ್ಲಿ ನನ್ನ ಕೆ.ಆರ್.ಪೇಟೆ ಕ್ಷೇತ್ರಕ್ಕೂ ನೀಡುವ ಮೂಲಕ ನನ್ನ ಕ್ಷೇತ್ರದ ಜನತೆಗೆ ಅನುಕೂಲ ಮಾಡಿಕೊಡಬೇಕು ಎಂದು ಶಾಸಕರು ಸರ್ಕಾರವನ್ನು ಒತ್ತಾಯ ಮಾಡಿದ್ದಾರೆ.

ಈ ಸಂದರ್ಭದಲ್ಲಿ ಶೀಳನೆರೆ ಹೋಬಳಿ ಜೆಡಿಎಸ್ ಅಧ್ಯಕ್ಷ ಸ್ವಾಮೀಗೌಡ, ಗ್ರಾ.ಪಂ.ಮಾಜಿ ಅಧ್ಯಕ್ಷರಾದ ಭೈರಾಪುರ ಹರೀಶ್, ರಾಯಸಮುದ್ರ ಯೋಗೇಶ್, ಸಿಂಧುಘಟ್ಟ ಗ್ರಾ.ಪಂ.ಅಧ್ಯಕ್ಷ ರೂಪಾಮಹಾದೇವ್, ಹರಳಹಳ್ಳಿ ಗ್ರಾ.ಪಂ.ಅಧ್ಯಕ್ಷೆ ಕಾವ್ಯಚಂದ್ರು, ಶೀಳನೆರೆ ಗ್ರಾ.ಪಂ.ಸದಸ್ಯರಾದ ಎಸ್.ಪಿ.ಸಿದ್ದೇಶ್, ಗಾಯಿತ್ರಿಸಿದ್ದೇಶ್, ನವಿಲುಮಾರನಹಳ್ಳಿ ರಮ್ಯ ಹರೀಶ್, ಮುಖಂಡರಾದ ಬೇಲದಕೆರೆ ಮರೀಗೌಡ, ಭೈರಾಪುರ ಶಿವಣ್ಣಶೆಟ್ಟಿ, ಮೈಲನಹಳ್ಳಿ ಎಂ.ಪ್ರಭಾಕರ್, ಕೇಶವಮೂರ್ತಿ, ನವಿಲುಮಾರನಹಳ್ಳಿ ಹರೀಶ್, ಮರಡಹಳ್ಳಿ ಪ್ರದೀಪ್, ಗುಡುಗನಹಳ್ಳಿ ಶ್ರೀನಿವಾಸಗೌಡ, ಹಿರಳಹಳ್ಳಿ ರೇಷ್ಮೆ ತಿಮ್ಮೇಗೌಡ, ವಿಜಯ್‌ಕುಮಾರ್, ಕುಮಾರಸ್ವಾಮಿ, ಶಂಕರೇಗೌಡ, ಉಪನ್ಯಾಸಕ ಶ್ರೀನಿವಾಸ್, ಅತ್ತಿಮರವನಹಳ್ಳಿ ಆನಂದ್, ಉಯ್ಗೋನಹಳ್ಳಿ ಕಿಟ್ಟಿ, ಶ್ರೀಧರ್, ಸಿಂಧುಘಟ್ಟ ಗ್ರಾ.ಪಂ.ಪಿಡಿಓ ವಾಣಿ, ಹರಳಹಳ್ಳಿ ಪಿಡಿಓ ಬಸವಶೆಟ್ಟಿ, ಶೀಳನೆರೆ ಗ್ರಾ.ಪಂ.ಪಿಡಿಓ ನವೀನ್, ಶಾಸಕರ ಆಪ್ತ ಸಹಾಯಕ ಕುಮಾರಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರಿನ ಸಿದ್ಧಾರ್ಥನಗರದಲ್ಲಿ ಕನಕ ಭವನದಲ್ಲಿ ಕಲಬುರ್ಗಿ ವಿಭಾಗದ ಶ್ರೀ ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠದ ಪೀಠಾಧಿಪತಿ ಶ್ರೀ ಸಿದ್ಧರಾಮಾನಂದ ಸ್ವಾಮೀಜಿ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ, ನಗರ ಪಾಲಿಕೆಯ ಮಾಜಿ ಮೇಯರ್ ಟಿ.ಬಿ.ಚಿಕ್ಕಣ್ಣ, ಪುಷ್ಪಲತಾ ಚಿಕ್ಕಣ್ಣ, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಬೀರಿಹುಂಡಿ ಬಸವಣ್ಣ, ನಗರಪಾಲಿಕೆ ಮಾಜಿ ಸದಸ್ಯ ಗೋಪಿ, ಶಿವಣ್ಣ, ಮುಖಂಡರಾದ ಬಸವರಾಜ್, ರವಿ, ದೊಡ್ಡೇಗೌಡ, ಕಮಲ, ಹರೀಶ್ ಬೀರೇಶ್, ನಾಗರಾಜ್, ಪ್ರಭು, ಕರಿಗೌಡ, ಮಹೇಶ್, ಸಿದ್ದಪ್ಪ ಸೇರಿ ಅನೇಕರು ಉಪಸ್ಥಿತರಿದ್ದರು.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

ವಿದ್ಯಾರ್ಥಿಗಳು ಕೌಶಲ್ಯದ ಬಗ್ಗೆ ಹೆಚ್ಚು ತಿಳಿದುಕೊಳ್ಳಬೇಕಿದೆ

ಚಾಮರಾಜನಗರ, ಪ್ರಸ್ತುತ ಸ್ಪರ್ಧಾತ್ಮಕ ಜಗತ್ತಿನಲ್ಲಿ ಕೌಶಲ್ಯದ ಬಗ್ಗೆ ವಿದ್ಯಾರ್ಥಿಗಳು ಹೆಚ್ಚಾಗಿ ತಿಳಿದುಕೊಳ್ಳಬೇಕಿದೆ ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೆಚ್ಚುವರಿ ಜಿಲ್ಲಾಧಿಕಾರಿ ಸೈಯದಾ ಆಯಿಷಾ ಸಲಹೆ ನೀಡಿದರು.

▶▶ ಸೈಯದಾ ಆಯಿಷಾ ಸಲಹೆ
▶▶ ವಿದ್ಯಾರ್ಥಿವೇತನ ವಿತರಣಾ ಕಾರ್ಯಕ್ರಮದಲ್ಲಿ ಸಲಹೆ

ನಗರದ ಮೌಲಾನಾ ಆಜಾದ್ ಕಲ್ಯಾಣ ಮಂಟಪದಲ್ಲಿ ಮೌಲಾನಾ ಆಜಾದ್ ಹಾಸ್ಟೆಲ್ ಸುನ್ನಿ ವತಿಯಿಂದ ಆಯೋಜಿಸಿದ್ದ ವಿದ್ಯಾರ್ಥಿವೇತನ ವಿತರಣಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ವಿದ್ಯಾಭ್ಯಾಸವನ್ನು ಪಡೆದು ಯಶಸ್ಸು ಕಾಣಬೇಕಾದರೆ ವಿದ್ಯಾರ್ಥಿಗಳಲ್ಲಿ ಶಿಸ್ತು ಮತ್ತು ಸಮಯ ಪ್ರಜ್ಞೆ ಇರಬೇಕು. ಸಮಯವನ್ನು ಗೌರವಿಸಿ ಅದನ್ನು ಸದುಪಯೋಗ ಪಡೆದುಕೊಳ್ಳಬೇಕು. ಒಮ್ಮೆ ಕಳೆದು ಹೋದ ಸಮಯ ಮತ್ತೆ ಬರುವುದಿಲ್ಲ ಹಾಗಾಗಿ ಸಮಯಕ್ಕೆ ಸರಿಯಾಗಿ ಅಧ್ಯಯನ ಮಾಡಬೇಕು. ಆಗ ಮಾತ್ರ ಉನ್ನತ ಶಿಕ್ಷಣ ಪಡೆದು ಉತ್ತಮವಾದ ಹುದ್ದೆ ಅಲಂಕರಿಸಬಹುದು ಎಂದರು.

ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರು ಅತೀ ಕಡು ಬಡತನದ ಕುಟುಂಬದಿಂದ ಬಂದವರು ಅವರು ದೇಶಕ್ಕೆ ಉತ್ತಮ ಸಂವಿಧಾನವನ್ನು ಕೊಡುಗೆಯಾಗಿ ನೀಡಿದ್ದಾರೆ. ಭಾರತದ ಕ್ಷಿಪಣಿ ಮನುಷ್ಯ ಡಾ.ಎಪಿಜೆ ಅಬ್ದುಲ್ ಕಲಾಂ ಅವರು ರಾಷ್ಟ್ರಪತಿಯಾಗಿ ಈ ದೇಶದಲ್ಲಿ ಉತ್ತಮ ಆಡಳಿತ ಮಾಡಿದವರು ಹೀಗೆ ಹಲವಾರು ಗಣ್ಯರ ಸಾಧನೆಯನ್ನು ಮಾದರಿಯಾಗಿಟ್ಟುಕೊಂಡು ಗುರಿ ಸಾಧನೆಯತ್ತ ವಿದ್ಯಾರ್ಥಿಗಳು ಸಾಗಬೇಕಿದೆ ಎಂದರು.

ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾದ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಮಾತನಾಡಿ, ವಿದ್ಯಾರ್ಥಿಗಳು ಮುಂದಿನ ಉಜ್ವಲ ಭವಿಷ್ಯಕ್ಕಾಗಿ ಗುರಿ ಇಟ್ಟುಕೊಂಡು ಗುರಿ ಸಾಧಿಸಲು ಬೇಕಾದಂತಹ ತಯಾರಿಯನ್ನು ಇಂದಿನಿಂದಲೇ ಮಾಡಿಕೊಳ್ಳಬೇಕು. ಜ್ಞಾನವನ್ನು ವೃದ್ಧಿಸಿಕೊಳ್ಳಲು ಪುಸ್ತಕ, ಪತ್ರಿಕೆಗಳು ಹಾಗೂ ನಿಯತಕಾಲಿಕೆಗಳನ್ನು ಪ್ರತಿದಿನ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಪ್ರಚಲಿತ ಘಟನೆಗೆ ಸಂಬಂಧಿಸಿದಂತೆ ಮಾಸಿಕ ಪತ್ರಿಕೆಗಳನ್ನು ನಿರಂತರವಾಗಿ ಓದಿ ನಂತರ ಬರೆದುಕೊಂಡು ಅಭ್ಯಾಸ ಮಾಡಬೇಕು. ಮೌಲಾನಾ ಆಜಾದ್ ಹಾಸ್ಟೆಲ್ ಸುನ್ನಿ ಸಮಿತಿ ವತಿಯಿಂದ ನೀಡುತ್ತಿರುವಂತಹ ವಿದ್ಯಾರ್ಥಿ ವೇತನವನ್ನು ಸದುಪಯೋಗಪಡಿಸಿಕೊಂಡು ತಮ್ಮ ಗುರಿ ಸಾಧನೆಯತ್ತ ಸಾಗಿ ಬಡ ವಿದ್ಯಾರ್ಥಿಗಳಿಗೆ ಸಹಾಯ ಮಾಡಿ ಎಂದು ವಿಧ್ಯಾರ್ಥಿಗಳಿಗೆ ಸಲಹೆ ನೀಡಿದರು.

ಇದೇ ಸಂದರ್ಭದಲ್ಲಿ ಮೌಲಾನಾ ಆಜಾದ್ ಹಾಸ್ಟೆಲ್ ಸುನ್ನಿ ಸಮಿತಿಯ ವತಿಯಿಂದ 130 ಕ್ಕೂ ಹೆಚ್ಚು ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ವಿಧ್ಯಾರ್ಥಿ ವೇತನವನ್ನು ನೀಡಿ ಶಿಕ್ಷಣಕ್ಕೆ ಪ್ರೋತ್ಸಾಹಿಸಲಾಯಿತು.

ಮಾಹಿತಿ ಕೇಂದ್ರ ಉದ್ಘಾಟನೆ:

ನಗರದ ಮೌಲಾನಾ ಆಜಾದ್ ಹಾಸ್ಟೆಲ್ ಆವರಣದಲ್ಲಿ ಮೌಲಾನಾ ಆಜಾದ್ ಮಾಹಿತಿ ಕೇಂದ್ರದ ಉದ್ಘಾಟನೆಯನ್ನು ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾದ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ನೆರವೇರಿಸಿದರು. ಈ ಸೇವಾ ಕೇಂದ್ರದಲ್ಲಿ ಪ್ಯಾನ್ ಕಾರ್ಡ್, ಆಧಾರ್ ಕಾರ್ಡ್,ಮತದಾರರ ಗುರುತಿನ ಚೀಟಿ, ಆನ್‌ಲೈನ್ ಟಿಕೆಟ್‌ಗಳು, ಪಾಸ್‌ಪೋರ್ಟ್, ವಿದ್ಯಾರ್ಥಿ ವೇತನದ ಅರ್ಜಿ, ಆದಾಯ ಪ್ರಮಾಣಪತ್ರ ಹಾಗೂ ಇತರೆ ಸೇವೆಗಳು ಉಚಿತವಾಗಿ ಮಾಡಿಕೊಳ್ಳಲಾಗುವುದು.

ಕಾರ್ಯಕ್ರಮದಲ್ಲಿ ಬೆಂಗಳೂರು ಕಂದಾಯ ಇಲಾಖೆಯ ನಿರ್ದೇಶಕ ಇಸ್ಲಾಹುದ್ದೀನ್ ಗಡಿಯಾಲ್, ಕಾಮಿಲ್ ನಯೀಮ್ ಉಲ್ ಹಕ್, ಪ್ರಾಂಶುಪಾಲ ಇಸ್ಮಾಯಿಲ್ ಸಾಹಿಬ್, ಎಸ್ ಡಿಪಿಐ ಜಿಲ್ಲಾಧ್ಯಕ್ಷ ಕಲೀಲ್ ಉಲ್ಲಾ, ಮೌಲಾನಾ ಆಜಾದ್ ಹಾಸ್ಟೆಲ್ ಸುನ್ನಿ ಸಮಿತಿಯ ಅಧ್ಯಕ್ಷ ಮಹಮದ್ ಜಾವೀದ್, ಉಪಾಧ್ಯಕ್ಷ ಎಸ್.ಎಂ.ಫಹಾಧ್, ಕಾರ್ಯದರ್ಶಿ ಜಬೀನೂರ್, ಖಜಾಂಚಿ ಇಕ್ಬಾಲ್ ಪಾಷಾ, ಎ.ಶುಹೇಬ್ ಖಾನ್, ನವಾಜ್ ಅಹಮದ್, ಸಿ.ಕೆ. ನಯಾಜ್ ಉಲ್ಲಾ ಹಾಗೂ ಇತರರು ಹಾಜರಿದ್ದರು.

ಶ್ರೀರಾಮ ತಾರಕ ಯಜ್ಞ ಸಂಪನ್ನ

ರಾಮನಗರದಲ್ಲಿ ರಾಮೋತ್ಸವ । ಜ.18ರವರೆಗೆ ವಿವಿಧ ಪೂಜಾ ಕಾರ್ಯಕ್ರಮ

ರಾಮನಗರ: ಜ.18ರವರೆಗೆ ನಡೆಯುವ ರಾಮೋತ್ಸವ ಶ್ರೀರಾಮತಾರಕ ಯಜ್ಞದ ಮೂಲಕ ಆರಂಭವಾಯಿತು. ನಗರದ ಬನ್ನಿಮಂಟಪದಲ್ಲಿ ಗುರುವಾರ ಪ್ರಾತಃ ಕಾಲದಲ್ಲಿ ಆರಂಭವಾದ ಶ್ರೀರಾಮ ತಾಯಕ ಯಜ್ಞ ಮಧ್ಯಾಹ್ನದ ವೇಳೆ ಸಂಪನ್ನವಾಯಿತು.

108 ಪುರೋಹಿತರು ನಿರಂತವಾಗಿ ಮಂತ್ರ ಪಠಣ ನೋಡುಗರಲ್ಲಿ ಭಕ್ತಿ ಭಾವವನ್ನು ಇಮ್ಮಡಿಗೊಳಿಸಿತು. ಶೃಂಗೇರಿ ಮಠದ ಶ್ರೀನಾಥ ಶರ್ಮ ನೇತೃತ್ವದಲ್ಲಿ ನಡೆದ ಹೋಮ ಹವನದಲ್ಲಿ ಸಾವಿರಾರು ಮಂದಿ ಭಕ್ತರು ಪಾಲ್ಗೊಂಡು ದೇವರ ಕೃಪೆಗೆ ಪಾತ್ರರಾದರು.

ಯಾಗ ಸ್ಥಳದಲ್ಲಿ ಗಂಗಾಪೂಜೆ, ಪುಣ್ಯಾಹುತಿ, ಗೋಪೂಜೆ, ಗಣಪತಿ ಹೋಮ ನಡೆದ ಬಳಿಕ ಕಳಸ ಸ್ಥಾಪಿಸಲಾಗಿತ್ತು. ರಾಮದೇವರ ಬೆಟ್ಟದಿಂದ ಶ್ರೀ ರಾಮದೇವರ ಉತ್ಸವಮೂರ್ತಿಯನ್ನು ತರಿಸಲಾಗಿತ್ತು. ಬಗೆಬಗೆಯ ಹೂವುಗಳಿಂದ ಸಿಂಗರಿಸಲಾಗಿತ್ತು. ಬೃಹತ್ ಹೋಮಕುಂಡದಲ್ಲಿ 8ರಿಂದ 10 ವೈದಿಕರು ಹೋಮ ಹವನಗಳಿಂದ ಧಾರ್ಮಿಕ ವಿಧಿ ವಿಧಾನಗಳನ್ನು ನೆರವೇರಿಸಿದರೆ, ಮತ್ತೊಂದೆಡೆ ಉಳಿದ ವೈದಿಕರು ಲಕ್ಷಕ್ಕೂ ಅಧಿಕ ಶ್ರೀ ರಾಮತಾರಕ ಮಂತ್ರ ಶ್ಲೋಕಗಳನ್ನು ಏಕಕಾಲದಲ್ಲಿ ಪಠಿಸಿದರು. ಭಕ್ತ ಗಣ ರಾಮನಾಮ, ಹನುಮಾನ್ ಚಾಲೀಸಾಸ್ತೋತ್ರ ಪಠಿಸಿದರು. ಯಜ್ಞ ಕಾರ್ಯದಲ್ಲಿ ಅಯೋಧ್ಯೆಯ ರಾಮಮಂದಿರ ಉದ್ಘಾಟನೆಯಲ್ಲಿ ಪಾಲ್ಗೊಂಡಿದ್ದ ವಿಜಯ್ ಕುಮಾರ್ ನೇತೃತ್ವದ ತಂಡ ಮಂಗಳ ವಾದ್ಯ ನುಡಿಸಿದರು. ಭಕ್ತರಿಗೆ ಶ್ರೀ ಕೃಷ್ಣಸ್ಮೃತಿ ಕಲ್ಯಾಣ ಮಂಟಪದಲ್ಲಿ ಪ್ರಸಾದ ವಿನಿಯೋಗಕ್ಕೆ ವ್ಯವಸ್ಥೆ ಮಾಡಲಾಗಿತ್ತು.

ಆಧ್ಯಾತ್ಮಿಕತೆಗೆ ಪ್ರೋತ್ಸಾಹ – ಶ್ರೀನಾಥ ಶರ್ಮ

ಶ್ರೀರಾಮನು ಧರ್ಮ, ಧೈರ್ಯ ಮತ್ತು ನಿಷ್ಠೆಯ ದೇವತೆಯಾಗಿ ಪೂಜಿಸಲ್ಪಡುತ್ತಾನೆ. "ತಾರಕ" ಎಂದರೆ ಮೋಕ್ಷ ಅಥವಾ ಮುಕ್ತಿ, ಈ ಹೋಮ ಕಷ್ಟಗಳ ನಿವಾರಣೆ, ಮನಃಶಾಂತಿ, ಮತ್ತು ಆಧ್ಯಾತ್ಮಿಕತೆಗೆ ಪ್ರೋತ್ಸಾಹಿಸುತ್ತದೆ ಎಂದು ಮುಖ್ಯ ಪುರೋಹಿತರಾದ ರಾಜು ಶ್ರೀನಾಥ ಶರ್ಮ ಪ್ರತಿಕ್ರಿಯೆ ನೀಡಿದರು. ಪ್ರಾಧಿಕಾರದ ಮಾಜಿ ಅಧ್ಯಕ್ಷ ಸಿ.ಎನ್.ಆರ್.ವೆಂಕಟೇಶ್ ಅವರು ಪ್ರತಿಕ್ರಿಯಿಸಿದರು.
ಶಾಸಕ ಇಕ್ಬಾಲ್ ಹುಸೇನ್ ಸ್ಥಳಕ್ಕೆ ಭೇಟಿ ನೀಡಿ ಶ್ರೀರಾಮನಿಗೆ ಪುಷ್ಪಾರ್ಚನೆಗೈದರು. ಬಿಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷರಾದ ವಿಜಯ್ ದೇವ್, ಮಾಜಿ ಶಾಸಕ ಕೆ.ರಾಜು, ಪ್ರಾಧಿಕಾರದ ಅಧ್ಯಕ್ಷ ಎ.ಬಿ.ಚೇತನ್ ಕುಮಾರ್, ಮಾಜಿ ಅಧ್ಯಕ್ಷ ಸಿ.ಎನ್.ಆರ್.ವೆಂಕಟೇಶ್, ಬಮೂಲ್ ನಿರ್ದೇಶಕರಾದ ಹರೀಶ್, ಅಶೋಕ್, ವಾಸು, ಶ್ರೀನಿವಾಸ್ ಸೇರಿದಂತೆ ಹಲವು ಉಪಸ್ಥಿತರಿದ್ದರು.

ತಾಯಿ ನಂತರ ಮತ್ತೊಂದು ಹುಲಿ ಮರಿ ಸೆರೆ

ಇನ್ನೂ ಪತ್ತೆಯಾಗದ 3 ಹುಲಿ ಮರಿಗಳ ಸೆರೆಗೆ ಅರಣ್ಯ ಇಲಾಖೆ ಕಾರ್ಯಾಚರಣೆ

ಚಾಮರಾಜನಗರ: ತಾಲ್ಲೂಕಿನ ನಂಜೇದೇವನಪುರ ಗ್ರಾಮದ ಸುತ್ತಮುತ್ತ ಕಾಣಿಸಿಕೊಂಡಿದ್ದ 5 ಹುಲಿಗಳಲ್ಲಿ ಈಗ ತಾಯಿ ಹುಲಿಯ ನಂತರ ಒಂದು ಹುಲಿ ಮರಿಯನ್ನು ಅರಣ್ಯ ಇಲಾಖೆ ಅಧಿಕಾರಿಗಳು ಕೊನೆಗೂ ಸೆರೆ ಹಿಡಿದಿದ್ದಾರೆ.

ಗ್ರಾಮದ ಸುತ್ತಮುತ್ತ ಐದು ಹುಲಿಗಳು ಪ್ರತ್ಯಕ್ಷವಾಗಿ ಜನರಲ್ಲಿ ತೀವ್ರ ಆತಂಕ ಮೂಡಿಸಿದ್ದವು. ಈ ಹಿನ್ನೆಲೆ ಕಾರ್ಯಾಚರಣೆ ಕೈಗೊಂಡಿದ್ದ ಅರಣ್ಯ ಇಲಾಖೆಯ ಸಿಬ್ಬಂದಿ, ತಾಯಿ ಹುಲಿಯನ್ನು ಇತ್ತೀಚೆಗೆ ಸೆರೆ ಹಿಡಿ ದಿದ್ದರು. ಬಳಿಕ ಈಗ ಒಂದು ಮರಿ ಹುಲಿಯನ್ನು ಸೆರೆ ಹಿಡಿ ದಿದ್ದಾರೆ. ಅಂದಾಜು 10 ತಿಂಗಳ ಹೆಣ್ಣು ಹುಲಿ ಮರಿ ಸೆರೆ ಸಿಕ್ಕಿದೆ. ಸೆರೆ ಸಿಕ್ಕ ಹುಲಿ ಮರಿಯನ್ನು ಸುರಕ್ಷಿತವಾಗಿ ಇರಿಸಲಾಗಿದೆ. ಅದರ ಆರೋಗ್ಯದ ಮೇಲೆ ನಿಗಾ ವಹಿ ಸಲಾಗಿದೆ ಎಂದು ಅರಣ್ಯ ಇಲಾಖೆ ಮಾಹಿತಿ ನೀಡಿದೆ.

ಇನ್ನುಳಿದ ಮೂರು ಹುಲಿ ಮರಿಗಳ ಸೆರೆಗೆ ಕಾರ್ಯಾಚರಣೆ ಮುಂದುವರೆದಿದೆ. ಥರ್ಮಲ್ ಡ್ರೋನ್ ನಲ್ಲಿ ನಿನ್ನೆ ರಾತ್ರಿ ಮರಿ ಹುಲಿ ಓಡಾಟ ಪತ್ತೆಯಾದ ಹಿನ್ನೆಲೆಯಲ್ಲಿ, ದುಬಾರೆ ಆನೆ ಶಿಬಿರದ ನಾಲ್ಕು ಸಾಕಾನೆಗಳ ಸಹಾಯದಿಂದ ಇಬ್ಬರು ಪಶು ವೈದ್ಯರು ಅರಿವಳಿಕೆ ಚುಚ್ಚುಮದ್ದು



ಕೊಟ್ಟು ಮರಿಯನ್ನು ಸೆರೆ ಹಿಡಿಯಲಾಗಿದೆ ಎಂದು ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಅಧಿಕಾರಿಗಳು ತಿಳಿಸಿದ್ದಾರೆ.

ಕಳೆದ ಜ.9ರಂದು ನಂಜೇದೇವನಪುರ ಸಮೀಪ ತುಮಕೂರು ಮಾದರಿ ಕೇಜ್ ಗೆ ತಾಯಿ ಹುಲಿ ಬಿದ್ದಿತ್ತು. ಬಳಿಕ, ನಾಲ್ಕು ಮರಿ ಹುಲಿಗಳಿಗಾಗಿ ಬಿಆರ್ ಟಿ ಅರಣ್ಯ ಸಿಬ್ಬಂದಿ ಕಾರ್ಯಾಚರಣೆ ಮುಂದುವರಿಸಿದ್ದರು.

ಚಿರತೆಗೆ ವಿಷ ಹಾಕಿ ಹತ್ಯೆ: ಆರೋಪಿ

ಚಾಮರಾಜನಗರ: ಜಾನುವಾರುಗಳನ್ನು ಬೇಟೆಯಾಡುತ್ತಿದ್ದ ಚಿರತೆಯೊಂದಕ್ಕೆ ವಿಷಪ್ರಾಶನ ಮಾಡಿ ಕೊಂದು ಹಾಕಿದ್ದ ಆರೋಪಿಯನ್ನು ಚಾಮರಾಜನಗರ ಬಫರ್ ಅರಣ್ಯದ ಅಧಿಕಾರಿಗಳು ಬಂಧಿಸಿದ್ದಾರೆ. ತಾಲ್ಲೂಕಿನ ಆಲೂರು ಹೊಮ್ಮ ಗ್ರಾಮದ ದೊರೆಸ್ವಾಮಿ (60) ಬಂಧಿತ ಆರೋಪಿ.

ಕಳೆದ ಎರಡು ದಿನಗಳ ಹಿಂದೆ ಜಮೀನು ಸಮೀಪ ಚಿರತೆಯ ಕಳೇಬರ ಪತ್ತೆಯಾಗಿತ್ತು. 5–6 ವರ್ಷ ವಯ ಸ್ಸಿನ ಗಂಡು ಚಿರತೆ ಇದಾಗಿತ್ತು. ಸಾವಿಗೆ ವಿಷಪ್ರಾ ಶನವೇ ಕಾರಣ ಎಂಬುದು ಮರಣೋತ್ತರ ಪರೀಕ್ಷೆ ಯಲ್ಲಿ ಬೆಳಕಿಗೆ ಬಂದಿತ್ತು. ಅನುಮಾನದ ಹಿನ್ನೆಲೆಯಲ್ಲಿ, ದೊರೆಸ್ವಾಮಿಯನ್ನು ವಿಚಾರಿಸಿದಾಗ

ಸತ್ಯಾಂಶ ಹೊರಬಂದಿದೆ. ಚಿರತೆಯು ಬೇಟೆಯಾಡಿದ್ದ ಮಾಂಸಕ್ಕೆ ವಿಷ ಬೆರೆಸಿ ಜಾನುವಾರುಗಳ ಸಾವಿಗೆ ಸೇಡು ತೀರಿಸಿಕೊಂಡಿರುವುದಾಗಿ ದೊರೆಸ್ವಾಮಿ ವಿಚಾರಣೆ ವೇಳೆ ಬಾಯ್ಬಿಟ್ಟಿದ್ದಾನೆ ಎಂದು ಅರಣ್ಯ ಇಲಾಖೆ ಮೂಲಗಳು ತಿಳಿಸಿವೆ.

ತಾಳುಬೆಟ್ಟದಲ್ಲಿ ಚಿರತೆ: ಹನೂರು ತಾಲ್ಲೂಕಿನ ಮಲೆಮಹದೇಶ್ವರ ಬೆಟ್ಟದ ತಪ್ಪಲಾದ ಪ್ರಸಿದ್ಧ ಯಾತ್ರಾಸ್ಥಳ ತಾಳುಬೆಟ್ಟದಲ್ಲಿ ಚಿರತೆ ಕಾಣಿಸಿಕೊಂಡಿದೆ. ಮಹದೇಶ್ವರ ಬೆಟ್ಟದ ತಾಳುಬೆಟ್ಟದ ರಸ್ತೆ ಬದಿ ತಡೆಗೋಡೆ ಮೇಲೆ ಚಿರತೆ ಕುಳಿತಿರುವ ದೃಶ್ಯವನ್ನು ವಾಹನ ಸವಾರರು ಮೊಬೈಲ್ ನಲ್ಲಿ ಸೆರೆ ಹಿಡಿದಿದ್ದಾರೆ. ಇದರಿಂದ ಪಾದಯಾತ್ರೆ ಮೂಲಕ ಮಹದೇಶ್ವರ ಬೆಟ್ಟಕ್ಕೆ ತೆರಳುವ ಭಕ್ತಾಧಿಗಳಲ್ಲಿ ಆತಂಕ ಉಂಟಾಗಿದೆ.

ನಾಳೆ ದ್ವಾದಶ ಗರುಡೋತ್ಸವ ಸಂಭ್ರಮ

ಮೈಸೂರು: ಜಯಲಕ್ಷ್ಮಿಪುರಂ ಕಾಳಿದಾಸ ರಸ್ತೆಯ ಲಕ್ಷ್ಮಿ ನರಸಿಂಹಸ್ವಾಮಿ ದೇವಾಲಯದ ಪಂಚ ಗರುಡೋತ್ಸವ ಸೇವಾ ಸಮಿತಿವತಿಯಿಂದ ನಗರದಲ್ಲಿ ತೃತೀಯ ಬಾರಿಗೆ ದ್ವಾದಶ ಗರುಡೋತ್ಸವ ಸಂಭ್ರಮ ಆಯೋಜಿಸಲಾಗಿದೆ ಎಂದು ಶಾಸಕ ಟಿ.ಎಸ್. ಶ್ರೀವತ್ಸ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಜ. 18 ರಂದು ಅಂದು ಸಂಜೆ 4.05ಕ್ಕೆ ಜಯಲಕ್ಷ್ಮಿಪುರಂ ಮಹಾಜನ ವಿದ್ಯಾಸಂಸ್ಥೆ ಕ್ರೀಡಾಂಗಣದಲ್ಲಿ ಶ್ರೀಮದಭಿನವ ವಾಗೀಶ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಸ್ವಾಮಿ, ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್, ದತ್ತ ವಿಜಯೇಂದ್ರ ತೀರ್ಥ ಸ್ವಾಮೀಜಿ, ಭಾಷ್ಯಂ ಸ್ವಾಮೀಜಿಯವರ ಸಾನ್ನಿಧ್ಯದಲ್ಲಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಸಮ್ಮುಖದಲ್ಲಿ ಚಾಲನೆ ದೊರೆಯ ಲಿದೆ ಎಂದರು. ತ್ರಿದಡಿ ಶ್ರೀಮನ್ನಾರಾಯಣ ರಾಮಾನುಜ ಚಿನ್ನ ಜೀಯರ್ ಸಹಾ ಸಾನ್ನಿಧ್ಯ ವಹಿಸುವರು, ಖ್ಯಾತ ಸಂಗೀತ ನಿರ್ದೇಶಕ ಇಳೈರಾಜಾ ಅತಿಥಿಗಳಾವರು, ತಾವು ಅಧ್ಯಕ್ಷತೆವಹಿಸುವುದಾಗಿ ಮಾಹಿತಿ ನೀಡಿದರು. ರಾತ್ರಿ 7.30ಕ್ಕೆ ಗರುಡ ಕಂಕಣ ಮತ್ತು ಪ್ರಸಾದ ವಿನಿಯೋಗ ನಡೆಯಲಿದೆ. ಈ ಗರುಡೋತ್ಸವದಲ್ಲಿ ಜಯಲಕ್ಷ್ಮೀಪುರಂ



ಲಕ್ಷ್ಮಿ ?ಮನರಸಿಂಹ ಸ್ವಾಮಿ ದೇವಸ್ಥಾನ, ಕೆ.ಆರ್. ಮೊಹಲ್ಲಾ ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನ, ತಿಲಕ್‌ನಗರದ ಶ್ರೀನಿವಾಸಸ್ವಾಮಿ ದೇವಸ್ಥಾನ, ಚಾಮರಾಜ ಮೊಹಲ್ಲಾದ ಪುಸ್ತಕಂ ಸಂತಾನ ವೇಣುಗೋಪಾಲಸ್ವಾಮಿ ದೇವಸ್ಥಾನ, ಒಂಟಿಕೊಪ್ಪಲ್‌ನ ಆಂಡಾಳ್ ಮಂದಿರ, ಕೆ.ಆರ್. ಪೇಟೆಯ ಭೂದೇವಿ ಸಮೇತ ಲಕ್ಷಿ ?ಮ ವರಾಹಸ್ವಾಮಿ ದೇವಸ್ಥಾನ, ಶ್ರೀರಂಗಪಟ್ಟಣದ ಲಕ್ಷ್ಮಿನರಸಿಂಹ ಸ್ವಾಮಿ ಕ್ಷೇತ್ರ, ಇಲವಾಲದ ಲಕ್ಷ್ಮಿ ವರದರಾಜಸ್ವಾಮಿ ದೇವಸ್ಥಾನ, ಉಮ್ಮತ್ತೂರಿನ ರಂಗನಾಥಸ್ವಾಮಿ ದೇವಸ್ಥಾನ, ಮೇಟಗಳ್ಳಿ ವರ್ತುಲ ರಸ್ತೆಯ ಚಲುವನಾರಾಯಣಸ್ವಾಮಿ ದೇವಸ್ಥಾನ, ಎನ್.ಆರ್. ಮೊಹಲ್ಲಾದ ಪದ್ಮಾವತಿ ಸಮೇತ ಶ್ರೀನಿವಾಸಸ್ವಾಮಿ ದೇವಸ್ಥಾನ, ಕಲ್ಯಾಣಗಿರಿಯ ಕಲ್ಯಾಣ ವೆಂಕಟೇಶ ಸ್ವಾಮಿ ದೇವಸ್ಥಾನಗಳು ಗರುಡೋತ್ಸವ ಸೇವೆಯಲ್ಲಿ ಪಾಲ್ಗೊಳ್ಳಲಿವೆ ಎಂದು ಮಾಹಿತಿ ನೀಡಿದರು. ಕೆ.ಆರ್. ಯೋಗಾನರಸಿಂಹನ್, ಲಕ್ಷ್ಮೀಶ, ಕಶ್ಯಪ್, ಶಾಂತಾರಾಮನ್ ಇದ್ದರು.

ಶ್ರೀ ಕುಂಬೇಶ್ವರಸ್ವಾಮಿ ದೇವಸ್ಥಾನದಲ್ಲಿ

ವಿಜೃಂಭಣೆಯಿಂದ ಜರುಗಿದ ಸುಗ್ಗಿ ಜಾತ್ರೆ

ಚಾಮರಾಜನಗರ: ಶ್ರೀ ಕುಂಬೇಶ್ವರಸ್ವಾಮಿ ದೇವಸ್ಥಾನದಲ್ಲಿ ಸಂಕ್ರಾಂತಿ ಹಬ್ಬದ ಅಂಗವಾಗಿ ಸುಗ್ಗಿ ಜಾತ್ರೆ ಬಹಳ ವಿಜೃಂಬಣೆಯಿಂದ ಜರುಗಿತು.

ತಾಲ್ಲೂಕಿನ ಚಂದಕವಾಡಿ ಹೋಬಳಿಗೆ ಸೇರಿದ ಕುಂಬೇಶ್ವರ ಕಾಲೋನಿ ಸಮೀಪದ ಕರಡಿಹಳ್ಳದ ಶ್ರೀಕುಂಬೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಸಂಕ್ರಾಂತ್ರಿ ಹಬ್ಬದ ಪ್ರಯುಕ್ತ ಜಾತ್ರೆಯು ಪ್ರತಿ ವರ್ಷದಂತೆ ಸಂಕ್ರಾಂತಿಯ ಹಬ್ಬದ ದಿನದಂದು ನಡೆಯಿತು.

ಶ್ರೀ ಮಹದೇಶ್ವರ ಸ್ವಾಮಿಯ ವಿಗ್ರಹವನ್ನು ಸುವರ್ಣಾವತಿ ಹೊಳೆಯ ನೀರಿನಲ್ಲಿ ಅಭಿಷೇಕ ಮಾಡಿ ನಂತರ ದೇವಸ್ಥಾನಕ್ಕೆ ಹುಲಿವಾಹನ ಮರವಣಿಗೆಯಲ್ಲಿ ತರಲಾಯಿತು.

ಈ ಸಂದರ್ಭದಲ್ಲಿ ದೇವರಸತ್ತಿಗೆ, ಡೊಳ್ಳು ಕುಣಿತ, ವೀರಭದ್ರ ಕುಣಿತ ಸೇರಿದಂತೆ ಇನ್ನು ಹಲವಾರು ಜನಪದ ಕುಣಿತಗಳು ಭಾಗವಹಿಸಿದ್ದವು. ಕುಂಬೇಶ್ವರ ಜಾತ್ರೆಗೆ ಚಾಮರಾಜನಗರ ಸುತ್ತಮುತ್ತಲಿನ ಭಕ್ತರು ಮತ್ತು ಬೆಂಗಳೂರು, ಮೈಸೂರು, ಮಂಡ್ಯ ಜಿಲ್ಲೆಗಳಿಂದ ಆಗಮಿಸಿದ್ದರು.

ಜಾತ್ರೆಗೆ ಬರುವ ಭಕ್ತಧಿಗಳಿಗೆ ಅನ್ನದಾನ ವ್ಯವಸ್ಥೆ ಮಾಡಲಾಗಿತ್ತು. ಈ ಜಾತ್ರಾ ಮಹೋತ್ಸವದಲ್ಲಿ ಕುಂಬೇಶ್ವರ ಯುವಕರ ಸಂಘದ ಸದಸ್ಯರು, ಗ್ರಾಮಸ್ಥರಾದ ವಾಟಾಳ್ ಬಾಬು, ನಾಗರಾಜು, ಸಿದ್ದಪ್ಪ, ಪುಟ್ಟಸ್ವಾಮಿ, ಬಸವೇಗೌಡ,ಹೆಚ್.ಎಸ್‌ಮಂದೇಶ್, ಕೃಷ್ಣ ಹಾಗೂ ಮುಂತಾದವರು ಜಾತ್ರೆಯಲ್ಲಿ ಭಾಗವಹಿಸಿದ್ದರು.

ಸಂಕ್ಷಿಪ್ತ ಸುದ್ದಿ

ಅರ್ಜಿ ಅಹ್ವಾನ

ಮಂಡ್ಯ: ಪ್ರಧಾನ ಮಂತ್ರಿಗಳ ವಿಶ್ವಕರ್ಮ ಯೋಜನೆಯಡಿ ವಸ್ತು ಪ್ರದರ್ಶನವನ್ನು ಭಾರತ ಸರ್ಕಾರದ ಎಂ.ಎಸ್. ಎಂ.ಇ ಡಿ.ಎಫ್.ಓ., ಬೆಂಗಳೂರು ಕಛೇರಿ ವತಿಯಿಂದ ಜನವರಿ 22 ರಿಂದ 24 ರವರಿಗೆ ನಂಜರಾಜಾ ಬಹದ್ದೂರು ಛತ್ರ ಮೈಸೂರಿನಲ್ಲಿ ವಸ್ತು ಪ್ರದರ್ಶನವನ್ನು ಏರ್ಪಡಿಸಲಾಗಿದೆ.

ಸದರಿ ವಸ್ತು ಪ್ರದರ್ಶನದಲ್ಲಿ ಪಿ.ಎಂ ವಿಶ್ವಕರ್ಮ ಯೋಜನೆಯಡಿ ನೋಂದಾಯಿತವಾಗಿರುವ ಕುಶಲಕರ್ಮಿಗಳು ಮಾತ್ರ ಭಾಗವಹಿಸಿ, ತಮ್ಮ ಉತ್ಪನ್ನಗಳನ್ನು ಪ್ರದರ್ಶಸಿಸಬಹುದಾಗಿದೆ. ಆಸಕ್ತಿಯುಳ್ಳ ಕುಶಲಕರ್ಮಿಗಳು, ನಿಗಧಿತ ನಮೂನೆಯಲ್ಲಿ ಉತ್ಪನ್ನಗಳ ಭಾವಚಿತ್ರದೊಂದಿಗೆ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ: ಜಿಲ್ಲಾ ಕೈಗಾರಿಕಾ ಕೇಂದ್ರ ಕಛೇರಿ ಯನ್ನು ಸಂಪರ್ಕಿಸಬಹುದು ದೂ. ಸಂ 08232 200964/221358 ಎಂದು ಜಿಲ್ಲಾ ಕೈಗಾರಿಕಾ ಕೇಂದ್ರ, ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಅಹ್ವಾನ

ಮಂಡ್ಯ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮಂಡ್ಯ ಜಿಲ್ಲೆ ರವರ ವತಿಯಿಂದ ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಇಲ್ಲಿ (ಗಣಿಣ 30 ಃಜಢ) ನಿರ್ಗತಿಕ ಮಾನಸಿಕ ಅಸ್ವಸ್ಥರಿಗಾಗಿ ತುರ್ತು ಆರೈಕೆ ಮತ್ತು ಚೇತರಿಕೆ ಕೇಂದ್ರವನ್ನು ಪ್ರಾರಂಭಿಸಲು ಹಾಗೂ ನಿರ್ವಹಿಸಲು ಆಸಕ್ತ ಸರ್ಕಾರೇತರ ಸಂಸ್ಥೆ / ಸ್ವಯಂ ಸೇವಾ ಸಂಸ್ಥೆಗಳಿಂದ ಆಸಕ್ತಿ ವ್ಯಕ್ತಪಡಿಸುವಿಕೆಯನ್ನು Expression of Interest ಅನ್ನು ಆಹ್ವಾನಿಸಲಾಗಿದೆ. ಆಸಕ್ತ ಸ್ವಯಂ ಸೇವಾ ಸಂಸ್ಥೆಗಳು ಅರ್ಜಿಗಳನ್ನು ಆನ್‌ಲೈನ್ ಮೂಲಕ ಏಕಿಕ ಪೋರ್ಟಲ್‌ನಲ್ಲಿ ಜನವರಿ 16 ರಿಂದ 23 ರವರೆಗೆ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿಗಳ ಕಛೇರಿ, ಮಾನಸಿಕ ಆರೋಗ್ಯ ವಿಭಾಗ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ ಆವರಣ, ದೂ.ಸಂ. 8277895725 ಸಂಪರ್ಕಿಸಬಹುದು.ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಕಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾರ್ವಜನಿಕ ಪ್ರಕಟಣೆ

ಮಂಡ್ಯ: ಮಂಡ್ಯ ತಾಲ್ಲೂಕು, ಕಸಬಾ ಹೋಬಳಿ ಸಾತನೂರು ಗ್ರಾಮದ ಶ್ರೀಕಂಬದನರಸಿಂಹಸ್ವಾಮಿ ದೇವಾಲಯವು ಹಿಂದೂ ಧಾರ್ಮಿಕ ದತ್ತಿ ಇಲಾಖೆಗೆ ಸೇರಿದ 'ಬಿ' ವರ್ಗದ ಅಧಿಸೂಚಿತ ದೇವಾಲಯವಾಗಿರುತ್ತದೆ. ಆದ್ದರಿಂದ ಸದರಿ ದೇವಾಲಯದ ಆವರಣದಲ್ಲಿ ಅಥವಾ ಹೊರಭಾಗದಲ್ಲಿ ಈ ದೇವಾಲಯದ ಹೆಸರು ಅಥವಾ ದೇವಾಲಯದ ಹೆಸರಿನೊಂದಿಗೆ ಈ ದೇವರುಗಳ ಭಾವಚಿತ್ರವುಳ್ಳ ಮುದ್ರಾಂಕ ಬಳಕೆ ಮಾಡಿ ಯಾವುದೇ ಖಾಸಗಿ ಸಂಘ/ ಸಂಸ್ಥೆ/ಟ್ರಸ್ಟ್/ ವ್ಯಕ್ತಿಗಳು ಭಕ್ತಾದಿಗಳಿಂದ ನಗದು ಅಥವಾ ವಸ್ತು ರೂಪದಲ್ಲಿ ಯಾವುದೇ ದೇಣಿಗೆ/ಕಾಣಿಕೆಗಳನ್ನು ಸ್ವೀಕರಿಸುವುದು/ ವಸೂಲಿ ಮಾಡುವುದು ಕಾನೂನು ಬಾಹಿರ ಮತ್ತು ಅಕ್ರಮ ಕೃತ್ಯವಾಗಿರುತ್ತದೆ.

ದೇವಾಲಯದ ಹೆಸರಿನಲ್ಲಿ ಇಂತಹ ಅನಧಿಕೃತ ಚಟುವಟಿಕೆಗಳು/ ಅಕ್ರಮ ಕೃತ್ಯಗಳಲ್ಲಿ ತೊಡಗುವ ಯಾವುದೇ ಖಾಸಗಿ ಸಂಘ/ ಸಂಸ್ಥೆ/ ಟ್ರಸ್ಟ್ /ವ್ಯಕ್ತಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಮಂಡ್ಯ ತಾಲ್ಲೂಕು ಅಧಿಕಾರಿ ಹಾಗೂ ತಾಲೂಕು ಮುಜುರಾಯಿ ತಹಸೀಲ್ದಾರ್ ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಮೈಸೂರು: 2024-25ನೇ ಸಾಲಿನಲ್ಲಿ ಬಾಲ್ಯವಿವಾಹ ಶೂನ್ಯ ಸಹಿಷ್ಣುತೆ ಹೊಂದಿರುವ ಬಾಲ್ಯವಿವಾಹ ಮುಕ್ತ ಗ್ರಾಮ ಪಂಚಾಯಿತಿಗೆ ಅರ್ಜಿ ಆಹ್ವಾನಿಸಿದ್ದು, ಆಯಾ ಜಿಲ್ಲೆಯ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳನ್ನೊಳಗೊಂಡ ಜಿಲ್ಲಾ ಮಟ್ಟದ ಆಯ್ಕೆ ಸಮಿತಿಯು ಜಿಲ್ಲಾ ಮಟ್ಟದಲ್ಲಿ ಆರಿಸಿದ ಒಂದು ಗ್ರಾಮ ಪಂಚಾಯಿತಿಗೆ ಬಾಲ್ಯವಿವಾಹ ಮುಕ್ತ ಗ್ರಾಮ ಎಂದು ಘೋಷಿಸಿ ಸದರಿ ಗ್ರಾಮ ಪಂಚಾಯ್ತಿಗೆ ಪ್ರಶಸ್ತಿ ಹಾಗೂ ರೂ.25,000 ರೂ ಪ್ರೋತ್ಸಹಧನ ನೀಡಲು ಅರ್ಜಿ ಅಹ್ವಾನಿಸಲಾಗಿದೆ. ಮೈಸೂರು ಜಿಲ್ಲೆಯ ಶೂನ್ಯ ಸಹಿಷ್ಣುತೆ ಹೊಂದಿರುವ (ಬಾಲ್ಯವಿವಾಹ ಮುಕ್ತ ಗ್ರಾಮ ಪಂಚಾಯಿತಿ) ಗ್ರಾಮ ಪಂಚಾಯಿತಿಯವರು ಮಾನ್ಯ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ನಂ.ಸಿ.ಎ:15-17, ಮೊದಲನೇ ಮಹಡಿ, ಅಂಜನಾದ್ರಿ ಮುಖ್ಯ ರಸ್ತೆ, 2ನೇ ಘಟ್ಟ, 4ನೇ ಹಂತ, ವಿಜಯನಗರ, ಮೈಸೂರು-570032 ವಿಳಾಸದಲ್ಲಿ ಕಚೇರಿ ಸಮಯದಲ್ಲಿ ನಿಗಧಿತ ಅರ್ಜಿ ನಮೂನೆಯನ್ನು ಪಡೆದು ನಿಗಧಿತ ಅರ್ಜಿ ನಮೂನೆಯನ್ನು ಭರ್ತಿ ಮಾಡಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಕಚೇರಿಯ ವಿಳಾಸಕ್ಕೆ ದಾಖಲಾತಿಗಳೊಂದಿಗೆ ಜನವರಿ 30 ರೊಳಗೆ ಅರ್ಜಿಯನ್ನು ಸಲ್ಲಿಸಬೇಕು

ದೈಹಿಕ ದೃಢತೆಯಿಂದ ಮಾನಸಿಕ ಒತ್ತಡ ನಿವಾರಣೆ: ಎನ್ ಚಲುವರಾಯಸ್ವಾಮಿ

ಸರ್ಕಾರಿ ನೌಕರರು ದೈಹಿಕವಾಗಿ ಸಧೃಡರಾಗಿ

ಮಂಡ್ಯ: ಸರ್ಕಾರಿ ನೌಕರರು ದೈಹಿಕವಾಗಿ ಸದೃಢರಾಗಬೇಕು ಇದರಿಂದ ಆರೋಗ್ಯ ಉತ್ತಮವಾಗಿರುತ್ತದೆ ಎಂದು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಕೃಷಿ ಸಚಿವರಾದ ಎನ್ ಚಲುವರಾಯಸ್ವಾಮಿ ಅವರು ಹೇಳಿದರು.

ಇಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ (ರಿ) ಜಿಲ್ಲಾ ಶಾಖೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಸರ್.ಎಂ.ವಿಶ್ವೇಶ್ವರಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಮಂಡ್ಯ ಜಿಲ್ಲಾ ಮಟ್ಟದ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳು-2025-26 ರ ಕಾರ್ಯಕ್ರಮದ ಉದ್ಘಾಟನಾ ಸಮಾರಂಭವನ್ನು ಕ್ರೀಡಾ ಧ್ವಜವನ್ನು ಹಾರಿಸಿ ನಂತರ ದೀಪ ಬೆಳಗಿಸಿ ಉದ್ಘಾಟಿಸಿದರು.

ದೈಹಿಕವಾಗಿ ದೃಢತೆಯನ್ನು ಕಾಪಾಡಿಕೊಳ್ಳುವುದರಿಂದ ಮಾನಸಿಕ ಒತ್ತಡ ನಿವಾರಣೆಯಾಗುತ್ತದೆ. ಸರ್ಕಾರಿ ನೌಕರರು ಇಂತಹ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಭಾಗವಹಿಸಿ ಉತ್ತಮ ಪ್ರದರ್ಶನ ನೀಡಬೇಕು. ಕೇವಲ ಜಿಲ್ಲಾ ಮಟ್ಟಕ್ಕೆ ಸೀಮಿತವಾಗದೆ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟದಲ್ಲಿ ಪಾಲ್ಗೊಳ್ಳುವ ಮೂಲಕ

ರಾಜ್ಯಕ್ಕೆ ಮತ್ತು ಜಿಲ್ಲೆಗೆ ಮಾದರಿಯಾಗಬೇಕು ಎಂದರು. ಮಂಡ್ಯ ವಿಧಾನಸಭಾ ಕ್ಷೇತ್ರದ ಶಾಸಕರಾದ ರವಿಕುಮಾರ್ ಅವರು ಮಾತನಾಡಿ ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು ಮುಖ್ಯ. ಸರ್ಕಾರಿ ನೌಕರರು ಸದರಿ ಕ್ರೀಡಾ ಕೂಟ ಮತ್ತು ಸಂಸ್ಕೃತಿ ಸ್ಪರ್ಧೆಗಳಲ್ಲಿ ಭಾಗಿಯಾಗಿ, ಬಹುಮಾನ ಸಿಗದಿದ್ದರೂ ಪರವಾಗಿಲ್ಲ ಆದರೆ ಸ್ಪರ್ಧೆಗಳಲ್ಲಿ ಭಾಗವಹಿಸುವುದು ಅತಿ ಮುಖ್ಯ ಎಂದು ಹೇಳಿದರು.

ನಂತರದ ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾದ ನಾಗೇಶ್ ಕೆ ಅವರು ಜಿಲ್ಲಾ ಉಸ್ತುವಾರಿ ಹಾಗೂ ಕೃಷಿ ಸಚಿವರಾದ ಎನ್ ಚಲುವರಾಯಸ್ವಾಮಿ ಅವರಿಗೆ ಜಿಲ್ಲೆಯ ಏಳು ತಾಲ್ಲೂಕಿನಿಂದ ಕ್ರೀಡಾ ಕೂಟಕ್ಕೆ ಆಗಮಿಸಿದ್ದ ಸ್ಪರ್ಧಿಗಳ ಪರಿಚಯ ಮಾಡಿ ಕೊಟ್ಟರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಡಾ ಕುಮಾರ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಆರ್ ನಂದಿನಿ, ಜಿಲ್ಲಾ ಪೊಲೀಸ್ ಅಧೀಕ್ಷಕಿ ಶೋಭಾರಾಣಿ ವಿ ಜೆ, ಅಪರ ಜಿಲ್ಲಾಧಿಕಾರಿ ಬಿ.ಸಿ ಶಿವಾನಂದ ಮೂರ್ತಿ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ರಾಜ್ಯ ಹಿರಿಯ ಉಪಾಧ್ಯಕ್ಷ ಶಂಭುಗೌಡ ಎಸ್, ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾದ ನಾಗೇಶ್ ಕೆ, ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಸಭಾಧ್ಯಕ್ಷೆ ಡಾ. ಮೀರಾ ಶಿವಲಿಂಗಯ್ಯ, ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ಉಪಾಧ್ಯಕ್ಷೆ ವಿಜಯಲಕ್ಷ್ಮಿ ರಘುನಂದನ್, ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಿ.ಪಿ ಪ್ರಕಾಶ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಬೆಂಬಲ ಬೆಲೆಗಾಗಿ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಯಾತ್ರೆ

ಮೈಸೂರು: ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಖಾತರಿ ಕಾನೂನು ಜಾರಿಗಾಗಿ ಎಸ್ ಕೆಎಂ(ಎನ್ ಪಿ) ವತಿಯಿಂದ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ರೈತ ಜಾಗೃತಿ ಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ಸಂಯುಕ್ತ ಕಿಸಾನ್ ಮೋರ್ಚಾ(ರಾಜಕೀಯೇತರ) ಸಂಘಟನೆಯ ರಾಷ್ಟ್ರೀಯ ಸಹ ಸಂಚಾಲಕ ಕುರುಬೂರು ಶಾಂತಕುಮಾರ್ ತಿಳಿಸಿದರು. ನಗರದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ದೆಹಲಿ ಗಡಿಯಲ್ಲಿ ವರ್ಷಾನುಕಾಲ ರೈತರು ಚಳುವಳಿ ನಡೆಸಿ ಸರ್ಕಾರವನ್ನು ಎಚ್ಚರಿಸಿದರು. ಆದರೂ ಗಂಭೀರ ಕ್ರಮ ಜಾರಿಯಾಗಿಲ್ಲದ ಕಾರಣ ರಾಷ್ಟ್ರೀಯ ಸಂಚಾಲಕ ರೈತ ಮುಖಂಡ ಜಗಜಿತ್ ಸಿಂಗ್ ದಲ್ಲೆವಾಲಾ 131 ದಿನ ಉಪವಾಸ ಸತ್ಯಾಗ್ರಹ ನಡೆಸಿದಾಗ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು, ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶ ನವಾಬ್ ಸಿಂಗ್ ಅಧ್ಯಕ್ಷತೆಯಲ್ಲಿ ಸಮಿತಿಯನ್ನ ರಚಿಸಿ ಸಮಸ್ಯೆ ಪರಿಹಾರಕ್ಕೆ ವರದಿ ನೀಡುವಂತೆ ಸೂಚಿಸಿದರು. ಈ ಸಮಿತಿ ರೈತರ ಪರವಾಗಿ ವರದಿ ನೀಡಿದೆ. ಅದೇ ರೀತಿ ಕೇಂದ್ರ ಸರ್ಕಾರದ ಕೃಷಿ ಅಧ್ಯಯನದ 31 ಜನರ ಸಂಸದೀಯ ಸಮಿತಿ ಸಹ ರೈತರ ಪರವಾದ ವರದಿ ನೀಡಿ ಎಂಎಸ್ ಪಿ ಖಾತ್ರಿ ಕಾನೂನು ಜಾರಿಗೆ ಬೆಂಬಲಿಸಿದೆ. ಇದು ಸಂಯುಕ್ತ ಕಿಸಾನ್ ಮೋರ್ಚಾ(ರಾಜಕೀಯೇತರ) ಸಂಘಟನೆಯ ಹೋರಾಟದ ಫಲವಾಗಿ ಆಗಿರುವ ಸಾಧನೆ. ಆದರೆ, ಕೇಂದ್ರ ಸರ್ಕಾರ ಬಗ್ಗೆ ಇನ್ನು ಯಾವುದೇ ಚಕಾರ ಎತ್ತುತ್ತಿಲ್ಲವೆಂದರು. ಆದ್ದರಿಂದ ರೈತರಲ್ಲಿ ಜಾಗೃತಿ ಮೂಡಿಸಲು ಸರ್ಕಾರವನ್ನು ಎಚ್ಚರಿಸಬೇಕಾಗಿದೆ. ದೇಶದ ರೈತರಿಗೆ ಎಂಎಸ್ ಪಿ ಖಾತರಿ ಕಾನೂನು ಇಲ್ಲದ ಕಾರಣ ವರ್ಷಕ್ಕೆ 15ಲಕ್ಷ ಕೋಟಿ ನಷ್ಟ ಅನುಭವಿಸುತ್ತಿದ್ದಾರೆ. ಫೆ.7ರಿಂದ ಕನ್ಯಾಕುಮಾರಿಯಿಂದ ರೈತ ಜಾಗೃತಿ ಯಾತ್ರೆ ಆರಂಭವಾಗುತ್ತದೆ. ಈ ಯಾತ್ರೆ ಸಾಗುವ ದಾರಿಯಲ್ಲಿ ಸಿಗುವ ಹಳ್ಳಿಗಳ ರೈತರಿಂದ ಸಹಿ ಸಂಗ್ರಹ ಪಡೆದು ಸುಮಾರು 40 ದಿನಗಳ ಬಳಿಕ ಯಾತ್ರೆ ಕಾಶ್ಮೀರ ತಲುಪಲಿದೆ. ನಂತರ ದೆಹಲಿಯಲ್ಲಿ ಮಾ.19ರಂದು ರಾಮ್ ಲೀಲಾ ಮೈದಾನದಲ್ಲಿ ದೇಶದ ಎಲ್ಲಾ ರೈತರ ಬೃಹತ್ ಸಮಾವೇಶ ನಡೆಸಲಾಗುತ್ತದೆ. ನಂತರ ದೇಶದ ರೈತರಿಂದ ಸಂಗ್ರಹಿಸಿರುವ ಸಹಿ ಸಂಗ್ರಹದ ಮನವಿ ಪತ್ರವನ್ನು ಪ್ರಧಾನಮಂತ್ರಿಗಳಿಗೆ ಸಲ್ಲಿಸಲಾಗುವುದು ಎಂದು ಹೇಳಿದರು.

ದೇವಸ್ಥಾನಕ್ಕೆ ಸೇರಿದ ಜಮೀನು ಒತ್ತುವರಿ: ಟ್ರಸ್ಟಿಗಳ ವಿರುದ್ಧ ಕಾನೂನು ಕ್ರಮಕ್ಕೆ ಆಗ್ರಹ

ಮಂಡ್ಯ: ಮದ್ದೂರು ತಾಲೂಕಿನ ಆಬಲವಾಡಿ ಗ್ರಾಮದ ಶ್ರೀ ವೆಂಕಟರಮಣಸ್ವಾಮಿ (ತೋಪಿನ ತಿಮ್ಮಪ್ಪ) ದೇವಸ್ಥಾನಕ್ಕೆ ಸೇರಿದ ಜಮೀನನ್ನು ಶ್ರೀ ತೋಪಿನ ತಿಮ್ಮಪ್ಪ ಕಲ್ಯಾಣ ಮಂದಿರ ಸೇವಾ ಟ್ರಸ್ಟ್‌ಗೆ ಅಕ್ರಮವಾಗಿ ವರ್ಗಾಯಿಸಿಕೊಂಡ ಟ್ರಸ್ಟಿಗಳ ಮೇಲೆ ಕಾನೂನು ಕ್ರಮ ಕೈಗೊಳ್ಳುವಂತೆ ಗ್ರಾಮದ ಶ್ರೀಕಂಠಯ್ಯ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 1934ರಲ್ಲಿ ಸ್ಥಾಪಿತವಾದ ದೇವಾಲಯವು ಮುಜರಾಯಿ ಇಲಾಖೆಗೆ ಸೇರಿದೆ. 1988ರಲ್ಲಿ ಶ್ರೀ ತೋಪಿನ ತಿಮ್ಮಪ್ಪ ಕಲ್ಯಾಣ ಮಂದಿರ ಸೇವಾ ಟ್ರಸ್ಟ್ ರಚನೆಯಾಗಿದ್ದು, ದೇವಾಲಯದ ಅರ್ಚಕರಾಗಿದ್ದ ಲೇ॥

ರಂಗಪ್ಪ ಅವರ ಪತ್ರಿ ಸರೋಜಮ್ಮ ಅವರ ಹೆಬ್ಬೆಟ್ಟು ನಕಲು ಮಾಡಿ ಟ್ರಸ್ಟ್‌ನ ಅಧ್ಯಕ್ಷರು ಹಾಗೂ ಕಾರ್ಯದರ್ಶಿಯ ಹೆಸರಿಗೆ ದಾಖಲೆ ಸೃಷ್ಟಿಸಿಕೊಂಡಿದ್ದಾರೆ ಎಂದು ಆರೋಪಿಸಿದರು.

ಸರೋಜಮ್ಮ ಅವರು ಈ ಆಸ್ತಿಗಳನ್ನು ಯಾರ ಹೆಸರಿಗೂ ಮರಣಶಾಸನ ಮಾಡಿರುವುದಿಲ್ಲ. ಶ್ರೀ ತೋಪಿನ ತಿಮ್ಮಪ್ಪ ಕಲ್ಯಾಣ ಮಂದಿರ ಸೇವಾ ಟ್ರಸ್ಟ್‌ನ ಟ್ರಸ್ಟಿಗಳ ಜೊತೆ ಜಿ..ಚಿಕ್ಕತಿಮ್ಮಯ್ಯ, ರಾಮಕೃಷ್ಣ, ಟಿ.ಕೃಷ್ಣೇಗೌಡ, ಟಿ.ರವೀಂದ್ರ, ಟಿ.ಬಲರಾಮು ಸರೋಜಮ್ಮ ಅವರ ಹೆಬ್ಬೆಟ್ಟು ನಕಲು ಮಾಡಿ 2002ರ ಜ.30ರಂದು ಮರಣ ಆಸನ ಮಾಡಿ ಆಸ್ತಿ ಲಪಟಾಯಿಸಿದ್ದಾರೆ ಎಂದು ದೂರಿದರು.

ಈ ಸಂಬಂಧ ಪರಿಶೀಲನೆ ನಡೆಸಿ, ಆಸ್ತಿಯನ್ನು ಮುಜರಾಯಿ ಇಲಾಖೆಯ ಸುಪರ್ದಿಗೆ ಪಡೆಯುವಂತೆ ಹೈಕೋರ್ಟ್ ಆದೇಶ ನೀಡಿದೆ. ಜಿಲ್ಲಾಡಳಿತ ಹಾಗೂ ತಾಲೂಕು ಆಡಳಿತ ಸೂಕ್ತ ಕ್ರಮ ಕೈಗೊಳ್ಳಬೇಕು ಸರೋಜಮ್ಮ ಅವರ ಹೆಬ್ಬೆಟ್ಟು ನಕಲು ಮಾಡಿದವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು.

ಮಹಾತ್ಮಗಾಂಧಿ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದ್ದ ಕರ್ನಾಟಕ ಕ್ರೀಡಾಕೂಟದಲ್ಲಿ ಸಿದ್ದರಾಮಯ್ಯ ಭಾಗಿ

ಜಿಲ್ಲೆಯಲ್ಲಿ ಕ್ರೀಡಾ ಅಭಿವೃದ್ಧಿಗೆ 6 ಕೋಟಿ ಅನುದಾನ: ಸಿಎಂ

ತುಮಕೂರು: ಜಿಲ್ಲೆಯಲ್ಲಿ ಅಂತಾರಾಷ್ಟ್ರೀಯ ಮಟ್ಟದ ಹಾಕಿ ಕ್ರೀಡಾಂಗಣ ಹಾಗೂ ಈಜು ಕೊಳ ನಿರ್ಮಾಣ ಸೇರಿದಂತೆ ಕ್ರೀಡಾ ಅಭಿವೃದ್ಧಿಗೆ 6 ಕೋಟಿ ರೂ. ಅನುದಾನ ನೀಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭರವಸೆ ನೀಡಿದ್ದಾರೆ.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ಒಲಿಂಪಿಕ್ ಸಂಸ್ಥೆ ಹಾಗೂ ಜಿಲ್ಲಾಡಳಿತ ಸಹಯೋಗದಲ್ಲಿ ಶುಕ್ರವಾರ ನಗರದ ಮಹಾತ್ಮಗಾಂಧಿ ಕ್ರೀಡಾಂಗಣದಲ್ಲಿ ಕರ್ನಾಟಕ ಕ್ರೀಡಾಕೂಟ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ: ಜಿ. ಪರಮೇಶ್ವರ ಅವರು ತಮ್ಮ ಭಾಷಣದಲ್ಲಿ ತುಮಕೂರಿನಲ್ಲಿ ವಿವಿಧ ಕ್ರೀಡಾಂಗಣಗಳಿದ್ದು, ಅಂತಾರಾಷ್ಟ್ರೀಯ ಮಟ್ಟದ ಈಜು ಕೊಳ ಹಾಗೂ ಹಾಕಿ ಕ್ರೀಡಾಂಗಣಗಳ ಅವಶ್ಯವಿದ್ದು, ಮಾನ್ಯ ಮುಖ್ಯಮಂತ್ರಿಗಳು 25 ಕೋಟಿ ರೂ.ಗಳ ಅನುದಾನ ನೀಡುವಂತೆ ಕೋರಿದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಳೆದ ವರ್ಷ ಉಡುಪಿ ಮತ್ತು ಮಂಗಳೂರಿನಲ್ಲಿ ಕರ್ನಾಟಕ ಕ್ರೀಡಾಕೂಟ ನಡೆದ ಸಂದರ್ಭದಲ್ಲಿ 6 ಕೋಟಿ ರೂ. ಗಳ ಅನುದಾನವನ್ನು ಘೋಷಿಸಲಾಗಿತ್ತು. ಅದರಂತೆ ತುಮಕೂರಿಗೂ ಕ್ರೀಡಾಭಿವೃದ್ಧಿಗಾಗಿ 6 ಕೋಟಿ ರೂ. ಅನುದಾನ ನೀಡುವುದಾಗಿ ಭರವಸೆ ನೀಡಿದರು.

ವಿದ್ಯಾರ್ಥಿ ಜೀವನದಲ್ಲಿ ಓದಿನ ಜೊತೆಗೆ ಕ್ರೀಡೆಯಲ್ಲಿ ತೊಡಗಿಸಿಕೊಳ್ಳುವುದು ಅತ್ಯಂತ ಅವಶ್ಯಕವಾಗಿದ್ದು, ಇದರಿಂದ ಸಮಯ ಪ್ರಜ್ಞೆ, ಶಿಸ್ತು, ಸಮಯ ಪಾಲನೆ ಹಾಗೂ ತಂಡಭಾವನೆ ಬೆಳೆದರೆ ದೇಶಕ್ಕೆ ಉತ್ತಮ ಕೊಡುಗೆ ನೀಡಲು ಸಾಧ್ಯವಾಗುತ್ತದೆ ಎಂದ ಅವರು, ಯುವಕರು ಮಾದಕ ವ್ಯಸನಗಳಿಗೆ ತುತ್ತಾಗದೆ, ಕ್ರೀಡೆ ವ್ಯಕ್ತಿತ್ವ ವಿಕಸನಕ್ಕೆ

ಸಹಕಾರಿಯಾಗಿ, ಆರೋಗ್ಯಕರ ಸಮಾಜ ನಿರ್ಮಾಣಕ್ಕೂ ಪ್ರಮುಖ ಪಾತ್ರ ವಹಿಸುತ್ತದೆ ಎಂದರು.

ನಾನು ಕೂಡ ಕ್ರೀಡಾಪಟುವಾಗಿದ್ದು, ಕ್ರೀಡಾಭಿಮಾನಿಯಾಗಿದ್ದೇನೆ. ನನ್ನ ಶಾಲಾ ದಿನಗಳಲ್ಲಿ ಅಂತರ್ ಶಾಲಾ ಮಟ್ಟದ ಕಬ್ಬಡಿ ಕ್ರೀಡೆಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದೇನೆ. ಎಷ್ಟೇ ಕೆಲಸದ ಒತ್ತಡ ಇದ್ದರೂ ಕ್ರಿಕೆಟ್ ಹಾಗೂ ಫುಟ್ಬಾಲ್ ಕ್ರೀಡೆಗಳನ್ನು ನೋಡುತ್ತಲೇ ಇರುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಪ್ರತಿಯೊಬ್ಬ ಕ್ರೀಡಾಪಟು ಗುರಿ ಹಾಗೂ ಪರಿಶ್ರಮದೊಂದಿಗೆ ನಿರಂತರ ತರಬೇತಿ ಪಡೆದರೆ ಏಷ್ಯಾ ಮಟ್ಟದ ಸ್ಪರ್ಧೆಗಳವರೆಗೆ ತಲುಪಲು ಸಾಧ್ಯವಾಗುತ್ತದೆ. ಕ್ರೀಡೆಯಲ್ಲಿ ಪಾಲ್ಗೊಳ್ಳುವುದು ಅತ್ಯಂತ ಮಹತ್ವದ್ದಾಗಿದ್ದು, ಕ್ರೀಡೆಗೆ ತೊಡಗಿಸಿಕೊಂಡರೆ ಭವಿಷ್ಯದಲ್ಲಿ ಸರ್ಕಾರಿ ಉದ್ಯೋಗ ಸಿಗುವುದಿಲ್ಲ ಎಂಬ ಬೇಸರ ಬೇಡ ಎಂದು ಅವರು ಸ್ಪಷ್ಟಪಡಿಸಿ, ರಾಜ್ಯ ಸರ್ಕಾರವು ಕ್ರೀಡಾಪಟುಗಳಿಗೆ ಪೊಲೀಸ್ ಮತ್ತು ಅರಣ್ಯ ಇಲಾಖೆ ನೇಮಕಾತಿಯಲ್ಲಿ ಶೇ.3ರಷ್ಟು ಮೀಸಲಾತಿ ಹಾಗೂ ಎಲ್ಲಾ ಇಲಾಖೆಗಳ ಉದ್ಯೋಗ ನೇಮಕಾತಿಯಲ್ಲೂ ಶೇ.2ರಷ್ಟು ಮೀಸಲಾತಿಯನ್ನು ನಿಗದಿಪಡಿಸಿದೆ ಎಂದರು.

ಅಲ್ಲದೆ, ವಿಶ್ವ ಒಲಿಂಪಿಕ್ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಗೆದ್ದವರಿಗೆ 6 ಕೋಟಿ ರೂ., ಬೆಳ್ಳಿ ಪದಕ ಗೆದ್ದವರಿಗೆ 4 ಕೋಟಿ ರೂ. ಹಾಗೂ ಕಂಚಿನ ಪದಕ ಪಡೆದವರಿಗೆ 3 ಕೋಟಿ ರೂ. ಬಹುಮಾನ ನೀಡಲಾಗುತ್ತಿದೆ. ಇಷ್ಟು ಪ್ರೋತ್ಸಾಹವನ್ನು ಬೇರೆ ಯಾವುದೇ ರಾಜ್ಯದಲ್ಲಿ ಕ್ರೀಡಾಪಟುಗಳಿಗೆ ನೀಡುವುದಿಲ್ಲ ಎಂದು ಅವರು ತಿಳಿಸಿದರು.

ಗೃಹ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ: ಜಿ.ಪರಮೇಶ್ವರ ಅವರು, ಒಲಿಂಪಿಕ್ ಕ್ರೀಡಾಕೂಟವನ್ನು ನಶೆಮುಕ್ತ ಕರ್ನಾಟಕ ನಿರ್ಮಾಣದ ಸಂಕಲ್ಪದೊಂದಿಗೆ ಯುವಜನತೆಗೆ ಮೀಸಲಾಗಿ ಆಯೋಜಿಸಲಾಗಿದ್ದು, ಯುವಕರು ಮಾದಕ ವ್ಯಸನಗಳಿಂದ ದೂರವಿದ್ದು ಕ್ರೀಡೆಯಲ್ಲಿ ತೊಡಗಿಸಿಕೊಳ್ಳಬೇಕೆಂಬ ಉದ್ದೇಶ ಹೊಂದಿದೆ ಎಂದು ಹೇಳಿದರು.

ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಕ್ರೀಡಾಪಟುಗಳಿಗೆ ಅಗತ್ಯವಿರುವ ಎಲ್ಲಾ ಸೌಲಭ್ಯಗಳನ್ನು ಒದಗಿಸಲು ಬದ್ಧವಾಗಿದೆ. ನಮ್ಮ ರಾಜ್ಯದಿಂದ ಏಷ್ಯಾ ಮಟ್ಟದ ಕ್ರೀಡಾಕೂಟಗಳಿಗೆ ಕನಿಷ್ಠ 500 ಕ್ರೀಡಾಪಟುಗಳು ಭಾಗವಹಿಸಬೇಕೆಂಬ ಗುರಿಯಿದೆ ಎಂದು ಹೇಳಿದರು. ಎಲ್ಲಾ ಆಟಗಳಲ್ಲಿ ಗೆಲ್ಲುವುದು ಮುಖ್ಯವಲ್ಲ, ಒಲಂಪಿಕ್ ಕ್ರೀಡಾಕೂಟದಲ್ಲಿ ಭಾಗವಹಿಸುವುದೇ ಮುಖ್ಯ ಎಂದು ಅಭಿಪ್ರಾಯಪಟ್ಟ ಅವರು, ಕ್ರೀಡೆ ವಿದ್ಯಾಭ್ಯಾಸದ ಜೊತೆಗೆ ಯುವಕರ ಜೀವನ ರೂಪಿಸುವ ಶಕ್ತಿಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಒಲಿಂಪಿಕ್ ಸಂಸ್ಥೆಯ ಅಧ್ಯಕ್ಷ ಹಾಗೂ ಶಾಸಕ ಡಾ: ಕೆ. ಗೋವಿಂದ ರಾಜು, ನವದೆಹಲಿ ವಿಶೇಷ ಪ್ರತಿನಿಧಿ ಹಾಗೂ ಸಿರಾ ಶಾಸಕ ಟಿ .ಬಿ ಜಯಚಂದ್ರ, ಡಿ.ಸಿ.ಸಿ. ಬ್ಯಾಂಕ್ ಅಧ್ಯಕ್ಷ ಹಾಗೂ ಶಾಸಕ ಕೆ.ಎನ್ ರಾಜಣ್ಣ, ಕೆ.ಎಸ್.ಆರ್.ಟಿ.ಸಿ ಅಧ್ಯಕ್ಷ ಹಾಗೂ ಶಾಸಕ ಎಸ್.ಆರ್. ಶ್ರೀನಿವಾಸ್, ಶಾಸಕರಾದ ಜಿ.ಬಿ. ಜ್ಯೋತಿ ಗಣೇಶ್, ಬಿ. ಸುರೇಶ್ ಗೌಡ, ಕೆ. ಷಡಾಕ್ಷರಿ, ಹೆಚ್.ವಿ. ವೆಂಕಟೇಶ್, ಆರ್. ರಾಜೇಂದ್ರ, ಸರ್ಕಾರದ ಮುಖ್ಯ ಸಚೇತಕ ಅಶೋಕ್ ಪಟ್ಟಣ್, ಕರ್ನಾಟಕ ಒಲಂಪಿಕ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಟಿ. ಅನಂತರಾಜ್, ಯುವ ಸಬಲೀಕರಣ ಇಲಾಖೆಯ ಕಾರ್ಯದರ್ಶಿ ನವೀನ್ ರಾಜ್ ಸಿಂಗ್, ಆಯುಕ್ತರಾದ ಚೇತನ್ ಆರ್., ಬಿ.ಎಂ.ಟಿ.ಸಿ ಉಪಾಧ್ಯಕ್ಷ ನಿಕೇತ್ ರಾಜ್ ಮೌರ್ಯ, ಜಿಲ್ಲಾಧಿಕಾರಿ ಶುಭ ಕಲ್ಯಾಣ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ. ಅಶೋಕ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಮನರೇಗಾ ಹೆಸರು ಬದಲಿಸಲು ಕೇಂದ್ರದ ಏಕಪಕ್ಷೀಯ ನಿರ್ಧಾರ

ಕೃಷಿ ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಆರೋಪ

ಮಂಡ್ಯ: ಮನರೇಗಾ ಯೋಜನೆಯ ರೂಪ ಬದಲಾಯಿಸಿ ಹೆಸರನ್ನೂ ಬದಲಿಸಲು ಕೇಂದ್ರ ಸರ್ಕಾರ ಏಕಪಕ್ಷೀಯ ನಿರ್ಧಾರಕೈಗೊಂಡಿದೆ ಎಂದು ಕೃಷಿ ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರ ಸಚಿವ ಎನ್.ಚಲುವರಾಯಸ್ವಾಮಿ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶದ ಆರ್ಥಿಕ ತಜ್ಞ ಮನ್‌ಮೋಹನ್ ಸಿಂಗ್ ಅವರು ಜಾರಿಗೆ ತಂದ ಮನರೇಗಾ ಯೋಜನೆಯನ್ನು ಕಳೆದ 20 ವರ್ಷಗಳಿಂದ ನಡೆಸಿಕೊಂಡು ಬರಲಾಗುತ್ತದೆ. ಈ ಮೂಲಕ ಗ್ರಾಮೀಣ ಕೂಲಿ ಕಾರ್ಮಿಕರಿಗೆ, ಗ್ರಾ.ಪಂ ವ್ಯಾಪ್ತಿಯಲ್ಲಿ ಕೃಷಿಕ ಬದುಕು, ಆಸ್ತಿಗಳ ರಕ್ಷಣೆ, ಸ್ವತ ಸಮಸ್ಯೆಗಳ ನಿವಾರಣೆ, ಕನಷ್ಠ ಕೂಲಿ ದೊರಕಿಸುವ ನಿಟ್ಟಿನಲ್ಲಿ ಉದ್ಯೋಗ ಖಾತ್ರಿ ಒದಗಿಸುವ ಯೋಜನೆಯಾಗಿತ್ತು ಎಂದರು.

ಹಿಂದೆಯೂ ಈ ಯೋಜನೆಯನ್ನು ಬದಲಿಸಲು ಕೇಂದ್ರ ಸರಕಾರ ಮುಂದಾಗಿತ್ತು. ಆದರೆ ಸಾಕಷ್ಟು ಹೋರಾಟಗಳ ಫಲವಾಗಿ ಈ ಯೋಜನೆ ಯಥಾಸ್ಥಿತಿಯಲ್ಲಿ ಮುಂದುವರೆದಿತ್ತು. ಅಡಚಣೆ ಇದ್ದರೂ ಮನರೇಗಾ ಯೋಜನೆ ಸುಲಲಿತವಾಗಿ ಸಾಗುತ್ತಿತ್ತು. ಆದರೆ ಇದೀಗ ಸಂಪೂರ್ಣವಾಗಿ ಯೋಜನೆಯ ಜೊತೆಗೆ ಹೆಸರನ್ನು ಬದಲಿಸಲು ಕೇಂದ್ರ ಸರಕಾರ ಮುಂದಾಗಿದೆ ಎಂದು ಹೇಳಿದರು.

ಯೋಜನೆ ಬದಲಿಸುವ ಸಂಬಂಧ ಸುರ್ಧೀಘ ಚರ್ಚೆಗಳು ನಡೆದಿಲ್ಲ. ಯಾವುದೇ ರಾಜ್ಯಕ್ಕೂ ಪತ್ರ ಬರೆದು ಅಭಿಪ್ರಾಯ ಕೇಳಿಲ್ಲ. ಗ್ರಾ.ಪಂ ಸೇರಿದಂತೆ ಸ್ಥಳೀಯ

ಸಂಸ್ಥೆಗಳ ಜನಪ್ರತಿನಿಧಿಗಳ ಅಭಿಪ್ರಾಯ ಕೇಳಿಲ್ಲ. ಜನರ, ಜನ ಪ್ರತಿನಿಧಿಗಳ ವಿಶ್ವಾಸ ಗಳಿಸದೇ, ಲೋಕಸಭೆಯಲ್ಲೂ ಚರ್ಚೆಗೆ ಅವಕಾಶ ನೀಡದೇ ರಾಷ್ಟ್ರೀಯ ಮಟ್ಟದ ಯೋಜನೆಯನ್ನು ಬದಲಾಯಿಸಲಾಗಿದೆ ಎಂದು ದೂರಿದರು.

ಕೇಂದ್ರದಿಂದ ಮಾಡಲು ಹೊರಟ ಬದಲಾವಣೆಯನ್ನು ಕಾಂಗ್ರೆಸ್ ಪಕ್ಷವು ರಾಷ್ಟ್ರೀಯ ಮಟ್ಟದಲ್ಲಿ ವಿರೋಧಿಸಿದೆ. ಈ ನಿಟ್ಟಿನಲ್ಲಿ ಮನ್‌ರೇಗಾ ಬಚಾವ್ ಹೆಸರಿನಲ್ಲಿ ದೊಡ್ಡ ಆಂದೋಲನ ಮಾಡುವ ತೀರ್ಮಾನ ಮಾಡಲಾಗಿದೆ. ಈ ಸಂಬಂಧ ಕೇಂದ್ರ ಸರಕಾರ ಮೊದಲಿದ್ದ ಪರಿಸ್ಥಿತಿ ಮುಂದುವರೆಸುವಂತೆ ಒತ್ತಾಯಿಸಿ ಹಂತ ಹಂತವಾಗಿ ಹೋರಾಟ ಮಾಡಲಾಗುವುದು ಎಂದು ತಿಳಿಸಿದರು.

ವಿಬಿ ಜಿ ಗ್ರಾಮ್ ಜಿ ಯೋಜನೆಯಲ್ಲಿ ಕೆಲಸವನ್ನು ಸೀಮಿತಗೊಳಿಸಲಾಗಿದೆ. ಕೇಂದ್ರ ಸರಕಾರ ನೀಡುವ ಅನುಮತಿಯಷ್ಟು ಮಾತ್ರ ಕೆಲಸ ಮಾಡಬೇಕಿದೆ. ಇದು ರಾಜ್ಯಕ್ಕೆ ನ್ಯಾಯ ಮಾಡುತ್ತಿದೆ. 100ದಿನಗಳ ಕೆಲಸ ನೀಡುತ್ತಿದ್ದ ಯೋಜನೆಯನ್ನು 125 ನೀಡುವುದಾಗಿ ಹೇಳಲಾಗುತ್ತಿದೆ. ಆದರೆ ಸಾಕಷ್ಟು ಅನುದಾನ ನೀಡದ ಕಾರಣ ಈಗ 100 ದಿನಗಳೂ ಕೆಲಸ ದೊರೆಯದಂತಹ ಪರಿಸ್ಥಿತಿ ಎದುರಾಗಿದೆ ಎಂದರು.

ನೂತನ ಯೋಜನೆಯ ಮೂಲಕ ಹೊಸ ಸಮಸ್ಯೆಯನ್ನು ತರಲಾಗಿದೆ. ಸಾರ್ವಜನಿಕ ಉದ್ಯೋಗ ಹಕ್ಕನ್ನು ಕಸಿದಿರುವುದನ್ನು ಕಾಂಗ್ರೆಸ್ ಪಕ್ಷವು ತೀವ್ರವಾಗಿ ವಿರೋಧಿಸುತ್ತದೆ. ಈ ನಿಟ್ಟಿನಲ್ಲಿ ವಿವಿಧ ಹೋರಾಟಗಳನ್ನು ಹಮ್ಮಿಕೊಳ್ಳಲು ತೀರ್ಮಾನಿಸಲಾಗಿದೆ. ಸಾರ್ವಜನಿಕ ಹಿತದೃಷ್ಟಿಯಿಂದ ಪ್ರತಿಭಟನೆ, ಉಪವಾಸ ಸತ್ಯಾಗ್ರಹ, ಪಾದಯಾತ್ರೆ, ಸಭೆಗಳನ್ನು ನಡೆಸುವಂತೆ ಪ್ರದೇಶ ಕಾಂಗ್ರೆಸ್ ಸಮೀತಿಯಿಂದ ಜಿಲ್ಲಾ ಅಧ್ಯಕ್ಷರುಗಳಿಗೆ ಪತ್ರ ಬರೆಯಲಾಗಿದ್ದು, ಜಿಲ್ಲಾ ಸಮಿತಿಯು ಹಂತ ಹಂತವಾಗಿ ಹೋರಾಟ ನಡೆಸಲು ಸಿದ್ದವಾಗಿದೆ ಎಂದು ಹೇಳಿದರು.

ಪರೋಕ್ಷವಾಗಿ ಮಹಾತ್ಮ ಗಾಂಧಿ ಅವರ ಹೆಸರನ್ನು ಯೋಜನೆಯಿಂದ ತೆಗೆಲು ಮುಂದಾಗಿರುವ ಕೇಂದ್ರ ಸರಕಾರದ ನಿರ್ಧಾರ ಪ್ರಜಾಪ್ರಭುತ್ವದ ಹೆಸರಿಗೆ ಮಾರಕವಾಗಿದೆ. ಕೃಷಿ ಕಾಯ್ದೆ ಬದಲಿಸಿದ್ದಕ್ಕೆ ಪಂಜಾಬ್, ಹರಿಯಾರಣದಲ್ಲಿ ವರ್ಷಾನುಘಟ್ಟಲೆ ಪ್ರತಿಭಟನೆ ಮಾಡಲಾಗಿತ್ತು. ಗ್ರಾಮೀಣ, ಎಸ್ಸಿ/ಎಸ್ಟಿ ಜನರಿಗೆ ಕನಿಷ್ಠ ವೇತನ ನೀಡುತ್ತಿದ್ದ ಕಾಯ್ದೆಯನ್ನು ಸಂಪೂರ್ಣ ನಿಲ್ಲಿಸಲು ಕೇಂದ್ರ ಸರಕಾರ ಹೊರಟಿತ್ತು, ವಿರೋಧದ ಹಿನ್ನಲೆ ಹಂತ ಹಂತವಾಗಿ ಬದಲಿಸುವ ಹುನ್ನಾರ ಹೂಡಿದೆ. ಗಾಂಧೀಜಿ ಹೆಸರು ಬದಲಿಸಿರುವುದು ಖಂಡನೀಯ. ರಾಷ್ಟ್ರದ 130 ಕೋಟಿಗೂ ಹೆಚ್ಚು ಜನರ ನಂಬಿಕೆಗೆ ಧಕ್ಕೆ ತಂದಿದ್ದು ಇದನ್ನು ರಾಷ್ಟ್ರೀಯ ಕಾಂಗ್ರೆಸ್ ವಿರೋಧಿಸಿ. ಹಿಂದಿನ ಕಾಯ್ದೆ ಜಾರಿಗೆ ತರಲು ಒತ್ತಾಯಿಸುವುದಾಗಿ ತಿಳಿಸಿದರು.

ಮನ್‌ಮೋಹನ್‌ಸಿಂಗ್ ಪ್ರಧಾನಿಯಾಗಿದ್ದಾಗ 53 ಲಕ್ಷ ಕೋಟಿ ಸಾಲವಿತ್ತು. ಈಗ 300 ಲಕ್ಷ ಕೋಟಿಗೂ ಹೆಚ್ಚು ಸಾಲವಿದೆ. ಅಮೆರಿಕಾ ಆರ್ಥಿಕ ಸಮಸ್ಯೆ ಎದುರಿಸುತ್ತಿದ್ದ ವೇಳೆ ಅವರಿಗೆ ಸಹಕಾರ ನೀಡಿದ ಕೀರ್ತಿ ಮನ್‌ಮೋಹನ್ ಸಿಂಗ್ ನೇತೃತ್ವದ ಸರಕಾರಕ್ಕಿದೆ. ಪ್ರಪಂಚದಲ್ಲಿ ಮನ್‌ಮೋಹನ್ ಸಿಂಗ್ ಆರ್ಥಿಕ ತಜ್ಞ ಎಂದು ಕೊಂಡಾಡುತ್ತದೆ. ಅಂತವರ ಬಗ್ಗೆಯೂ ಲಘುವಾಗಿ ಮಾತನಾಡಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯಕ್ಕೆ 2019ರಿಂದ ಇಲ್ಲಿವರಗೆ 1,26 ಸಾವಿರ ಕೋಟಿ ಕೇಂದ್ರ ಸರಕಾರದಿಂದ ಅನುದಾನ ಬರಬೇಕಾಗಿದೆ. ರಾಜ್ಯ ಸರಕಾರಗಳನ್ನು ವಿಶ್ವಾಕ್ಕೆ ಪಡೆಯದ ಕೆಲಸವನ್ನು ಮಾಡುತ್ತಿರುವ ಕೇಂದ್ರ ಸರಕಾರ ಸರ್ವಾಧಿಕಾರಿ ಧೋರಣೆ ತೋರುತ್ತಿದೆ. ಕಳೆದ ಬಾರಿ ರಾಜ್ಯ ಸರಕಾರವು 20 ಕೋಟಿ ರೂ ಗಳ ಮಾನವ ದಿನಗಳನ್ನು ಕ್ರಿಯಾಯೋಜನೆ ನೀಡಿದ್ದು, ಅದನ್ನು 13 ಕೋಟಿ ರೂಗಳಿಗೆ ಅನುಮತಿ ನೀಡಲಾಗಿದೆ. ಈ ಬಾರಿ ಅದನ್ನೇ ಮುಂದುವರಿಸಲು ಸೂಚಿಸಿದೆ ಎಂದು ಆರೋಪಿಸಿದರು.

ಗೋಷ್ಠಿಯಲ್ಲಿ ಸೆಸ್ಕ್ ಅಧ್ಯಕ್ಷ ಮತ್ತು ಶಾಸಕ ಎ.ಬಿ.ರಮೇಶ್ ಬಂಡಿಸಿದ್ದೇಗೌಡ, ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ, ಮೈಶುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಕಾಂಗ್ರೆಸ್ ಕಾರ್ಯಾಧ್ಯಕ್ಷ ಚಿದಂಬರ್, ಮುಡಾ ಅಧ್ಯಕ್ಷ ಬಿ.ಪಿ.ಪ್ರಕಾಶ್, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ಉಪಾಧ್ಯಕ್ಷೆ ವಿಜಯಲಕ್ಷ್ಮಿ ರಘುನಂದನ್, ಯೂತ್ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಶೈಲು ಇತರರಿದ್ದರು.

ಕೋಮಲವಾದ ತ್ವಚೆಗೆ ಹಾಲಿನ ಕೆನೆ

ಆರೋಗ್ಯ ಭಾಗ್ಯ

ಸೌಮ್ಯಸನತ್

ಪ್ರೋಷಕಾಂಶಗಳ ನಿಧಿಯಾಗಿರುವ ಮತ್ತು ಅಡುಗೆ ಮನೆಯಲ್ಲಿ ಸಿಗುವ ಸುಲಭ ಪದಾರ್ಥಗಳಲ್ಲಿ ನಮ್ಮ ತ್ವಚೆಯ ಆರೈಕೆಗೆ ಸಹಾಯ ಮಾಡುವ ಒಂದು ನೈಸರ್ಗಿಕ ಪದಾರ್ಥವೆಂದರೆ ಹಾಲಿನ ಕೆನೆ.

ಈಗಂತೂ ಚಳಿಗಾಲ ಈ ಸಮಯದಲ್ಲಿ ತ್ವಚೆಯ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಬಹಳ ಮುಖ್ಯ. ಹೀಗಾಗಿ ಜನ ತಮ್ಮ ಸೌಂದರ್ಯವನ್ನು ಕಾಪಾಡಿಕೊಳ್ಳಲು ಮಾರುಕಟ್ಟೆಯಲ್ಲಿ ಸಿಗುವ ದುಬಾರಿ ಉತ್ಪನ್ನಗಳನ್ನು ಖರೀದಿಸಿ ಬಳಸುತ್ತಾರೆ. ಆದರೆ ಇವುಗಳ ಬಳಕೆಯಿಂದ ಯಾವುದೇ ರೀತಿಯ ಫಲಿತಾಂಶ ಕಾಣದೇ ನಿರಾಸೆಗೊಳ್ಳುತ್ತಾರೆ. ಸೌಂದರ್ಯ ವರ್ಧನೆಗಾಗಿ ನಾವು ಅನೇಕ ಸೌಂದರ್ಯ ವರ್ಧಕಗಳಿಗೆ ಮೊರೆ ಹೋಗುತ್ತೇವೆ. ಮನೆಯಲ್ಲಿ ಸಿಗುವ ಅನೇಕ ಪದಾರ್ಥಗಳಿಂದ ಸೌಂದರ್ಯ ವರ್ಧಿಸಿಕೊಳ್ಳಬಹುದು.ಅದರಲ್ಲಿ ಹೆಚ್ಚಿನದು ಹಾಲುಗಳ ಉತ್ಪನ್ನವೇ. ಎರಡು ದಿನಗಳಿಂದ ಸಂಗ್ರಹಿಸಿದ ಹಾಲಿನ ಕೆನೆ ಸೌಂದರ್ಯವರ್ಧಕವಾಗಿ ಕೆಲಸ ಮಾಡುತ್ತದೆ.

ಪ್ರಾಚೀನ ಕಾಲದಿಂದಲೂ ಹಾಲಿನ ಕೆನೆಯು ಪ್ರಮುಖವಾದ ಸೌಂದರ್ಯವರ್ಧಕ ಸಾಮಗ್ರಿಯಾಗಿದೆ. ಇದು ತ್ವಚೆಯನ್ನು ಒಣ ತ್ವಚೆಯಿಂದ ಮೃದು ತ್ವಚೆಯನ್ನಾಗಿ ಮಾಡಲು ಸಹಕರಿಸುತ್ತದೆ. ಹಾಲಿನಲ್ಲಿರುವ ಪ್ರತಿಯೊಂದು ಅಂಶಗಳು ಮುಖದ ಸೌಂದರ್ಯಕ್ಕೆ ಕಳೆಯನ್ನು ನೀಡುತ್ತವೆ. ಹಾಲಿನ ಕೆನೆಯಿಂದ ಹಲವಾರು ಪ್ರಯೋಜನಗಳು ತ್ವಚೆಗೆ ಲಭಿಸುತ್ತವೆ. ಇದು ತ್ವಚೆಗೆ ಸುರಕ್ಷಿತವಾದ ಮತ್ತು ಅಗ್ಗವಾದ ಮನೆ ಮದ್ದಾಗಿರುತ್ತದೆ.

ಹಾಲಿನ ಕೆನೆಯನ್ನು ಆರೋಗ್ಯದ ಕಾರಣಗಳಿಗಾಗಿ ಬಹುತೇಕ ಮಂದಿ ಸುಮ್ಮನೆ ಕಸದ ಬುಟ್ಟಿಗೆ ಹಾಕುತ್ತಾರೆ. ಆದರೆ ಅದರ ಪ್ರಯೋಜನ ತಿಳಿದಿದ್ದರೆ, ಪವಾಡಗಳನ್ನು ನಮ್ಮದಾಗಿಸಿಕೊಳ್ಳಬಹುದು. ಹಾಲಿನ ಕೆನೆಯ ಫೇಸ್ ಪ್ಯಾಕ್ ತ್ವಚೆಯನ್ನು ಹೊಳೆಯುವಂತೆ ಮಾಡುತ್ತದೆ, ಮೊಡವೆಗಳನ್ನು ನಿವಾರಿಸುತ್ತದೆ, ಜೊತೆಗೆ ತ್ವಚೆಯನ್ನು ಮೃದುವಾಗಿಸುತ್ತದೆ.

ಅಲ್ಲದೆ ಇದು ತ್ವಚೆಯಲ್ಲಿರುವ ಸುಕ್ಕುಗಳು ಮತ್ತು ಗೆರೆಗಳನ್ನು ನಿವಾರಿಸುತ್ತದೆ. ಆದ್ದರಿಂದ ಪ್ರತಿದಿನ ಮುಖಕ್ಕೆ ಕೆನೆಯನ್ನು ಹಚ್ಚಿಕೊಳ್ಳುವ ಅಭ್ಯಾಸವನ್ನು ಇರಿಸಿಕೊಂಡರೆ ಅಂದವಾದ ತ್ವಚೆಯುಳ್ಳ ಮುಖಾರವಿಂದವನ್ನು ಪಡೆಯಬಹುದು.

ಹಾಲಿನ ಕೆನೆ' ಬಳಸುವ ಸೂಕ್ತ ವಿಧಾನ

1. ಹುಳಿ ಇಲ್ಲದ ಕೆನೆಯನ್ನು ಮಸಾಜ್‌ಗಾಗಿ ಉಪಯೋಗಿಸಿ. ಒಣ, ಸಾಮಾನ್ಯ ಚರ್ಮದವರು ಕೆನೆ ಮಸಾಜ್ ಮಾಡಿಕೊಳ್ಳಬಹುದು. ಎಣ್ಣೆ ಚರ್ಮದವರು ಕೆನೆ ಉಪಯೋಗಿಸದಿರುವುದು ಒಳ್ಳೆಯದು.
2. ಶುಷ್ಕಗೊಂಡ ಮುಖದ ಕಾಂತಿ ಹೆಚ್ಚಿಸಲು ಒಂದು ಚಮಚ ಕೆನೆಗೆ ಚಿಟಕಿ ಉಪ್ಪು ಹಾಕಿ ಮಿಶ್ರಣ ಮಾಡಿ ಮುಖಕ್ಕೆ ಹಚ್ಚಿ ವತ್ತಾಕಾರವಾಗಿ ಮಸಾಜ್ ಮಾಡಿ. ನಂತರ ಹೆಸರುಹಿಟ್ಟು ಹಚ್ಚಿ ಮುಖ ತೊಳೆಯಿರಿ.
3. ಮೇಕಪ್‌ನಿಂದಾಗಿ ಅಲರ್ಜಿ ಆಗಿದ್ದಲ್ಲಿ ಕೆನೆಗೆ ಅರಿಶಿಣ ಹಾಕಿ ಮುಖಕ್ಕೆ ಮಸಾಜ್ ಮಾಡಿಕೊಳ್ಳಿ.
4. ಪ್ರತಿನಿತ್ಯ ಕೆನೆಗೆ ಕೇಸರಿ ದಳ ಹಾಕಿಕೊಂಡು ಮುಖ, ಕತ್ತು, ಕೈಗಳಿಗೆ ಮಸಾಜ್ ಮಾಡಿಕೊಳ್ಳುವುದರಿಂದ ಸನ್ ಬರ್ನ್ ಹೋಗುವುದು.
5. ಆರುತಿಂಗಳ ಮಗುವಿನಿಂದ ಹಿಡಿದು ಅರವತ್ತರ ಅಜ್ಜಿಯೂ ಕೆನೆ ಮಸಾಜ್ ಮಾಡಿಕೊಳ್ಳಬಹುದು.
6. ಮಗುವಿನ ಚರ್ಮ ಹೆಚ್ಚು ಕಪ್ಪಗಿದ್ದಲ್ಲಿ ಕೆನೆಗೆ ಶಿಗೇಕಾಯಿ ಹಾಗೂ ತುಸು ಅಡುಗೆ ಸೋಡಾ ಹಾಕಿ ಮೈಗೆ ಹಚ್ಚಿ ಸ್ನಾನ ಮಾಡಿಸುವುದರಿಂದ ಚರ್ಮದ ಬಣ್ಣ ಬದಲಾಗುವುದು.
7. ಮೊಣಕೈ, ಮೊಣಕಾಲು ಒರಟಾಗಿ ಕಪ್ಪಗಿದ್ದಲ್ಲಿ ಪ್ರತಿನಿತ್ಯ ಕೆನೆಗೆ ನಿಂಬೆರಸ ಸೇರಿಸಿ ಮಸಾಜ್ ಮಾಡಿಕೊಳ್ಳಿ.
8. ಕೆನೆ ಹಚ್ಚಿ ಬಾಡಿ ಮಸಾಜ್ ಮಾಡಿಕೊಂಡು ಪರಿಮಳಯುಕ್ತ ನೀರಿನಲ್ಲಿ ಮುಳುಗಿ ಅರ್ಧಗಂಟೆ ಬಿಟ್ಟು ಸ್ನಾನ ಮಾಡುವುದರಿಂದ ಮೈ ಪೂರ ಹಗುರವಾಗುವುದು. ಮೂಳೆಯ ನೋವು ಕಡಿಮೆಯಾಗುವುದು. ತುಟಿಗಳು ಕಪ್ಪಗಿದ್ದು ಅಥವಾ ಬಿರುಕು ಬಿಡುತ್ತಿದ್ದರೆ ಕೆನೆಗೆ ಜೇನುತುಪ್ಪ ಸೇರಿಸಿ ರಾತ್ರಿ ತುಟಿಗಳಿಗೆ ಹಚ್ಚಿಕೊಳ್ಳಿ. ಕ್ರಮೇಣ ಸಮಸ್ಯೆ ನಿವಾರಣೆ ಆಗುವುದು.
9. ಎರಡು ಟೀ ಚಮಚ ಹಾಲಿನ ಕೆನೆಯ ಜೊತೆಗೆ ಒಂದು ಟೀ ಚಮಚ ಗಂಧದ ಪುಡಿ, ಒಂದು ಟೀ ಚಮಚ ಕಡಲೆ ಹಿಟ್ಟು, ಒಂದು ಚಿಟಿಕೆ ಅರಿಶಿನವನ್ನು ಬೆರೆಸಿಕೊಳ್ಳಿ. ಇದರ ಮೇಲೆ ಕೆಲವು ಹನಿಗಳಷ್ಟು ರೋಸ್ ವಾಟರ್ ಚಿಮುಕಿಸಿ. ಇವನ್ನೆಲ್ಲ ಸೇರಿಸಿ, ಗಟ್ಟಿಯಾದ ಪೇಸ್ಟ್ ತಯಾರಿಸಿಕೊಳ್ಳಿ. ಇದನ್ನು ನಿಮ್ಮ ಮುಖ ಮತ್ತು ಕುತ್ತಿಗೆ ಮೇಲೆ ಲೇಪಿಸಿ ಉಜ್ಜಿಕೊಳ್ಳಿ. 10 ನಿಮಿಷ ಬಿಟ್ಟು, ನಂತರ ಉಗುರು ಬೆಚ್ಚಗಿನ ನೀರಿನಲ್ಲಿ ಇದನ್ನು ತೊಳೆಯಿರಿ.
10. ಒಣ ತ್ವಚೆಯ ಸಮಸ್ಯೆಯಿಂದ ಬಳಲುತ್ತಿರುವವರು ಈ ಫೇಸ್ ಪ್ಯಾಕ್ ಅನ್ನು ಬಳಸಬಹುದು. ಇದಕ್ಕಾಗಿ ನಾಲ್ಕು ಟೀ ಚಮಚ ಹಾಲಿನ ಕೆನೆಯ ಜೊತೆಗೆ ಎರಡು ಟೀ ಚಮಚ ರೋಸ್ ವಾಟರ್ ಬೆರೆಸಿಕೊಳ್ಳಿ. ಇದನ್ನು ಕಾಲುಗಳು, ಕೈಗಳು ಮತ್ತು ಮುಖದ ಮೇಲೆ ಹಚ್ಚಿಕೊಂಡು, ನಂತರ ಸ್ನಾನ ಮಾಡಿ.
11. ಒಂದು ಚಿಟಿಕೆ ಕೇಸರಿಯನ್ನು ಒಂದು ಟೀ ಚಮಚ ಜೇನು ತುಪ್ಪ ಮತ್ತು ಒಂದು ಟೀ ಚಮಚ ಹಾಲಿನ ಕೆನೆಯ ಜೊತೆಗೆ ಮಿಶ್ರಣ ಮಾಡಿಕೊಳ್ಳಿ.ಈ ಪೇಸ್ಟನ್ನು ನಿಮ್ಮ ಮುಖಕ್ಕೆ ಹಚ್ಚಿಕೊಂಡು 30 ನಿಮಿಷ ಬಿಟ್ಟು, ನಂತರ ತೊಳೆಯಿರಿ. ಇದು ಅತ್ಯಂತ ಪರಿಣಾಮಕಾರಿಯಾದ ಫೇಸ್ ಪ್ಯಾಕ್ ಆಗಿದ್ದು, ಇದರಿಂದ ತ್ವಚೆ ಸುಂದರವಾಗಿ ಕಾಣುತ್ತದೆ.
12. ಒಂದು ಟೀ ಚಮಚ ಹಾಲಿನ ಕೆನೆಯ ಜೊತೆಗೆ ಒಂದು ಟೀ ಚಮಚ ಓಟ್ಸ್, ಒಂದು ಟೀ ಚಮಚ ಅರಿಶಿನ ಮತ್ತು ಒಂದು ಟೀ ಚಮಚ ರೋಸ್ ವಾಟರ್ ಬೆರೆಸಿಕೊಳ್ಳಿ. ಇದನ್ನು ನಿಮ್ಮ ಮುಖಕ್ಕೆ ಲೇಪಿಸಿಕೊಳ್ಳಿ ಮತ್ತು ವೃತ್ತಾಕಾರವಾಗಿ ಐದು ನಿಮಿಷಗಳ ಕಾಲ ಉಜ್ಜಿ. ಇದನ್ನು 15 ನಿಮಿಷ ಬಿಟ್ಟು, ನಂತರ ತೊಳೆಯಿರಿ.

ಔಷಧವಾಗಿ ಕೆನೆಯ ಉಪಯೋಗಗಳು.

1. ಹಾಲಿನ ಕೆನೆಯು ಅತ್ಯಂತ ಸತ್ವಭರಿತವಾಗಿದ್ದು ವ್ಯಕ್ತಿಯ ಶರೀರ ತೂಕವನ್ನು ಹೆಚ್ಚಿಸಲು ಸಹಕರಿಸುತ್ತದೆ. ಪ್ರತಿನಿತ್ಯ ಹಾಲಿನ ಕೆನೆಗೆ ಸಕ್ಕರೆ ಸೇರಿಸಿ ತಿಂದರೆ ಶರೀರದ ತೂಕ ಅಧಿಕವಾಗುತ್ತದೆ.
2. ಹಾಲಿನ ಕೆನೆಯನ್ನು ಸಕ್ಕರೆಯೊಂದಿಗೆ ಸೇರಿಸಿ ತಿಂದರೆ ಎಸಿಡಿಡಿ ಸಮಸ್ಯೆಯು ಕಡಿಮೆಯಾಗುತ್ತದೆ.
3. ಹಾಲಿನ ಕೆನೆಯನ್ನು ಸೇವಿಸುವುದರಿಂದ ಮಲಬದ್ಧತೆ ನಿವಾರಣೆಯಾಗುತ್ತದೆ.
4. ಹಾಲಿನ ಕೆನೆಯನ್ನು ಸೇವಿಸುವುದರಿಂದ ದೇಹದ ಮೂಳೆಗಳು ದ್ರುಢವಾಗುತ್ತವೆ.
5. ಕಣ್ಣಿನ ರೆಪ್ಪೆಯಲ್ಲಿ ಕುರ ಮೂಡಿದಾಗ ಹಾಲಿನ ಕೆನೆಯನ್ನು ಕುರದ ಮೇಲೆ ಲೇಪಿಸಬೇಕು
6. ಸುಟ್ಟ ಗಾಯದ ಮೇಲೆ ಹಾಲಿನ ಕೆನೆಯನ್ನು ಲೇಪಿಸಿದರೆ ಉರಿ ಹಾಗು ನೋವು ಕಡಿಮೆಯಾಗುತ್ತದೆ.
7. ಚೇಳು, ಶತಪದಿ ಇತ್ಯಾದಿಗಳು ಕಡಿದಾಗ ಹಾಲಿನೆ ಕೆನೆಗೆ ಸ್ವಲ್ಪ ಅರಸಿನ ಪುಡಿ ಸೇರಿಸಿ ಲೇಪಿಸಬೇಕು.
8. ಬಿಸಿ ಪದಾರ್ಥಗಳನ್ನು ಕುಡಿದು ತುಟಿ ಸುಟ್ಟರೆ ತುಟಿಯಮೇಲೆ ಹಾಲಿನ ಕೆನೆಯನ್ನು ಹಚ್ಚಬೇಕು.

ಗಮನಿಸಬೇಕಾದ ಅಂಶಗಳು

ಹೊಳೆಯುವಂಥ ತ್ವಚೆಯನ್ನು ಹೊಂದಲು ಹಾಲಿನ ಕೆನೆಯನ್ನು ಅನ್ವಯಿಸುತ್ತಾರೆ, ಇದು ಎಲ್ಲರ ತ್ವಚೆಗೂ ಹೊಂದುವುದಿಲ್ಲ ಬದಲಾಗಿ ಇದರಿಂದ ಆಗುವ ಅಡ್ಡಪರಿಣಾಮಗಳೇ ಹೆಚ್ಚು. ಹಾಗಾಗಿ ಎಣ್ಣೆ ಚರ್ಮ, ಮೊಡವೆ ಇರುವವರು ಹಾಗೂ ಸೂಕ್ಷ್ಮ ಚರ್ಮ ಹೊಂದಿದವರು ತ್ವಚೆಗೆ ಹಾಲಿನ ಕೆನೆ ಹಚ್ಚಲೇಬಾರದು.

ಪದ ಬಂಧ

ಜ್ಯೋತಿ ರಾಜೇಶ್



ಎಡದಿಂದ ಬಲಕ್ಕೆ

2. ಅಬ್ಬ ಎಂಥ ಧೂರ್ತನಿವ.....(2)
5. 'ದುರಸ್ತಿ' ಮಾಡಿದ ಕೆಲಸ, ಕೊನೆಯಲ್ಲಿ ದೀರ್ಘವಾಗಿದೆ.....(3)
6. ಹರದಾರಿ ಹೋಗಲು ಸಿಕ್ಕ ದೊಡ್ಡರಸ್ತೆ ಅಥವಾ ಒಪ್ಪಿಗೆ ಪತ್ರಕ್ಕೆ ಹೀಗನ್ನಿ..... .(4)
8. ಸಂಕ್ರಾಂತಿಯಿಂದ ತನ್ನ ಪಥ ಬದಲಿಸುವ ದೇವನಿವ .....(4)
10. ಮಾರ್ಗವನ್ನು ಹೀಗೂ ಕರೆಯಬಹುದಲ್ಲಾ....(2)
11. ಕ್ಷಣ ಕೂಡ ಶಾಶ್ವತವಲ್ಲದ್ದಿದು......(3)
12. ಈ ಮೀನು ಹೀಗೆ ಹೊಳೆಯುತ್ತಿದೆ....(3)
13. ಬಲಿದಾನ ಅಥವ ಸಮರ್ಪಣೆಯನ್ನು ಹೀಗೆ ಹೇಳಿ.......(3)
15. ಎರೆಡಕ್ಷರದ ಗಗನವಿದು......(2)
17. ಮಲಗು ಅಂತ ಕಾವ್ಯಭಾಷೆಯಲ್ಲಿ ಹೇಳಿದ್ದು ಹೀಗೆ.....(4)
19. ಇದನ್ನು ತಿಂದು ಒಳ್ಳೇ ಮಾತಾಡಬೇಕಂತೆ......(4)
20. ಈ ಲಕ್ಷ್ಯದಲ್ಲಿ ಮನವಿದೆ.....(3)
21. ಕುಶಲ ಎಂದು ಹೀಗೆ ಹೇಳಿ.....(2)

ಮೇಲಿನಿಂದ ಕೆಳಕ್ಕೆ.....

1. ನಮ್ಮ ಸುತ್ತಲೂ ಪರಿಪರಿಯಾಗಿ ಇರುವ ಬಂಧು/ಗೆಳೆಯರ ವರ್ಗವಿದು..... (4)
2. ವಸ್ತುವನ್ನು ಬೆಲೆಕೊಟ್ಟು ಕೊಂಡುಕೊಳ್ಳೋದಿದು....(3)
3. ಉಪ್ಪಿನಕಾಯಿಯನ್ನು ನೆನಪಿಸುವ ಮಳೆ ನಕ್ಷತ್ರವೇ ಇದು?.....(3)
4. ಇವಳು ಮುನಿದರೆ ಮಾರಿ....(2)
7. ಒಂದು ಕಾಲದಲ್ಲಿ ಹುಡುಗಿಯರಿಗೆ ತುಂಬ ಇಷ್ಟವಾದ ಉಡುಗೆಯ ಒಂದು ಭಾಗವಿದು.....(3)
9. ಇದು ನಿಮ್ಮಿಷ್ಟದ ಪದ......
14. ಇದೂ ಒಂದು ಬಗೆಯ 'ತಿಲ'......(3)
16. ದಿಗಿಲು ಹುಟ್ಟಿಸುವಂತಹದ್ದರಲ್ಲಿ ಯಾನವಿದೆ......(4)
17. ದಕ್ಷಿಣ ಭಾರತದಲ್ಲಿ ಚಿಗುರಿದ ರಾಜವಂಶವಿದು......(3)
18. ಸರಾಗವಾದದ್ದರಲ್ಲಿ ತಿರುಗಿದ ಮಗನಿದ್ದಾನಲ್ಲ..(3)
19. ಯಾರೇ ಕೂಗಾಡಿದರೂ ಇದರ ನೆಮ್ಮದಿಗೆ ಭಂಗವಿಲ್ಲವಂತೆ..... (2)

ಎಷ್ಟು ಕಷ್ಟವೋ....ಹೊಂದಿಕೆಯೆಂಬುದು ನಾಲ್ಕುದಿನದ ಈ ಬಾಳಿನಲಿ...!

ವಾಸ್ತವ ವರ್ತಮಾನ

ಹಿರಿಯೂರು ಪ್ರಕಾಶ್

"ಅಲ್ಲಪ್ಪಾ.....ನೀನೇಕೆ.... ಅವನನ್ನು ಮೊದಲಿನಿಂದಲೂ ಮಾತನಾಡಿಸುತ್ತಿಲ್ಲ. ಮಾತನಾಡಿಸುವುದಿರಲೀ, ಅವನ ಮುಖ ಕಂಡರೆ ಆಗದಂತೆ ಅಂತರ ಕಾಯ್ದುಕೊಂಡೇ ಬಂದಿದ್ದೀಯಾ...? ನಿನಗೂ ಅವನಿಗೂ ಏನಾದರೂ ದುಡ್ಡು, ಒಡವೆ ,ಆಸ್ತಿ, ಪ್ರೀತಿ.... ಇತ್ಯಾದಿ ವಿಚಾರಗಳಿಗೆ ಸಂಬಂಧಿಸಿದಂತೆ ಎಂದಾದರೂ ವಾದ –ವಿವಾದ, ಇಲ್ಲವೇ ಕಿರಿಕ್ಕು ಆಗಿತ್ತಾ..? ಇಷ್ಟು ವರ್ಷದಿಂದ ನೀವೆಲ್ಲಾ ತುಂಬಾ ಹತ್ತಿರವಿದ್ದರೂ ದೂರವಿದ್ದಂತೆ ಏಕಿದ್ದೀರಿ....? ನನಗೆ ಅರ್ಥವಾಗುತ್ತಿಲ್ಲ...!

ಇವೇ ಮೊದಲಾದ ಪ್ರಶ್ನೆಗಳನ್ನು ನನ್ನ ಆತ್ಮೀಯನೊಬ್ಬನಿಗೆ ಒಮ್ಮೆ ಕೇಳಿದ್ದೆ. ಅದಕ್ಕೆ ಅವನಿಂದ ಬಂದ ಉತ್ತರ...

" ಛೇ ಹಾಗೇನಿಲ್ಲಪ್ಪಾ..... ನಮ್ಮಿಬ್ಬರ ನಡುವೆ ಅಂಥಾದ್ದೇನೂ ಇಲ್ಲ.!

ಹಾಗಾದಾರೆ ಎಲ್ಲರಂತೆ ಅವನನ್ನೇಕೆ ನೀನು ನೆಟ್ಟಗೆ ಮಾತನಾಡಿಸದೇ ಹಲವು ವರ್ಷಗಳಿಂದಲೂ ಡಿಸ್ಟೆನ್ಸ್ ಮೇಂಟೇನ್ ಮಾಡ್ತಾ ಇದೀಯಾ..?

ಅಚ್ಚರಿಯಿಂದ ಕೇಳಿದ್ದೆ.

ಅದಕ್ಕೂ ಅವ ಹೇಳಿದ್ದು ". ಏನಿಲ್ಲ....ಹಾಗೇ ಸುಮ್ನೇ...!

ಅವನ ಮುಗುಳುನಗೆಯೇ ಎಲ್ಲದಕ್ಕೂ ಉತ್ತರವಾಗಿತ್ತು.!

ಅರೆ...ಇವನಜ್ಜಿ..... ಅವನೊಂದಿಗೆ ಯಾವ ಬೇಡದ ವ್ಯವಹಾರವೂ ಇಲ್ಲ, ಎಂತಹಾ ಕಿರಿಕ್ಕೂ ಇಲ್ಲ ಮನಸ್ತಾಪವೂ ಇಲ್ಲ.... ಹಾಗಿದ್ದ ಮೇಲೆ ಎಲ್ಲರನ್ನೂ ಆತ್ಮೀಯವಾಗಿ ಮಾತನಾಡಿಸಿ ಅವನ ಸನಿಹದಲ್ಲಿರುವ ಈ ಮನುಷ್ಯ ಅವನನ್ನು ಮಾತ್ರ ಯಾಕೆ ಹೀಗೆ ದೂರ ಇಟ್ಟು ಅವನನ್ನು ಕಂಡರೆ ಆಗದಂತೆ ಇದ್ದಾನೆ.....?

ಈ ಪ್ರಶ್ನೆಗೆ ಕೊನೆಗೂ ಸ್ಪಷ್ಟ ಉತ್ತರ ಸಿಗದೇ ತಲೆಯೊಳಗಿನ ಹುಳು ಕೊರೆಯುತ್ತಲೇ ಇತ್ತು. ಅದನ್ನು ಅಲ್ಲಿಗೇ ಬಿಟ್ಟು ಸುಮ್ಮನಾಗಿದ್ದೆ. ಆದರೆ ಹಾಗೆಯೇ ಈ ವಿಚಾರದ ಸ್ವಲ್ಪ ಆಳಕ್ಕಿಳಿದು ನೋಡಿದಾಗ....

ನಮ್ಮಲ್ಲೂ ಸಾಕಷ್ಟು ಜನರ ಮನೋಭಾವ ಹೀಗೆಯೇ ಇದ್ದಿರಬಹುದಲ್ಲವೇ...? ಅಂದರೆ ಅವರಿಗೆ ಗೊತ್ತಿದ್ದೋ ಗೊತ್ತಿಲ್ಲದೆಯೋ... ಕಾರಣವಿದ್ದೋ...ಇಲ್ಲದೆಯೋ... ನಮ್ಮದೇ ಸ್ನೇಹ ವಲಯದಲ್ಲಿ, ಬಂಧುಗಳಲ್ಲಿ ನೆಂಟರಿಷ್ಟರಲ್ಲಿ ಯಾರೋ ಒಬ್ಬಿಬ್ಬರು ನಮಗೆ ತೀರ ಹತ್ತಿರದಲ್ಲಿದ್ದರೂ ಅವರನ್ನು ಎಲ್ಲರಂತೆ ನಾವು ಮಾತನಾಡಿಸುವುದಾಗಲೀ ಅಥವಾ ಕೊನೇಪಕ್ಷ ಮುಖ ಕಂಡರೆ ಒಂದು ಸ್ಮೈಲ್ ಕೊಟ್ಟು ಹೇಗಿದ್ದೀರಿ ಎನ್ನುವುದಾಗಲೀ ಮಾಡಲು ಮನಸು ಬರೋಲ್ಲ. ಹತ್ತು ಜನರ ಗುಂಪಿನಲ್ಲಿ ಒಂಭತ್ತು ಜನರನ್ನು ಆತ್ಮೀಯವಾಗಿ ಮಾತನಾಡಿಸುವ ಮನಸ್ಸು ಈ ಥರದ ಒಬ್ಬಿಬ್ಬರನ್ನು ಹತ್ತಿರ ಸುಳಿಯಲು ಸಹಾ ಬಿಡದು..... ಹೌದು.. ಹೀಗೇಕೆ...?

ಇನ್ನೂ ಕೌತುಕವೆಂದರೆ,

ಅವರೊಂದಿಗೆ ಜಗಳವಾಡಿಲ್ಲ, ದುಡ್ಡು ಕಾಸಿನ ಡೀಲಿಂಗ್ಸ್ ಇಲ್ಲ, ಎಂಥಾ ಕಲಹಗಳೂ ಇಲ್ಲ. ಆದರೂ ಅವರಿಂದ ನೆರಳು ಕೂಡಾ ಸೋಕದಂತೆ ಅಂತರ ಕಾಪಿಟ್ಟುಕೊಂಡೇ ಬಂದಿರುತ್ತೇವೆ..... ಇದೊಂಥರಾ ವಿಚಿತ್ರ ಆದರೂ ಸತ್ಯವಲ್ಲವೇ..?

ಒಮ್ಮೆ ನಿಮ್ಮ ಮನಸನ್ನು ಕೇಳಿ ನೋಡಿ..?

ಹೊರಗಿನ ಫ್ರೆಂಡ್ಸ್, ಕೊಲೀಗ್ಸ್ ಗಳ ಕಥೆ ಬಿಟ್ಟಾಕಿ. ನಿಮ್ಮ ಹತ್ತಿರದ ಬಂಧು ಬಳಗ, ಕೌಟುಂಬಿಕ ವಲಯದಲ್ಲೇ ಒಂದಷ್ಟು ಜನರನ್ನು ಹಾಗೇ ಕಣ್ಣಮುಂದೆ ತಂದುಕೊಳ್ಳಿ. ಅದರಲ್ಲಿ ಒಂದಿಬ್ಬರನ್ನು ಕಂಡರೆ ನಿಮ್ಮ ಮನಸ್ಸು ನಿಷ್ಕಾರಣವಾಗಿ ಅವರನ್ನು ದೂರ ಇಡಲೇ ಬಯಸುತ್ತದೆ. ಅವರ ಬಗ್ಗೆ ಯಾವೊಂದು ವಿಷಯವನ್ನೂ ತಿಳಿಯಲು ಕಿಂಚಿತ್ತೂ ಆಸ್ಥೆ ಇರದು. ಹಾಂ......ಎಗ್ಸೆನ್....ಇದಕ್ಕೆ ನಿರ್ದಿಷ್ಟವಾದ ಕಾರಣ ಇರೋಲ್ಲ..!

ಕೆಲವರ ಬಗೆಗೆ ಇನ್ನೊಂದು ರೀತಿಯಲ್ಲೂ ನಮ್ಮ ಮನಸ್ಸು ವರ್ತಿಸುತ್ತದೆ. ಅಂದರೆ , ಆ ವ್ಯಕ್ತಿಯ ಯಾವುದೇ ರೀತಿಯ ಏಳಿಗೆಯನ್ನು ಸಹಿಸಲು ಸಾಧ್ಯವಿರದಷ್ಟು ಹೆಜ್ಜೆಹೆಜ್ಜೆಗೂ ಒಳಗೊಳಗೇ ದ್ವೇಷಿಸಲು ತೊಡಗುತ್ತದೆ. ಅದನ್ನು ಕೇವಲ ಅಸೂಯೆ ಎನ್ನಲಾಗದು. ವಿಸ್ಮಯವೆಂದರೆ ಅದೇ ಮನಸ್ಸು ಇತರೆ ಪರಿಚಿತರ ಸ್ನೇಹಿತರು ತಮ್ಮ ಬದುಕಿನಲ್ಲಿ ಸಾಧಿಸಿದ ಎಂತಹಾ ಏಳಿಗೆಯನ್ನಾದರೂ ವಿಶಾಲ ಮನಸ್ಸಿನಿಂದ ಸಂಭ್ರಮಿಸುತ್ತಲೇ ಇರುತ್ತೆ. ಅಂದರೆ ಮನಸಿನ ಈ ನೆಗೆಟೀವ್ ಅಪ್ರೋಚು ಕೇವಲ ಒಂದಿಬ್ಬರ ವಿಷಯದಲ್ಲಿ ಮಾತ್ರವೇ.ಅಂಥವರಿಗೆ ಸಂಬಂಧಿಸಿದ ಎಂತಹ ಖುಷಿಯ ವಿಚಾರವನ್ನೂ ಕಹಿಯಾಗಿಯೇ ಸ್ವೀಕರಿಸುತ್ತೆ...! ವೆರೀ ಪೆಕ್ಯೂಲಿಯರ್ ಅಲ್ವಾ..?

ಎಲ್ಲಕ್ಕಿಂತ ತುಂಬಾ ಅಚ್ಚರಿಯ ಸತ್ಯ ಏನುಗೊತ್ತಾ....? ಈ ತರಹದ ಕಾಂಪ್ಲೆಕ್ಸಿಟಿ ಅನ್ನೋದು ಒಂದೇ ಕುಟುಂಬದ ಕೆಲ ಸದಸ್ಯರಲ್ಲೇ ಎಲ್ಲೋ ಒಂದು ಕಡೆ ಆಳವಾಗಿ ಸುಪ್ತವಾಗಿರಬಲ್ಲದು. ಅಂದರೆ ಕೆಲವು ಅಣ್ಣ ತಮ್ಮಂದಿರೋ, ಅಕ್ಕ ತಂಗಿಯರೋ ಅಥವಾ ಕಸೀನ್ಸ್ ನಡುವೆಯೋ... ವಿನಾಕಾರಣ ಮನಸ್ಸುಗಳು ಒಂದು ನಿರ್ದಿಷ್ಟ ಅಂತರದಲ್ಲೇ ಇರುತ್ತವೆ. ಮೇಲ್ನೋಟಕ್ಕೆ ಎಲ್ಲೋ ಎಂದೋ ಒಮ್ಮೆ ಎದುರು ಬದುರಾಗಿ ನಿಂತಾಗ ಅನಿವಾರ್ಯವಾಗಿ ಬಲವಂತವಾಗಿ ಮೊಗದಲ್ಲಿ ನಗು ತುಂಬಿಕೊಂಡು ತಲೆ ಅಲ್ಲಾಡಿಸಿ, ಯಾಂತ್ರಿಕವಾಗಿ ಮುಂದೆ ಹೋಗುವ ಮನಸ್ಸು ಅವರನ್ನು ಮನಸಾರೆ ವಿಚಾರಿಸಲು ಬಯಸೋಲ್ಲ....!

ಇದು ಯಾವ ರೀತಿಯಲ್ಲಿ ದೀರ್ಘಕಾಲ ಮುಂದುವರೆದುಕೊಂಡು ಬಂದಿರುತ್ತೆ ಅಂದರೆ ಯಾರಾದರೂ ನೋಡಿದವರ ದೃಷ್ಟಿಯಿಂದ ಇವರಿಬ್ಬರ ನಡುವೆ ಯಾವುದೋ ಗಂಭೀರವಾದ ವಿಷಯಕ್ಕೆ ವಾದವಿವಾದ , ಜಗಳ ಇದ್ದಿರಬಹುದೆಂಬ ಇಂಬು ಕೊಡುವಂತೆ ಅಂತರ ಎದ್ದು ಕಾಣುತ್ತದೆ.

ಫನ್ನೀ ಪಾರ್ಟ್ ಎಂದರೆ ....ಇದಕ್ಕೆ ಇಂಥಾದ್ದೇ ನಿರ್ದಿಷ್ಟವಾದ ಕಾರಣವೂ ಇರೋಲ್ಲ. ಇದೂ ಸಹಾ ಹಾಗೇ ಸುಮ್ಮನೇ ಅಷ್ಟೇ...!

ಇದೆಲ್ಲಾ ಇಂದು ನಿಮ್ಮೊಂದಿಗೆ ಹೇಳೋದಕ್ಕೂ ಒಂದು ಕಾರಣವಿದೆ. ಇವತ್ತು 2025 ರ ಕೊನೆಯ ದಿನ. ನಾಳೆ ಬೆಳಗಾದರೆ ನೂತನ ವರ್ಷದ ಆರಂಭ. ನಿಮ್ಮದೇ ಸ್ನೇಹಿತರ, ಬಂಧುಗಳ, ರಕ್ತ ಸಂಬಂಧಿಗಳ ಪರಿಚಿತರ ಸಹೋದ್ಯೋಗಿಗಳ ವಲಯದಲ್ಲಿ ಯಾರೊಬ್ಬರ ಕುರಿತಂತೆ ಈ ಬಗೆಯಾದ ಸುಪ್ತ ಮನೋಭಾವನೆ ನಿಮ್ಮೊಳಗೆ ನಿಷ್ಕಾರಣವಾಗಿ ಕೊಳೆಯುತ್ತಿದ್ದರೆ ಅದಕ್ಕೆ ಇಂದೇ ತರ್ಪಣ ಕೊಡುವ ಬಗ್ಗೆ ತೆರೆದ ಮನಸ್ಸಿನಿಂದ ಒಮ್ಮೆ ಯೋಚಿಸಿ ನೋಡಲು ಇದು ಹೈ ಟೈಮ್.

ಮುಕ್ತ ಮನಸಿನಿಂದ , ಪ್ರಾಮಾಣಿಕ ಭಾವದಿಂದ, ಹೊಸ ದೃಷ್ಟಿಯಿಂದ, ಅಂಥವರತ್ತ ಒಮ್ಮೆ ನೋಡಿ. ಅದಕ್ಕೂ ಮುನ್ನ ಅಂಥಾ ವ್ಯಕ್ತಿಗಳ ಬಗ್ಗೆ, ಅವರೊಂದಿಗಿನ ಮಾನವ ಸಂಬಂಧಗಳ ಬಗ್ಗೆ ನಿಮ್ಮ ಮನದೊಳಗೆ ಕಾರಣವೇ ಇಲ್ಲದೇ ಹೊದ್ದಿರಬಹುದಾದ ಕರಿ ಮುಸುಕನ್ನು ಅನಾಮತ್ತು ಸರಿಸಿ ಶುಭ್ರ ಬೆಳದಿಂಗಳಿನ ದೃಷ್ಟಿ ಹರಿಸಿ ಮನದೊಳಗೇ ಮಂಥಿಸಿ ನೋಡಿ. ಯಾವ ಘನಕಾರಣಕ್ಕಾಗಿ ಇಷ್ಟುದಿನ ಆ ಮನುಷ್ಯನ ಬಗೆಗೆ ನನ್ನ ಮನಸ್ಸು ಹೀಗೆಲ್ಲಾ ಅಂತರ ಕಾಯ್ದುಕೊಳ್ಳುವಂತೆ ಪ್ರೇರೇಪಿಸಿತ್ತೆಂಬ ಬಗ್ಗೆ ನಿಮ್ಮ ಮನಸನ್ನೇ ಒಮ್ಮೆ ಖಾರವಾಗಿ ಪ್ರಶ್ನಿಸಿ. ಅದಕ್ಕುತ್ತರವಾಗಿ ಏನಾದರೂ ಗಂಭೀರವಾದ ಕಾರಣ ಅಥವಾ ಘನ ಉದ್ದೇಶಗಳೇ ಕಾಣದಿದ್ದಲ್ಲಿ....., ಹಿಂದೆ ಮುಂದೆ ನೋಡದೇ...ಇನ್ನುಮುಂದೆ ಎಲ್ಲರಂತೆ ಅವರನ್ನೂ ಟ್ರೀಟ್ ಮಾಡಲು ಅಡಿಯಿಡುತ್ತಲೇ ಬಹುದಿನಗಳಿಂದ ಮನದೊಳಗೆ ಕೊಳೆತಿರುವ ಅವ್ಯಕ್ತ ,ಅಸಂಬದ್ಧ ಕೊಳೆಯನ್ನು ಕೊಚ್ಚಿ ಸ್ನೇಹ ಸಂಬಂಧಗಳ ದಿಕ್ಕಿನತ್ತ ನವ ಮನ್ವಂತರದ ಅಧ್ಯಾಯ ಆರಂಭಿಸಲು ನಿಧಾನದ ಹೆಜ್ಜೆ ಆರಂಭಿಸಿ.

Ofcourse,ಹಾಗೆ ಮಾಡುವುದರಿಂದ ಯಾವ ಸಾಧನೆ, ಸಂಪತ್ತು ಸಂಭ್ರಮಗಳಿಲ್ಲದಿದ್ದರೂ ಕೊನೇಪಕ್ಷ ಅಲ್ಲಿಯವರೆಗೂ ನಮಗರಿವಿಲ್ಲದೇ ಅಂಟಿಕೊಂಡು ಬಂದಿದ್ದ ಸಣ್ಣಪುಟ್ಟ ಬಗ್ಗಡಗಳೆಲ್ಲಾ ಮನಸಿನಿಂದ ತೊಳೆದು, ಕೊಚ್ಚಿಹೋಗಿ ಅದು ಸ್ವಲ್ಪಮಟ್ಟಿಗಾದರೂ ಹಗುರಾಗಬಲ್ಲದು. ಹಾಗೆ ಮಾಡಲು ಪ್ರತಿಷ್ಠೆಗಳೆಂಬ ರೋಡ್ ಹಂಪ್ ಗಳು ಪದೇಪದೇ ನಮ್ಮನ್ನು ಅಡ್ಡಿಪಡಿಸುತ್ತಲೇ ಇರುತ್ತವೆ. ಆದರೆ ಹಳೆಯ ನಕಾರಾತ್ಮಕ ಕಳೆಗಳನ್ನೆಲ್ಲಾ ಕಿತ್ತು ಬಿಸಾಡಿ ಹೊಸಬೆಳಕಿನ ಹೊಸ ಹಾದಿಯಲ್ಲಿ ನಿರ್ಮಲ ಮನದಿಂದ ಜೀವನಪಯಣ ಸಾಗಿಸುವುದು ನಮ್ಮ ನಮ್ಮಆರೋಗ್ಯ ಮತ್ತು ನೆಮ್ಮದಿಯ ದೃಷ್ಟಿಯಿಂದ ಬೆಟರ್.

ಹೊಸವರ್ಷದ ಹೊಸಬೆಳಕು ನಮ್ಮೆಲ್ಲರಲ್ಲೂ ಧನಾತ್ಮಕ ಚಿಂತನೆಯ ಹೊಂಗಿರಣಗಳನ್ನು ಬೀರಲಿ.

2026 ರ ಹೊಸವರ್ಷದ ಶುಭಾಶಯಗಳು.

ಮರೆಯುವ ಮುನ್ನ

ಕಾರಣವೇ ಇಲ್ಲದೇ ಒಬ್ಬರನ್ನು ದ್ವೇಷಿಸುವುದು, ಅವರ ಏಳಿಗೆ ಬಗೆಗೆ ಅಸೂಯೆ ಪಡುವುದು, ಅವರ ಪ್ರತೀ ನಡೆ ನುಡಿಯಲ್ಲೂ ಕೊಂಕು ಹುಡುಕುವುದು, ಅವರು ಬಿದ್ದಾಗ ಸಂಭ್ರಮಿಸುವುದು... ಇವೆಲ್ಲವೂ ಎಲ್ಲಿ ಹುಟ್ಟುತ್ತವೆಯೋ ಆ ಜಾಗವನ್ನು ಅಲ್ಲೇ ಸುಟ್ಟುಹಾಕುವ ಪ್ರಬಲ ನೆಗೆಟೀವ್ ಆಯುಧಗಳಿದ್ದಂತೆ. ಹೀಗಾಗಿ ಇವುಗಳನ್ನು ನಮ್ಮದೆ ಗೂಡಲ್ಲಿ ಎಂಟ್ರಿ ಆಗಲು ಬಿಡಬಾರದು.

ಹಾಗೆಯೇ, ಅಹಮ್ಮು, ಅಂತಸ್ತು, ಅಸೂಯೆ, ಅಕಾರಣ, ಅಗ್ಗಳಿಕೆ, ಅಸ್ಪಷ್ಟತೆ, ಅರಿವಿನ ಕೊರತೆ, ಅಜ್ಞಾನ, ಅಂಧಕಾರ......ಈ ಯಾವುದೋ ಬಲವಾದ ಕಾರಣದಿಂದಲೇ ದೂರವಾಗಿದ್ದರೂ, ಆನಂತರ ಅಂತಹ ಸಂಬಂಧ ಕಳೆದುಕೊಳ್ಳಬಾರದಿತ್ತೆಂಬ ಪ್ರಾಮಾಣಿಕ ಪಶ್ಚಾತ್ತಾಪ ನಿಮ್ಮಲ್ಲಿ ಉಂಟಾಗಿದ್ದರೆ....ಸಮಯ ವ್ಯರ್ಥ ಮಾಡದೇ ಮುಂದಡಿ ಇಟ್ಟು ಒಣಗಿದ ಸ್ನೇಹದ ಬಳ್ಳಿಗೆ ನೀವೇ ನೀರೆರೆಯಲು ಪ್ರಯತ್ನಿಸಿ.

ಸ್ನೇಹ, ಪ್ರೀತಿ, ನಂಬಿಕೆ, ಹೊಂದಾಣಿಕೆಗಳೆಂಬ ಹೊಸಬೆಳಕಿನ ಕಿರಣಗಳು ಎಲ್ಲರ ಮನೆ– ಮನಗಳನ್ನು ಬೆಳಗಲಿ.



Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,